# ಕಾರ್ಮಿಕ ದೃಷ್ಟಿಕೋನ

ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ-ಕಮ್ಯುನಿಸ್ಟ್ SUCI(C)
ಕರ್ನಾಟಕ ರಾಜ್ಯ ಸಮಿತಿಯ ಮಾಸಿಕ ಮುಖಪತ್ರಿಕೆ

ಸಂಪುಟ: 37 ಸಂಚಿಕೆ: 05
ಜುಲೈ 2024 ಬೆಲೆ: ರೂ. 7/-


ಒಳ ಪುಟಗಳಲ್ಲಿ............


ಕಣ್ಣೆರೆಸುವ ಸುಪ್ರೀಂಕೋರ್ಟ್ ತೀರ್ಪು!....3
ವಿದೇಶಗಳಿಗೆ ಭಾರತೀಯ ಕಾರ್ಮಿಕರ ರಫ್ತು....3
ಮೂರು ಹೊಸ ಕ್ರಿಮಿನಲ್ ಕಾನೂನುಗಳು....6
ಸರ್ಕಾರದ ವಿಧೇಯ ಆರ್ಥಿಕ ತಜ್ಞರು....7
ILOನ 112ನೇ ಅಂತರರಾಷ್ಟ್ರೀಯ ಕಾರ್ಮಿಕ ಸಮ್ಮೇಳನ....10


# "ಜನರನ್ನು ಕೆಲಕಾಲ ವಂಚಿಸಬಹುದು, ಆದರೆ, ಎಲ್ಲಾ ಕಾಲಕ್ಕೂ ಅಲ್ಲ"!


## ಚುನಾವಣಾ ಫಲಿತಾಂಶದ ಪಾಠ

"ಎಲ್ಲಾ ಜನರನ್ನು ಕೆಲಕಾಲ ವಂಚಿಸಬಹುದು, ಕೆಲವು ಜನರನ್ನು ಎಲ್ಲಾ ಕಾಲಕ್ಕೂ ವಂಚಿಸಬಹುದು, ಆದರೆ ಎಲ್ಲಾ ಜನರನ್ನು ಎಲ್ಲಾ ಕಾಲಕ್ಕೂ ಏಮಾರಿಸಲಾಗುವುದಿಲ್ಲ" – ಈ ಮಾತನ್ನು ಅಬ್ರಹಾಂ ಲಿಂಕನ್ ಹೇಳಿದ್ದು ಎನ್ನಲಾಗುತ್ತದಾದರೂ ಇದರ ಮೂಲ ನಿಖರವಾಗಿ ತಿಳಿದಿಲ್ಲ. 2024ರ ಚುನಾವಣೆಯ ಫಲಿತಾಂಶವನ್ನು ಗಮನಿಸಿದಾಗ, ಪ್ರಧಾನಿ ಮೋದಿ ನೇತೃತ್ವದ ಎನ್‌ಡಿಎ ಕೂಟದ ಪಕ್ಷಗಳಿಗಂತೂ ಈ ಮಾತು ನಿಖರವಾಗಿ ಒಂದು ಆತ್ಮಾವಲೋಕನಕ್ಕೆ ಎಡೆ ಮಾಡಿಕೊಡಬೇಕು. ಅದರಲ್ಲೂ ಸಹ ನಿರ್ದಿಷ್ಟವಾಗಿ, 'ಸೋಲರಿಯದ ನಾಯಕ', 'ಪರ್ಯಾಯವೇ ಇರದ ನಾಯಕ', 'ಮೋದಿ ಅಲ್ಲದಿದ್ದರೆ ಇನ್ನಾರು?' – ಹೀಗೇ ಸ್ತುತಿಸುತ್ತಿದ್ದ, ಎಲ್ಲೆಲ್ಲೂ ಮೋದಿ ರಾರಾಜಿಸುತ್ತಿದ್ದಂತಹ ಅಬ್ಬರದ ಪ್ರಚಾರವನ್ನು ಮಾಡುತ್ತಿದ್ದ ಬಿಜೆಪಿಗೆ ಈ ಮಾತು ಹೆಚ್ಚು ಅನ್ವಯವಾಗುತ್ತದೆ. 'ಮೋದಿ 3.0' ಅಥವಾ 'ಮೋದಿ ರಾಜ್ಯ ಮತ್ತೊಂದು ಬಾರಿಗೆ', 'ಮೋದಿಯನ್ನು ತಡೆಯುವ ಶಕ್ತಿ ಯಾರಲ್ಲೂ ಇಲ್ಲ' ಎಂದು ಬಣ್ಣಿಸಿಕೊಳ್ಳುತ್ತಾ ತಮ್ಮನ್ನು ತಾವೇ ಹುರಿದುಂಬಿಸಿಕೊಳ್ಳಲು ಸಂಘ ಪರಿವಾರವೆಷ್ಟೇ ಪ್ರಯತ್ನಪಟ್ಟರೂ ಸಹ ಮೂರನೇ ಬಾರಿ ಅಧಿಕಾರಕ್ಕೆ ಏರಿದ ಎನ್‌ಡಿಎ ಕೂಟದಲ್ಲಿ ಸಂಭ್ರಮವೇನೂ ಕಾಣುತ್ತಿಲ್ಲ. ಈ ಚುನಾವಣೆಯ ವಿಶೇಷವೇನೆಂದರೆ, ಅಧಿಕಾರಕ್ಕೆ ಮತ್ತೆ ಹಿಂದಿರುಗಿದೆವು ಎಂದು ಬೀಗುತ್ತಿರುವ ಮೋದಿ ನೇತೃತ್ವದ ಬಿಜೆಪಿಯಲ್ಲಿ 'ಉಸ್ಸಪ್ಪಾ, ಅಂತೂ ಸಾಧಿಸಿದೆವು' ಎನ್ನುವ ನಿಟ್ಟುಸಿರು ಇದೆ ಮತ್ತು ಅದೇ ಸಮಯದಲ್ಲಿ ಅಧಿಕಾರಕ್ಕೆ ಬರಲಾಗದೆ ಸೋತಿರುವ ಕಾಂಗ್ರೆಸ್ ನೇತೃತ್ವದ ಇಂಡಿಯಾದೊಳಗೆ ಮೋದಿ ಸರ್ಕಾರವನ್ನು ಮಣಿಸಿದ ಸಂಭ್ರಮವಿದೆ.

**ತಾನು ಅಜೇಯ ಎಂದು ಬೀಗಿದ್ದ ಬಿಜೆಪಿ**

2014 ಮತ್ತು 2019ರ ಕಳೆದೆರಡು ಚುನಾವಣೆಗಳಿಗೆ ಹೋಲಿಸಿದರೆ ಈ ಬಾರಿಯೂ ಸಹ ಚುನಾವಣಾ ಸಂದರ್ಭದಲ್ಲಿ ಬಿಜೆಪಿಯು ತನಗೆ ಅನುಕೂಲಕರವಾಗಿರುವಂತೆ ವಾತಾವರಣವನ್ನು ನಿರ್ಮಿಸಿಕೊಂಡಿತ್ತು. ಮೊದಲಿಗೆ, ಮುದ್ರಣ ಹಾಗೂ ಎಲೆಕ್ಟ್ರಾನಿಕ್ ಸೇರಿದಂತೆ ಬಹುಪಾಲು ಎಲ್ಲಾ ಮಾಧ್ಯಮಗಳು ಮೋದಿ ಗುಣಗಾನಕ್ಕೆ ಕಟಿಬದ್ಧವಾಗಿ ನಿಂತಿದ್ದವು. ಅದಕ್ಕಾಗಿಯೇ ಅವಕ್ಕೆ 'ಮಡಿಲಿನ ಮಾಧ್ಯಮ' ಎಂಬ ಹೆಸರನ್ನು ಬಹಳ ಸೂಕ್ತವಾಗಿಯೇ ನೀಡಲಾಗಿದೆ. ಒಂದು ಕ್ಷಣವೂ ಬಿಡುವಿಲ್ಲದಂತೆ, ಅವು ಸುಳ್ಳುಗಳ ಸರಮಾಲೆಯನ್ನೇ ಬಂಡವಾಳ ಮಾಡಿಕೊಂಡು ಬಿಜೆಪಿಗಾಗಿ ಪ್ರಚಾರ ಮಾಡಿದವು. ನಿರುದ್ಯೋಗ, ಬಡತನ, ಬೆಲೆ ಏರಿಕೆ, ಅನ್ನ-ನೀರು-ಸೂರುಗಳಿಗೆ ಹಾಹಾಕಾರ, ಎಲ್ಲಾ ರೀತಿಯ ಅಸಮಾನತೆಗಳು, ಮಹಿಳೆಯರ ಮೇಲಿನ ಅಪರಾಧಗಳು ಹಾಗೂ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳ ವ್ಯಾಪಾರೀಕರಣಗಳಂತಹ ಸಮಸ್ಯೆಗಳನ್ನು ಜನರ ಕಣ್ಣಿನಿಂದ ಮರೆಮಾಡಿ, ಚುನಾವಣಾ ಪ್ರಚಾರದುದ್ದಕ್ಕೂ ಮಾಂಸ, ಮಂಗಳಸೂತ್ರ, ಮುಜ್ರಾ(ಒಂದು ಮಾದರಿಯ ಮಹಿಳೆಯರ ನೃತ್ಯ), ಮೊಘಲ್, ಮುಸಲ್ಮಾನರ ಕೋಟಾ – ಇಂತಹ ವಿಷಯಗಳನ್ನೇ ಮುನ್ನೆಲೆಗೆ ತಂದು ಪದೇಪದೇ ಗೊಂದಲವೆಬ್ಬಿಸಿ ಕೋಮುವಾದಿ ಧ್ರುವೀಕರಣಕ್ಕೆ ಅವು ಶಕ್ತ್ಯಾನುಸಾರ ಯತ್ನಿಸಿದವು. ಒಂದೇ ಒಂದು ಮುಖ್ಯ ವಾಹಿನಿಯ ಮಾಧ್ಯಮವೂ ಸಹ ಮೋದಿ ಸರ್ಕಾರವನ್ನು ಪ್ರಶ್ನಿಸಲೇ ಇಲ್ಲ. ಆದರೆ ಎಲ್ಲಾ ವಿಪಕ್ಷಗಳನ್ನು ಚೆನ್ನಾಗಿ ಹಣಿದವು. ಎರಡನೆಯದಾಗಿ, ವಿರೋಧಿಗಳನ್ನು ವಿವಿಧ ರೀತಿಯಲ್ಲಿ ಬಗ್ಗುಬಡಿಯಲು ಮೋದಿ ಸರ್ಕಾರವು ಇಡಿ, ಐಟಿ, ಸಿಬಿಐಗಳನ್ನು ದುರುಪಯೋಗ ಮಾಡಿಕೊಂಡದ್ದು. ವಿವಿಧ ರಾಜ್ಯಗಳಲ್ಲಿ, ಅಕ್ರಮ ಹಣ ವರ್ಗಾವಣೆ, ವಿವಿಧ ರೀತಿಯ ಭ್ರಷ್ಟಾಚಾರಗಳು ಹಾಗೂ ಇನ್ನಿತರೆ ಹಗರಣಗಳಲ್ಲಿ ಸಿಲುಕಿಕೊಂಡ ವಿರೋಧಪಕ್ಷಗಳಿಗೆ ಸೇರಿದ ಹಲವರನೇಕರು ನೇರವಾಗಿ ಬಿಜೆಪಿಯನ್ನೇ ಸೇರಿದರು ಅಥವಾ ಎನ್‌ಡಿಎ ಅಂಗಪಕ್ಷಗಳನ್ನು ಸೇರಿ ಮೋದಿ ಸರ್ಕಾರದ ಬಲವನ್ನು ವೃದ್ಧಿಸಿದರು. ಬಿಜೆಪಿಯ ಒಳಗೆ ಬಂದ ಕೂಡಲೇ ಅವರೆಲ್ಲರೂ ಭ್ರಷ್ಟಾಚಾರದ ಆರೋಪದಿಂದ ಮುಕ್ತಿ ಪಡೆದು ಕಳಂಕರಹಿತರಾಗಿಬಿಟ್ಟಿದ್ದರು. ಜೊತೆಯಲ್ಲಿ, ತನಗೆ ಸವಾಲೊಡ್ಡಬಹುದಾದ ವಿಪಕ್ಷಗಳ ಮುಖಂಡರನ್ನು ಈ ಸಂಸ್ಥೆಗಳ ಬೆಂಬಲದಿಂದ ಜೈಲಿಗೆ ಅಟ್ಟಿದ್ದು ಬಿಜೆಪಿಯ ಬಲವನ್ನು ಇಮ್ಮಡಿಸಿತ್ತು. ಮೂರನೆಯದಾಗಿ, ಸುಪ್ರೀಂ ಕೋರ್ಟ್‌ನಿಂದ ತಡವಾಗಿ ನಿಷೇಧಗೊಂಡ 'ಚುನಾವಣಾ ಬಾಂಡ್' ಗಳ ಬಳಕೆಯಿಂದ ಏಳು ವರ್ಷಗಳಲ್ಲಿ ಸಹಸ್ರಾರು ಕೋಟಿ ರೂಪಾಯಿ ದೇಣಿಗೆಯನ್ನು ಸಂಗ್ರಹಿಸಿಕೊಂಡು ವಿಶ್ವದ ಅತಿ ಶ್ರೀಮಂತ ಪಕ್ಷಗಳಲ್ಲಿ ಒಂದು ಎನಿಸಿತ್ತು ಬಿಜೆಪಿ. ನಾಲ್ಕನೆಯದಾಗಿ, ಉತ್ತರ ಪ್ರದೇಶ, ಮಧ್ಯಪ್ರದೇಶದಂತಹ ರಾಜ್ಯಗಳು ಸೇರಿದಂತೆ

2ನೇ ಪುಟಕ್ಕೆ....



"ದಮನಕಾರಿ ವರ್ಗದ ಯಾವ ನಿರ್ದಿಷ್ಟ ಪ್ರತಿನಿಧಿಗಳು ಸಂಸತ್ತಿನಲ್ಲಿ ತಮ್ಮನ್ನು ಪ್ರತಿನಿಧಿಸಬೇಕು ಮತ್ತು ದಮನಿಸಬೇಕು ಎಂಬುದನ್ನು ನಿರ್ಧರಿಸಲು ಪ್ರತಿ ಕೆಲವು ವರ್ಷಗಳಿಗೊಮ್ಮೆ ದಮನಕ್ಕೊಳಗಾದವರಿಗೆ ಅವಕಾಶ ನೀಡಲಾಗುವುದು!"

–ಕಾರ್ಲ್ ಮಾರ್ಕ್ಸ್

# ವಿದ್ಯಾರ್ಥಿಗಳಿಗೆ ಬ್ರಹ್ಮಾಂಡ ವಂಚನೆ ! – ನೀಟ್(ಯುಜಿ) ಪರೀಕ್ಷೆ 2024

NEET (UG)ಯು ಭಾರತದಲ್ಲಿ ವೈದ್ಯಕೀಯ ಕೋರ್ಸ್ (MBBS) ಗಾಗಿ ನಡೆಯುವ ರಾಷ್ಟ್ರೀಯ ಪ್ರವೇಶ ಪರೀಕ್ಷೆಯಾಗಿದೆ. ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (NTA) ಈ ಪರೀಕ್ಷೆಯನ್ನು ನಡೆಸುತ್ತದೆ. ಎನ್‌ಟಿಎಯು ಈ ಸಾಲಿನ ನೀಟ್ ಯುಜಿ ಫಲಿತಾಂಶಗಳನ್ನು 4 ಜೂನ್ 2024 ರಂದು ಘೋಷಿಸಿತು. ಈ ಬಾರಿ 24 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಫಲಿತಾಂಶಗಳ ಪ್ರಕಟಣೆಯ ಸಮಯವು ಅನುಮಾನವನ್ನು ಸೃಷ್ಟಿಸುತ್ತದೆ. ಜೂನ್ 14 ರಂದು ಘೋಷಣೆ ಮಾಡಲು ನಿರ್ಧರಿಸಲಾಗಿತ್ತು, ಆದರೆ ಅದನ್ನು 10 ದಿನಗಳ ಮೊದಲೇ, ಮತ ಎಣಿಕೆ ನಡೆಯುತ್ತಿದ್ದ ಜೂನ್ 4 ರಂದೇ ಏಕೆ ಘೋಷಿಸಲಾಯಿತು? ರಾಷ್ಟ್ರೀಯ ಮಾಧ್ಯಮಗಳು ಈ ಬಗ್ಗೆ ಗಮನ ಹರಿಸಬಾರದೆಂಬುದು ಇದರ ಹಿಂದಿರುವ ತಂತ್ರವೇ? NEET-UG 2024ರ ಫಲಿತಾಂಶಗಳು ಭಾರತದಲ್ಲಿ ವೈದ್ಯಕೀಯ ಶಿಕ್ಷಣ ಕ್ಷೇತ್ರದಲ್ಲಿನ ಅತಿದೊಡ್ಡ ಹಗರಣಗಳಲ್ಲಿ ಒಂದಾಗಿದೆ.

ಅತ್ಯಂತ ನಿರ್ಲಜ್ಜ ರೀತಿಯಲ್ಲಿ ಕಾರ್ಯನಿರ್ವಹಿಸಿರುವ NTA ಕುರಿತಾದ ವಿವರವಾದ ವಿಶ್ಲೇಷಣೆಯು ಹಗರಣ ಮತ್ತು ಅಕ್ರಮಗಳ ಹಲವು ಅಂಶಗಳನ್ನು ಬಹಿರಂಗಪಡಿಸುತ್ತದೆ. ಎನ್‌ಟಿಎಯು ವಿದ್ಯಾರ್ಥಿಗಳ ಭವಿಷ್ಯದ ಜೊತೆ ಆಟವಾಡುತ್ತಿದೆ.




NEET (UG) 2024 ರ ಫಲಿತಾಂಶಗಳಲ್ಲಿ 67 ವಿದ್ಯಾರ್ಥಿಗಳು 100% ಅಂಕಗಳೊಂದಿಗೆ, ಅಂದರೆ 720 ರಲ್ಲಿ 720 ಪಡೆದು ಮೊದಲ ಶ್ರೇಣಿಯನ್ನು ಪಡೆದಿದ್ದಾರೆ. ಇದು NEET (UG) ಪರೀಕ್ಷೆಯ ಇತಿಹಾಸದಲ್ಲಿ

4ನೇ ಪುಟಕ್ಕೆ....

# ಅಗ್ನಿವೀರ್

## ಕಡೆಗಣಿಸಲ್ಪಟ್ಟ ಮತ್ತು ವಂಚಿತ ಯುವಕರ ನೋವಿನಗಾಥೆ

ಕಳೆದ ಜನವರಿ 17ರಂದು ಜಮ್ಮು ಮತ್ತು ಕಾಶ್ಮೀರದ ರಾಜೋರಿ ಜಿಲ್ಲೆಯ ಎಲ್‌ಓಸಿ ಬಳಿ ಸಂಭವಿಸಿದ ನೆಲಬಾಂಬ್ ಸ್ಫೋಟದಲ್ಲಿ ಅಜೋಯ್ ಸಿಂಗ್ ಎಂಬ ಅಗ್ನಿವೀರ್ ಕರ್ತವ್ಯದಲ್ಲಿದ್ದಾಗಲೇ ಸಾವನ್ನಪ್ಪಿದರು. ಅಜೋಯ್ ಸಿಂಗ್ ಪಂಜಾಬಿನ ಲುಧಿಯಾನ ಜಿಲ್ಲೆಯ ರಾಮಗರ್ ಸರ್ದಾರನ್ ಗ್ರಾಮದ ಅತ್ಯಂತ ಹಿಂದುಳಿದ ಕುಟುಂಬಕ್ಕೆ ಸೇರಿದವರು. ಅವರ ತಂದೆ ಒಬ್ಬ ದಿನಗೂಲಿ ನೌಕರ ಮತ್ತು ತಾಯಿ ಗೃಹಿಣಿ. ಮತ್ತೊಬ್ಬ ಅಗ್ನಿವೀರ್ ಅಮೃತ್ ಪಾಲ್ ಸಿಂಗ್ ಅವರು ಮಾಡಿಕೊಂಡ ಸ್ವಯಂಕೃತ ಗಾಯದಿಂದಾಗಿ 23 ಅಕ್ಟೋಬರ್ 2023 ರಂದು ಜಮ್ಮು ಕಾಶ್ಮೀರದಲ್ಲಿ ಸಾವನ್ನಪ್ಪಿದ್ದರು. ಕೆಲಸದ ಬಗ್ಗೆ ಇರುವ ತೀವ್ರ ಹತಾಶೆಯಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಅವರ ಕೆಲವು ಸ್ನೇಹಿತರು ಮತ್ತು ಸಂಬಂಧಿಕರು ಅಭಿಪ್ರಾಯಪಟ್ಟಿದ್ದಾರೆ. ಇದು ಸ್ವಯಂಕೃತ ಗಾಯಗಳಿಂದ ಸಂಭವಿಸಿದ ಸಾವಾಗಿರುವುದರಿಂದ ಯಾವುದೇ ಸೇನಾ ಗೌರವ ಅಥವಾ ಸೇನಾ ಅಂತ್ಯಕ್ರಿಯೆಯನ್ನು ಆದೇಶಿಸಿಲ್ಲ ಎಂದು ಸೇನಾಧಿಕಾರಿಗಳು ಹೇಳಿದ್ದಾರೆ. ಅವರ ಮೃತ ದೇಹವನ್ನು ಕೂಡ ಖಾಸಗಿ ಆಂಬುಲೆನ್ಸ್ ನಲ್ಲಿ ಸ್ವಗ್ರಾಮಕ್ಕೆ ತರಲಾಯಿತು.

**ಅಗ್ನಿಪಥ್ ಯೋಜನೆ**

ಈ ಅಗ್ನಿವೀರರು ಎಂದರೆ ಯಾರು? 2020 ರಲ್ಲಿ ಬಿಜೆಪಿ ಸರ್ಕಾರ ಘೋಷಿಸಿದ ಅಗ್ನಿಪಥ್ ಹೆಸರಿನ ಯೋಜನೆಯಡಿ ರಕ್ಷಣಾ ಸೇವೆಗಳ ಮೂರು ಶಾಖೆಗಳಾದ ಭೂಸೇನೆ, ನೌಕಾಪಡೆ ಮತ್ತು ವಾಯುಪಡೆಯಲ್ಲಿ ನಾಲ್ಕು ವರ್ಷಗಳ ಕಾಲ ತಾತ್ಕಾಲಿಕ ಉದ್ಯೋಗದಲ್ಲಿದ್ದವರೇ ಈ ಅಗ್ನಿವೀರರು. ಕೇವಲ 17 ರಿಂದ 20 ವರ್ಷದ ಯುವಕರು ಮಾತ್ರ ಈ ಯೋಜನೆಯಡಿ ನೇಮಕಾತಿಗೆ ಅರ್ಹರಾಗಿರುತ್ತಾರೆ. ಅಗ್ನಿವೀರರ ವೇತನವನ್ನು ಮೊದಲ ವರ್ಷಕ್ಕೆ ರೂ.30 ಸಾವಿರ ಮತ್ತು ನಾಲ್ಕನೇ ವರ್ಷದಲ್ಲಿ 40 ಸಾವಿರದಂತೆ ನಿಗದಿ ಮಾಡಲಾಗಿದೆ. ಇದು ಖಾಯಂ ರಕ್ಷಣಾ ಸಿಬ್ಬಂದಿಗಿರುವ ವೇತನಕ್ಕಿಂತ ತುಂಬಾ ಕಡಿಮೆ. ಈ ಯೋಜನೆಯ ನಿಯಮಗಳ ಪ್ರಕಾರ ಸಂಬಳದ ಶೇ.30ರಷ್ಟನ್ನು ದೇಣಿಗೆ ನಿಧಿಯ ರೂಪದಲ್ಲಿ ಇಡಬೇಕು. ಇದಕ್ಕೆ ಸರ್ಕಾರವು ಸಮಾನ ಮೊತ್ತವನ್ನು ಠೇವಣಿ ಮಾಡುತ್ತದೆ. ಉದ್ಯೋಗದ ನಾಲ್ಕು ವರ್ಷಗಳ ಅವಧಿ ಪೂರ್ಣಗೊಂಡ ನಂತರ ಪ್ರತಿ ಅಗ್ನಿವೀರನು 11 ಲಕ್ಷ ನಗದು ರೂಪಾಯಿಗಳೊಂದಿಗೆ ಪೂರ್ಣಗೊಂಡ ಪ್ರಮಾಣ ಪತ್ರವನ್ನು ಪಡೆಯುತ್ತಾನೆ.

ಒಂದು ವೇಳೆ ಯಾವುದೇ

5ನೇ ಪುಟಕ್ಕೆ....

# ಚುನಾವಣಾ ಫಲಿತಾಂಶದ ಪಾಠ

...1ನೇ ಪುಟದಿಂದ

12ಕ್ಕೂ ಹೆಚ್ಚು ರಾಜ್ಯಗಳಲ್ಲಿ ಬಿಜೆಪಿಯು ಅಧಿಕಾರದಲ್ಲೂ ಇತ್ತು. ಐದನೆಯದಾಗಿ, ಚುನಾವಣೆಯ ಇಡೀ ಪ್ರಕ್ರಿಯೆಯ ಸಮಯದಲ್ಲಿ ಚುನಾವಣಾ ಆಯೋಗವು ಪಕ್ಷಪಾತಿಯಾಗಿ ನಡೆದುಕೊಂಡ ರೀತಿಯು ಸಹ ಗೌಪ್ಯವಾಗೇನೂ ಉಳಿಯಲಿಲ್ಲ. ನಿಷ್ಪಕ್ಷಪಾತ ಚುನಾವಣೆಯನ್ನು ನಡೆಸುವ ತನ್ನ ಕನಿಷ್ಠ ಜವಾಬ್ದಾರಿಯನ್ನೂ ನಿರ್ವಹಿಸದೆ ಆಯೋಗವು ಸರ್ಕಾರದ ಪರ ವಕಾಲತ್ತು ವಹಿಸಿ ನಡೆದುಕೊಂಡ ರೀತಿಯು ಅತ್ಯಂತ ಪ್ರಶ್ನಾರ್ಹವಾಗಿದೆ. ಈವಿಎಂಗಳ ತಟಸ್ಥತೆಯ ಬಗ್ಗೆಯೂ ಸಹ ಹಲವು ರೀತಿಯ ಪ್ರಶ್ನೆಗಳು ಎದ್ದಿದ್ದನ್ನು, ಮತದಾನದ ಪ್ರಮಾಣವನ್ನು ಘೋಷಿಸಲು ಆಯೋಗವು ವಿಪರೀತ ವಿಳಂಬ ಮಾಡಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ನಾಲ್ಕು ಹಂತಗಳ ಮತದಾನವಾದ ಬಳಿಕ ಚುನಾವಣಾ ಆಯೋಗವು ಘೋಷಿಸಿದ ಪರಿಷ್ಕೃತ ಅಂತಿಮ ಮತದಾನದ ಅಂಕಿಅಂಶಗಳಲ್ಲಿ ಶೇ.6ರಷ್ಟು ಅಸಹಜ ಏರಿಕೆ ಇತ್ತು. ಕೆಲವು ಪ್ರತಿಷ್ಠಿತ ಮಾಧ್ಯಮ ಸಂಸ್ಥೆಗಳು ವರದಿ ಮಾಡಿದ ಪ್ರಕಾರ ಮತದಾನದ ಪ್ರಾಥಮಿಕ ಅಂಕಿಅಂಶಗಳು ಮತ್ತು ಪರಿಷ್ಕೃತ ಅಂಕಿಅಂಶಗಳ ನಡುವೆ ಸುಮಾರು 1.07 ಕೋಟಿ ಮತಗಳಷ್ಟು ಅಂತರ ಕಾಣಿಸಿತು. ಅಂದರೆ, ಆ ಸಂದರ್ಭದಲ್ಲಿ ಮತದಾನ ಮುಗಿದಿದ್ದ 379 ಸೀಟುಗಳಿಗೆ ಸರಾಸರಿ ಪ್ರತಿಕ್ಷೇತ್ರಕ್ಕೆ 28000 ಮತಗಳು ಏರುಪೇರಾಗಿದ್ದವು. ಹಿಂದೆ ಯಾವ ಚುನಾವಣೆಯಲ್ಲೂ ಈ ಪ್ರಮಾಣದ ವ್ಯತ್ಯಾಸವಾಗಲೀ ಅಥವಾ ಅಂಕಿ ಅಂಶಗಳನ್ನು ಘೋಷಿಸಲು ಈ ಬಾರಿ ಆದಷ್ಟು ವಿಳಂಬವಾಗಲೀ – ಈ ಎರಡೂ ಆಗಿರಲಿಲ್ಲ. ಆರನೆಯದಾಗಿ, ಷೇರುಪೇಟೆ ಸೂಚ್ಯಂಕಗಳು ಏರು ಗತಿಯಲ್ಲಿದ್ದವು. ಬಿಎಸ್‌ಸಿ ಮತ್ತು ನಿಫ್ಟಿ–50 ಸೂಚ್ಯಂಕಗಳಂತೂ ಕ್ರಮವಾಗಿ 79,000 ಮತ್ತು 24,000 ಅಂಕಗಳ ಕಡೆಗೆ ದಾಪುಗಾಲು ಹಾಕಿ ಮುನ್ನುಗ್ಗುತ್ತಿದ್ದವು. ಅಂದರೆ ಹೂಡಿಕೆದಾರರು ಬಹಳ 'ಪ್ರಸನ್ನ ಚಿತ್ತರಾಗಿ' ದೊಡ್ಡಮಟ್ಟದಲ್ಲಿ ಹೂಡಿಕೆ ಮಾಡುತ್ತಿದ್ದರು ಎಂದರ್ಥವಲ್ಲವೇ!

ತನ್ನ ಪರವಾಗಿ ಇಷ್ಟೆಲ್ಲಾ ಅನುಕೂಲಕರ ಅಂಶಗಳನ್ನು ಹೊಂದಿದ್ದ ಬಿಜೆಪಿಯು ಈ ಬಾರಿಯ ಚುನಾವಣೆಯಲ್ಲಿ 2019ಕ್ಕಿಂತ 63 ಸ್ಥಾನಗಳನ್ನು ಕಡಿಮೆ ಪಡೆದಿದೆ ಮತ್ತು ಒಟ್ಟಾರೆಯಾಗಿ, ಎನ್‌ಡಿಎ 60 ಸ್ಥಾನಗಳನ್ನು ಕಳೆದುಕೊಂಡಿದೆ. ಹೀಗೇ, ಬಿಜೆಪಿ 'ಗೆದ್ದು ಸೋತಿದೆ'. ಚುನಾವಣೆಗೂ ಮುನ್ನವೇ '400ನ್ನು ದಾಟಿಸಿ' (ಚಾರ್ ಸೌ ಪಾರ್) ಎನ್ನುವ ಮಾತನ್ನು ಮೋದಿ ಮತ್ತು ಅವರ ಪರಿವಾರ ಪದೇಪದೇ ಉಚ್ಛರಿಸಿ, ಎಲ್ಲಾ ಮುಖ್ಯವಾಹಿನಿಯ ಮಾಧ್ಯಮಗಳು ಅದನ್ನೇ ಜೂನ್ 4ರವರೆಗೂ ಪುನರ್‌ಪಠಿಸುತ್ತಲೇ ಇದ್ದವು. ಆ ಪ್ರಚಾರದ ಅಬ್ಬರ ಎಷ್ಟರಮಟ್ಟಿಗೆ ಇತ್ತೆಂದರೆ, ಜೂನ್ 1ರಂದು ಪ್ರಕಟವಾದ ಎಲ್ಲಾ ಮತಗಟ್ಟೆ ಸಮೀಕ್ಷೆಗಳು 350+ ಸ್ಥಾನಗಳನ್ನು ಬಿಜೆಪಿ+ ಒಕ್ಕೂಟವು ಗೆದ್ದೇ ಗೆಲ್ಲುತ್ತದೆ ಎಂದು ಘೋಷಿಸಿ ಬಿಟ್ಟಿದ್ದವಲ್ಲಾ! ಆ ಸಮೀಕ್ಷೆಗಳನ್ನು ಮಾಡಿದ ಎಲ್ಲಾ ಸಂಸ್ಥೆಗಳು ಈಗ ಮಕಾಡೆ ಬಿದ್ದಿವೆ. ಚುನಾವಣಾ ಸಮೀಕ್ಷೆಗಳಾಗಲೀ ಅಥವಾ ಮತಗಟ್ಟೆ ಸಮೀಕ್ಷೆಗಳಾಗಲೀ – ಅವ್ಯಾವುವೂ ನಂಬಲರ್ಹವಲ್ಲ ಎಂದು ಮತ್ತೊಮ್ಮೆ ಸಾಬೀತಾದಂತಾಗಿದೆ.

ಅಂತೂ ಏದುಸಿರುಬಿಡುತ್ತಾ, ಇತರ ಪಕ್ಷಗಳ ಬೆಂಬಲ ಪಡೆದೇ ಮೋದಿ 3.0 ಎನ್ ಡಿಎ ಸರ್ಕಾರವು ಅಸ್ತಿತ್ವಕ್ಕೆ ಬರಲು ಅದು ಇಷ್ಟು ಶ್ರಮಪಡಬೇಕಾದರೆ ಅದಕ್ಕೆ ಕಾಂಗ್ರೆಸ್ ನಡೆಸಿದ ಎರಡು ಯಾತ್ರೆಗಳು ಕಾರಣ ಎಂದೋ, ಇಂಡಿಯಾ ಮೈತ್ರಿಕೂಟ ಕಾರಣ ಎಂದೋ, ವಿಪಕ್ಷಗಳ ಹೊಂದಾಣಿಕೆ ಮತ್ತು ಜಂಟಿ ಕಾರ್ಯಾಚರಣೆ ಕಾರಣವೆಂದೋ, 'ಸಂವಿಧಾನ ಉಳಿಸಿ' ಎನ್ನುವ ಪ್ರಚಾರ ಕಾರಣವೆಂದೋ ಮಾಧ್ಯಮಗಳು ವಿಶ್ಲೇಷಣೆ ನಡೆಸಿವೆ.

### ಎನ್‌ಡಿಎ ಅಥವಾ ಇಂಡಿಯಾ – ಎರಡೂ ಜನರ ಪರ್ಯಾಯಗಳಲ್ಲ

ಚುನಾವಣಾ ಫಲಿತಾಂಶವನ್ನು ವರ್ಗ ದೃಷ್ಟಿಕೋನದಿಂದ ವಿಶ್ಲೇಷಿಸಿ ಅದರಿಂದ ಜನಸಾಮಾನ್ಯರು ಹಾಗೂ ಕಾರ್ಮಿಕ ವರ್ಗವು ಏನನ್ನು ಗ್ರಹಿಸಬೇಕು ಎನ್ನುವುದು ಬಹಳ ಮುಖ್ಯ. ಏಕೆಂದರೆ ಕಟ್ಟಕಡೆಯ ವಿಶ್ಲೇಷಣೆಯಲ್ಲಿ ಎನ್‌ಡಿಎ ಆಗಲಿ ಅಥವಾ ಇಂಡಿಯಾ ಆಗಲಿ – ಇವೆರಡೂ ಸಹ ಜನತೆಯ ನೈಜ ಪರ್ಯಾಯಗಳಲ್ಲ. ಅವೆರಡು ಕೂಟಗಳು ದೇಶದ ಬಂಡವಾಳಗಾರರ ಪರ್ಯಾಯಗಳೇ ಎನ್ನುವುದನ್ನು ಮರೆಯಲಾಗದು.

1. ಕಿವಿಗಡಚಿಕ್ಕುವ ಅಬ್ಬರದ ವಾಗ್ಝರಿಯಿಂದ, ಜಾತಿ, ಕೋಮು, ಧರ್ಮಗಳನ್ನು ಆಧರಿಸಿ ಜನರ ಮಧ್ಯೆ ಬಿರುಕನ್ನು ಉಂಟುಮಾಡುವ ಮಾತುಗಳ ಮೂಲಕ ಕಳೆದ ಹತ್ತು ವರ್ಷಗಳಲ್ಲಿ ಮೋದಿ ಆಡಳಿತವು ದೇಶದಲ್ಲಿ ಸೃಷ್ಟಿಸಿದ್ದ ದುರವಸ್ಥೆಯನ್ನು ಜನರು ಮರೆಯುವಂತೆ ಮಾಡಬಹುದು ಎಂಬ ಬಿಜೆಪಿ ಲೆಕ್ಕಾಚಾರವನ್ನು ಚುನಾವಣಾ ಫಲಿತಾಂಶ ತಲೆಕೆಳಗಾಗಿಸಿದೆ. ತಮ್ಮ ದೃಷ್ಟಿಯಿಂದ ಎಷ್ಟೇ ಮಸುಕಾಗಿಸಲು ಪ್ರಯತ್ನಿಸಿದರೂ ಸಹ ಯುವಜನರಿಗೆ ಉದ್ಯೋಗ, ರೈತರಿಗೆ ಬೆಂಬಲ ಬೆಲೆ, ಮಹಿಳೆಯರಿಗೆ ಸಮಾನತೆಯ ಬದುಕು, ಕಾರ್ಮಿಕರಿಗೆ ತಮ್ಮ ಕೆಲಸ ಮತ್ತು ತಮ್ಮ ಹಕ್ಕುಗಳು, ವಿದ್ಯಾರ್ಥಿಗಳಿಗೆ ಸಾರ್ವಜನಿಕ ಶಿಕ್ಷಣದ ಉಳಿವು ಮತ್ತು ಪೂರಕ ಶೈಕ್ಷಣಿಕ ವ್ಯವಸ್ಥೆ – ಇವುಗಳು ಚುನಾವಣೆಯಲ್ಲಿ ಬಹು ಮುಖ್ಯ ಪ್ರಶ್ನೆಗಳಾಗಿದ್ದವು. ಕಾಂಗ್ರೆಸ್ ನಡೆಸಿದ್ದ ವ್ಯಾಪಕ ಭ್ರಷ್ಟಾಚಾರ, ದುರಾಡಳಿತ ಮತ್ತು ಸ್ವಜನ ಪಕ್ಷಪಾತದಿಂದ ಬೇಸತ್ತಿದ್ದ ಜನ 2014ರಲ್ಲಿ ಮೋದಿ ನೇತೃತ್ವದ ಬಿಜೆಪಿಗೆ ಅಧಿಕಾರವನ್ನು ಕೊಟ್ಟು ಹತ್ತು ವರ್ಷ ಸಮಯಾವಕಾಶವನ್ನು ಕೊಟ್ಟರೂ ಸಹ ಮಂದಿರ–ಮಸೀದಿ, ಹಿಂದೂ–ಮುಸಲ್ಮಾನದಂತಹ ವಿಚ್ಛಿದ್ರಕಾರಿ ಅಜೆಂಡಾಗಳ ಬಗ್ಗೆಯೇ ಬಿಜೆಪಿಯ ಗಮನವಿದೆಯೇ ವಿನ: ಬದುಕಿನ ನೈಜ ಸಮಸ್ಯೆಗಳತ್ತ ಅಲ್ಲ ಎನ್ನುವುದು ಜನತೆಯ ತೀವ್ರ ಅಸಮಾಧಾನಕ್ಕೆ ಮುಖ್ಯ ಕಾರಣವಾಗಿತ್ತು. ಅದಾನಿ, ಅಂಬಾನಿಯಂತಹ ಬಂಡವಾಳಗಾರರನ್ನು ಓಲೈಸುವುದರಲ್ಲಿ ತಲ್ಲೀನವಾಗಿದ್ದ ಮೋದಿ ಸರ್ಕಾರಕ್ಕೆ ಜನಸಾಮಾನ್ಯರ ಬವಣೆ ತಟ್ಟಲೇ ಇಲ್ಲ. ಜನತೆಯ ಸಮಸ್ಯೆಗಳ ಬಗ್ಗೆ ಬಿಜೆಪಿ ಕುರುಡಾಗಿತ್ತು ಮತ್ತು ಜನದನಿಯನ್ನು ಕೇಳಲು ಕಿವುಡಾಗಿತ್ತು. ಹೀಗಾಗಿ 2024ರ ಚುನಾವಣೆಯ ಹೊತ್ತಿಗೆ ಕಳೆದೆರಡು ಚುನಾವಣೆಗಳಲ್ಲಿ ಬಿಜೆಪಿಗೆ ಅಖಂಡ ಬೆಂಬಲ ನೀಡಿದ್ದ ಬಹುದೊಡ್ಡ ದುಡಿಯುವ ಜನ ವಿಭಾಗದ ಅಭಿಪ್ರಾಯವು ಬಹಿರಂಗವಾಗಿ ಅಲ್ಲದಿದ್ದರೂ ಅಂತರಂಗದಲ್ಲಿ ಮೋದಿ ಸರ್ಕಾರದ ವಿರುದ್ಧವಾಗಿ ರೂಪುಗೊಂಡಿತ್ತು.

2. ಮೊದಲೆರಡು ಹಂತದ ಮತದಾನ ಮುಗಿಯುತ್ತಿದ್ದಂತೆಯೇ, ಪ್ರಾಯಶ: ಬಿಜೆಪಿಗೆ ಜನಾಭಿಪ್ರಾಯದ ಸುಳಿವು ಸಿಕ್ಕಿರಬೇಕು. ಆದ್ದರಿಂದಲೇ, ಅದು 'ಇದು ಭಾರತದ ಸುವರ್ಣ ಕಾಲ', '2047ಕ್ಕೆ ವಿಕಸಿತ ಭಾರತ' ಎನ್ನುವ ಮಾತುಗಳನ್ನೆಲ್ಲಾ ಬದಿಗೊತ್ತಿ, ಮೋದಿ ತಮ್ಮ ಮೂಲ ಅಜೆಂಡಾ ಆಗಿರುವ 'ಹಿಂದೂ–ಮುಸಲ್ಮಾನ'ಕ್ಕೆ ಮೊರೆ ಹೋದದ್ದು. ಈ ಬಾರಿ ಚುನಾವಣೆಯಲ್ಲಿ ಕೋಮು ವಿದ್ವೇಷವನ್ನು ಹಬ್ಬಿಸುವ ಪ್ರಚಾರವು ಲಾಭ ತಂದುಕೊಡುತ್ತದೆ ಎನ್ನುವ ಕುತ್ಸಿತ ಯೋಜನೆಗೆ ಬಹುದೊಡ್ಡ ಸಂಖ್ಯೆಯ ಜನರು ಬ್ರೇಕ್ ಹಾಕಿದ್ದಾರೆ. ಜನವರಿ ತಿಂಗಳಿನಲ್ಲಿ ಬಹುದೊಡ್ಡ ಬಾಜಾಭಜಂತ್ರಿಯೊಂದಿಗೆ ಅಪೂರ್ಣ ರಾಮಮಂದಿರದ ಗರ್ಭಗುಡಿಯ ಉದ್ಘಾಟನೆಯನ್ನು ನಡೆಸಿದರೂ ಸಹ ಬಿಜೆಪಿಗೆ ಲಾಭ ದೊರಕದೆ ಅಯೋಧ್ಯೆಯು ಸೇರಿರುವ ಪೈಜಾಬಾದ್ ಕ್ಷೇತ್ರದಲ್ಲಿಯೇ ಬಿಜೆಪಿಯು ಹೀನಾಯವಾಗಿ ಸೋತಿದ್ದು ಇದಕ್ಕೊಂದು ತಾಜಾ ಉದಾಹರಣೆ.

3. ಚುನಾವಣಾ ಫಲಿತಾಂಶ ಘೋಷಣೆಯಾದ 10 ದಿನಗಳ ನಂತರ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್, ಸಂಘದ ಒಂದು ವಾರ್ಷಿಕ ಸಮಾಲೋಚನಾ ಸಭೆಯಲ್ಲಿ, 'ಬಿಜೆಪಿಯ ಅಹಂಕಾರ'ವನ್ನು ಕುರಿತು ಆಡಿದ ಮಾತನ್ನು, ಬಿಜೆಪಿಯ ಬಗ್ಗೆ ಮತ್ತೂ ನಿರ್ದಿಷ್ಟವಾಗಿ ಮೋದಿ–ಶಾ ಜೋಡಿಯ ಕಾರ್ಯವೈಖರಿಯ ಬಗ್ಗೆ ಅದು ಅವರ ಟಿಪ್ಪಣಿಯಾಗಿತ್ತು ಎಂದು ವ್ಯಾಪಕವಾಗಿ ಅರ್ಥೈಸಲಾಗುತ್ತಿದೆ. 'ಮೋದಿಯವರ ಏಕವ್ಯಕ್ತಿ ಮೆರೆದಾಟ ಮತ್ತು ಅಹಂಕಾರವನ್ನು ಆರ್‌ಎಸ್‌ಎಸ್ ಸಹ ಸಹಿಸುವುದಿಲ್ಲ' ಎಂದು ಪ್ರಗತಿಪರರು ಎನ್ನಿಸಿಕೊಂಡವರೂ ಸಹ ಸಂಭ್ರಮಿಸಿದ್ದು ಕಾಣಿಸುತ್ತಿದೆ. ಆದರೆ, ಬಿಜೆಪಿಯ ಗುರು ಆಗಿರುವ ಆರ್‌ಎಸ್‌ಎಸ್ ತನ್ನ ಅವತ್ತಿನ ಮುಖ್ಯಸ್ಥರ ಮೂಲಕ ಕಾಲಕಾಲಕ್ಕೆ ನಿರ್ದಿಷ್ಟವಲ್ಲದ ಇಂತಹ ಅಸ್ಪಷ್ಟ ಮಾತುಗಳನ್ನು ಹೇಳಿಸುವುದು ಅದರ ಒಟ್ಟಾರೆ ರಾಜಕಾರಣದ ಅನಿವಾರ್ಯ ಭಾಗವಾಗಿರುವಂತಿದೆ. ಈ ಹಿಂದೆಯೂ ಹಲವು ಬಾರಿ, ಅಸ್ಪಷ್ಟವಾಗಿರುವ ಮಾತುಗಳನ್ನಾಡಿ ಅವುಗಳನ್ನು ಎಲ್ಲಾ ದಿಕ್ಕುಗಳಿಂದಲೂ ವ್ಯಾಖ್ಯಾನ ಮಾಡಿಸುತ್ತಾ ಇಡೀ ದೇಶದಲ್ಲಿರುವ ತನ್ನ ಕಾರ್ಯಕರ್ತರ ಪಡೆ ಮತ್ತು ಜನರನ್ನು ಗೊಂದಲದಲ್ಲಿ ಮುಳುಗಿಸಿರುವಂತೆ ಕಾಣಿಸುತ್ತದೆ. ಆಯಾ ಕಾಲದ ತತ್‌ಕ್ಷಣದ ರಾಜಕೀಯ ಉದ್ದೇಶವನ್ನು ಈಡೇರಿಸಿಕೊಳ್ಳುವುದೇ ಆರ್‌ಎಸ್‌ಎಸ್‌ನ ರಾಜಕಾರಣದ ತಂತ್ರವಾಗಿದೆ. ಈ ಹಿಂದೆ, 2019ರಲ್ಲಿ ಇಂತಹದೇ ಒಂದು ಆರ್‌ಎಸ್‌ಎಸ್ ಸಮಾಲೋಚನಾ ಸಭೆಯಲ್ಲಿ, ಹಿಂದೂ–ಮುಸಲ್ಮಾನರ ಭಾವೈಕ್ಯತೆಯನ್ನು ಉದ್ದೀಪನಗೊಳಿಸುವಂತಹ, ಮುಸಲ್ಮಾನರನ್ನು ತಿರಸ್ಕರಿಸಿದರೆ ಅದು ಹಿಂದುತ್ವದ ವಿರೋಧಿ ಎನ್ನುವಂತಹ ಮಾತುಗಳನ್ನು ಅಸ್ಪಷ್ಟವಾಗಿ ಆಡಿದ್ದನ್ನು ಮರೆಯಲು ಸಾಧ್ಯವೇ! 2019ರಲ್ಲಿಯೇ ಇನ್ನೊಂದು ಸಂದರ್ಭದಲ್ಲಿ, ರಾಮಮಂದಿರ ನಿರ್ಮಾಣ ಮಾಡಲು ಸುಗ್ರೀವಾಜ್ಞೆಯನ್ನು ಹೊರಡಿಸಬೇಕು ಎಂಬ ಒತ್ತಡ ಬಂದ ಹಿನ್ನೆಲೆಯಲ್ಲಿ, ಕೋರ್ಟ್‌ನ ಪ್ರಕ್ರಿಯೆಯು ಮುಗಿಯುವವರೆಗೂ ಸುಗ್ರೀವಾಜ್ಞೆಯ ಮಾತೇ ಇಲ್ಲ ಎಂದು ಮೋದಿ ಕಟ್ಟಪ್ಪಣೆ ಮಾಡಿದ್ದು, ಆಗ, ಭಾಗವತ್ ಸೇರಿದಂತೆ ಹಲವು ಆರ್‌ಎಸ್‌ಎಸ್ ಮುಖಂಡರು, 'ರಾಮ ನಮ್ಮ ದೇವರು, ರಾಮಮಂದಿರ ನಿರ್ಮಾಣವಾಗಲೇಬೇಕು' ಎಂದು ಅಬ್ಬರಿಸಿದ್ದೂ ಸಹ ಜನರ ಮನಸ್ಸಿನಿಂದ ಮಾಸಿಲ್ಲ. ಆಗಲೂ ಸಹ ಆರ್‌ಎಸ್‌ಎಸ್ ಮುಖಂಡರು ಮೋದಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಂತೆ ಗೊಂದಲಮಯವಾಗಿ ಮಾತನಾಡಿದ್ದರು. 2023ರಲ್ಲಿಯೂ ಮೀಸಲಾತಿಯನ್ನು ಕುರಿತು ಆರ್‌ಎಸ್‌ಎಸ್ ಅಸ್ಪಷ್ಟ ಮಾತುಗಳ ಮೊರೆಹೋಗಿದ್ದು ಜನರು ಮರೆತಿರಲಾರರು! ಹೀಗೇ ಹಲವು ಸಂದರ್ಭಗಳಲ್ಲಿ, ತನ್ನ ರಾಜಕಾರಣದ ಅಗತ್ಯತೆಗಳನ್ನು ಮನಗಂಡು ಸಮಯಸಾಧಕತನದಿಂದ ಗೊಂದಲಮಯವಾಗಿ ಮಾತನಾಡುತ್ತಾ, ಆ ಮಾತನ್ನು ಎಲ್ಲಾ ರೀತಿಯಲ್ಲೂ ವ್ಯಾಖ್ಯಾನಿಸಲು ಅವಕಾಶ ಮಾಡಿಕೊಟ್ಟು ತನ್ನ ರಾಜಕೀಯ ಬೇಳೆ ಬೇಯಿಸಿಕೊಳ್ಳುವುದು ಆರ್‌ಎಸ್‌ಎಸ್‌ನ ಕಾರ್ಯತಂತ್ರವಾಗಿದೆ ಎನ್ನುವುದಕ್ಕೆ ಸ್ಪಷ್ಟ ಉತ್ತರವನ್ನು ಆರ್‌ಎಸ್‌ಎಸ್–ಬಿಜೆಪಿ ಮುಖಂಡರೇ ಒದಗಿಸಬೇಕು. ಆದರೆ, ಅವರ್‍ಯಾರೂ ಇಲ್ಲಿಯವರೆಗೂ ಸ್ಪಷ್ಟನೆ ನೀಡಿಲ್ಲ, ಮತ್ತು ಅವರು ಸ್ಪಷ್ಟನೆ ನೀಡಿದ್ದೇ ಆದರೆ, ಅದು ಯಾವಾಗಲೂ ಮತ್ತಷ್ಟು ಗೊಂದಲವನ್ನು ಹುಟ್ಟುಹಾಕುತ್ತದೆಯೇ ವಿನ: ಗೊಂದಲವನ್ನು ನಿವಾರಿಸುವುದು ಅದರ ಉದ್ದಿಶ್ಯವಾಗಿರುವುದಿಲ್ಲ ಎಂದು ಆರ್‌ಎಸ್‌ಎಸ್‌ನ ಪೂರ್ವೇತಿಹಾಸವನ್ನು ಕಂಡವರಿಗೆ ಅನ್ನಿಸಲು ಸಾಕು. ಮುಂಬರಲಿರುವ ಹಲವು ರಾಜ್ಯಗಳ ಚುನಾವಣೆಗಳನ್ನು ಮನದಲ್ಲಿಟ್ಟುಕೊಂಡು ಆರ್‌ಎಸ್‌ಎಸ್ ತನ್ನ ಈ ರಾಜಕೀಯ ಹೆಜ್ಜೆಯನ್ನು ಇಟ್ಟಿರಬಹುದೇ?

4. ಪ್ರಸಕ್ತ ಸಂದರ್ಭದಲ್ಲಿ ಪ್ರಾದೇಶಿಕ ಬಂಡವಾಳಶಾಹಿ ಪಕ್ಷಗಳು ಬಲಗೊಂಡಿರುವುದು, ನಮ್ಮ ಪಕ್ಷ ಎಸ್‌ಯುಸಿಐ(ಸಿ) ಸಂಸ್ಥಾಪಕರಾದ ಕಾಮ್ರೆಡ್ ಶಿವದಾಸ್ ಘೋಷ್‌ರವರು ವಿವರಿಸಿದಂತೆ, ಫ್ಯಾಸೀವಾದದ ಆಗಮನಕ್ಕೆ ಅನಿವಾರ್ಯವಾಗಿರುವ ಏಕಸ್ವಾಮ್ಯ ಬಂಡವಾಳವಾದದ ಬೆಳವಣಿಗೆಗೆ ತಡೆಯೊಡ್ಡುವ ರೂಪದಲ್ಲಿ, ರಾಷ್ಟ್ರೀಯ ಬಂಡವಾಳಶಾಹಿಗೆ ಪ್ರಾದೇಶಿಕ ಬಂಡವಾಳಶಾಹಿಯು ಸವಾಲೆಸೆದಿರುವುದನ್ನು ಈ ವಿದ್ಯಮಾನವು ರುಜುವಾತು ಪಡಿಸುತ್ತದೆ.

### ಚೇತೋಹಾರಿ ಅನುಭವ

ಹೀಗೆ, ಈ ಬಾರಿಯ ಚುನಾವಣೆಯು ಹಲವಾರು ಪಾಠಗಳನ್ನು ಎತ್ತಿ ತೋರಿಸುತ್ತದೆ. ದೇಶದಾದ್ಯಂತ 151 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ನಮ್ಮ ಪಕ್ಷವು ಕರ್ನಾಟಕದಲ್ಲಿ ತನ್ನೆಲ್ಲಾ ಶಕ್ತಿಯನ್ನು ಒಗ್ಗೂಡಿಸಿಕೊಂಡು ನೈಜ ಎಡವಾದಿ ಪರ್ಯಾಯ ರಾಜಕಾರಣವನ್ನು ಜನರ ಮುಂದಿಡಲು 19 ಕ್ಷೇತ್ರಗಳಲ್ಲಿ ಸ್ಪರ್ಧಿಸಿ ಪ್ರಯತ್ನಿಸಿತು. ಎಲ್ಲೆಡೆಯು ನೈಜ ಎಡವಾದ ಪರ್ಯಾಯ ರಾಜಕೀಯ ಸಿದ್ಧಾಂತವನ್ನು ಜನರು ಆತ್ಮೀಯವಾಗಿ ಅಪ್ಪಿಕೊಂಡಿದ್ದು ನಿಜವಾಗಿಯೂ ಚೇತೋಹಾರಿ ಅನುಭವವನ್ನು ನೀಡಿತು. ಪ್ರಚಾರದುದ್ದಕ್ಕೂ ಎಲ್ಲಾ ಕ್ಷೇತ್ರಗಳಲ್ಲಿ ಓಡಾಡಿದಾಗ ಯುಪಿಎ ಕೂಟದ 10ವರ್ಷಗಳ ಆಡಳಿತ ಮತ್ತು ಅದರ ನಂತರ ಎನ್‌ಡಿಎನ 10 ವರ್ಷಗಳ ಆಡಳಿತವನ್ನು ಒಂದರನಂತರ ಇನ್ನೊಂದನ್ನು ಅನುಭವಿಸಿ ಹೈರಾಣಾಗಿರುವ ಜನತೆ ನೈಜ ಪರಿಹಾರಕ್ಕಾಗಿ ಹಾತೊರೆಯುತ್ತಿರುವುದು ನಿಚ್ಚಳವಾಗಿ ಕಾಣುತ್ತಿತ್ತು. ಎಲ್ಲೆಡೆಯೂ ಪ್ರಜ್ಞಾವಂತ ಜನರು ಉತ್ತಮ ಚರ್ಚೆಯಲ್ಲಿ ಪಾಲ್ಗೊಂಡರು. 2014 ಮತ್ತು 2019ರ ಚುನಾವಣಾ ಪ್ರಚಾರ ಅನುಭವಗಳಿಗೆ ಹೋಲಿಸಿದಾಗ 'ಅಂಧಭಕ್ತಿ'ಯ ಮದವು ಇಳಿಯುತ್ತಾ, ಕಾರಣಯುಕ್ತ ಚರ್ಚೆಗಳಲ್ಲಿ ಭಾಗವಹಿಸಲು ಜನರು ಉತ್ಸುಕರಾಗಿದ್ದ ವರದಿಗಳೇ ಎಲ್ಲೆಡೆಯಿಂದ ಲಭ್ಯವಾಗಿವೆ. ಎಸ್‌ಯುಸಿಐ(ಸಿ) ಪಕ್ಷದ ಚುನಾವಣಾ ಪ್ರಚಾರಕ್ಕೆ ಉತ್ತಮ ಪ್ರತಿಕ್ರಿಯೆಯು ಸಿಕ್ಕಿರುವುದು, ಮುಂದಿನ ದಿನಗಳಲ್ಲಿ ಪಕ್ಷದ ಜೊತೆಯಲ್ಲಿ ನಿಲ್ಲುವ ಬದ್ಧತೆಯನ್ನು ಅಪಾರ ಸಂಖ್ಯೆಯ ಜನರು ವ್ಯಕ್ತಪಡಿಸಿರುವುದೇ ಪಕ್ಷಕ್ಕೆ ಆನೆಬಲವನ್ನು ತಂದುಕೊಟ್ಟಂತಾಗಿದೆ. ಆದರೆ, ಎಚ್ಚರಿಕೆಯ ಅಗತ್ಯವಿದೆ. ದೇಶದಾದ್ಯಂತ ಎಲ್ಲಾ ಬಂಡವಾಳಶಾಹಿ ರಾಜಕೀಯ ಪಕ್ಷಗಳೂ ಮತ್ತು ಹೆಸರಿಗಷ್ಟೇ ಕಮ್ಯುನಿಸ್ಟ್ ಆಗಿರುವ ಸಿಪಿಐ(ಎಂ), ಸಿಪಿಐನಂತಹ ಪಕ್ಷಗಳೂ ಬಹುಪಾಲು ಧ್ರುವೀಕರಣಗೊಂಡು ಎನ್‌ಡಿಎ ಅಥವಾ ಇಂಡಿಯಾ ಕೂಟಗಳನ್ನು ಸೇರಿಕೊಂಡಿವೆ. ದೇಶದಾದ್ಯಂತ ಕೋಮುವಾದದ, ಜಾತಿವಾದದ, ಫ್ಯಾಸಿವಾದದ ಕರಾಳ ಛಾಯೆಗಳು ದೂರವಾಗಿಲ್ಲ. ಅವುಗಳ ಅಬ್ಬರ ಕೊಂಚ ಮಟ್ಟಿಗೆ ಕೆಲಕಾಲ ತಗ್ಗಿರಬಹುದು ಅಷ್ಟೇ. ಬಂಡವಾಳವಾದವು ಹೆಚ್ಚು ಬಿಕ್ಕಟ್ಟಿಗೆ ಸಿಲುಕುವುದು ಹಗಲಿನಷ್ಟೇ ಸತ್ಯ ಮತ್ತು ಕಾರ್ಮಿಕ ವರ್ಗ ಹೋರಾಟಗಳು ಏರಿ ತೀವ್ರ ಸ್ವರೂಪ ಪಡೆಯುತ್ತಿದ್ದಂತೆ, ಹಾಗೆಯೇ, ಫ್ಯಾಸೀವಾದವು ತನ್ನ ತಲೆ ಎತ್ತುವುದರಲ್ಲಿ ಯಾವುದೇ ಸಂಶಯವಿಲ್ಲ. ದೇಶದ ದುಡಿಯುವ ಜನತೆಯೊಂದಿಗೆ ಈ ಬಾರಿ, ಬುದ್ಧಿಜೀವಿ ವಿಭಾಗವು ಫ್ಯಾಸೀವಾದಿ ಧೋರಣೆಗಳಿಗೆ ಬಲವಾದ ಪ್ರತಿರೋಧವನ್ನು ನೀಡಿದ್ದು ವಿಶೇಷ. ದಿನಗಳೆದಂತೆ, ತನ್ನಿಂದತಾನೇ ಹುಟ್ಟಿಕೊಳ್ಳುವ ಹೋರಾಟಗಳಿಗೆ ಸರಿಯಾದ ದಿಕ್ಕನ್ನು ತೋರಿಸಿ, ಅಂತಹ ಹೋರಾಟಗಳ ಸಂಘಟಿತ ಶಕ್ತಿಯನ್ನು ಕ್ರೋಢೀಕರಿಸಿ ಭಾರತದಲ್ಲಿ ಕ್ರಾಂತಿಯನ್ನು ನೆರವೇರಿಸಲು ಪಕ್ಷವನ್ನು ಸನ್ನದ್ಧಗೊಳಿಸಬೇಕು ಎಂದು ಎಸ್‌ಯುಸಿಐ(ಸಿ) ಪ್ರಧಾನ ಕಾರ್ಯದರ್ಶಿಗಳಾಗಿರುವ ಕಾಮ್ರೇಡ್ ಪ್ರವಾಶ್ ಘೋಷ್ ಚುನಾವಣಾ ಫಲಿತಾಂಶದ ನಂತರ ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಹೇಳಿದರು.

### ಕಾಮ್ರೇಡ್ ಪ್ರವಾಶ್ ಘೋಷ್ ಕರೆ

ಜೂನ್ 5ರಂದು, ಸಂಸತ್ ಚುನಾವಣೆಯ ಫಲಿತಾಂಶವನ್ನು ಕುರಿತು ನಮ್ಮ ಪಕ್ಷದ ಪ್ರಧಾನ ಕಾರ್ಯದರ್ಶಿಗಳಾಗಿರುವ ಕಾಮ್ರೇಡ್ ಪ್ರವಾಶ್‌ಘೋಷ್‌ರವರು, "ಆಳುವ ಬಂಡವಾಳಶಾಹಿ ವರ್ಗವು ಚುನಾವಣಾ ಆಯೋಗದ ಮೊಹರಿನೊಂದಿಗೆ ಭಾರೀ ಹಣಬಲ, ಅಧಿಕಾರದ ದುರ್ಬಳಕೆ, ಮಾಧ್ಯಮ ಬಲದ ಖರೀದಿಯ ಜೊತೆಗೆ ಹಿಂದೂ ಧಾರ್ಮಿಕ ಕೋಮುವಾದವನ್ನು ಮತ್ತು ಜಾತಿ ವಿಭಜನೆಯನ್ನು ಪ್ರಚೋದಿಸುವ ಮೂಲಕ ಮತ್ತೊಮ್ಮೆ ತನ್ನ ನಿಷ್ಠಾವಂತ ಸೇವಕ ಬಿಜೆಪಿಯನ್ನು ಅಧಿಕಾರದ ಗದ್ದುಗೆಯಲ್ಲಿ ಯಶಸ್ವಿಯಾಗಿ ಸ್ಥಾಪಿಸಿದೆ. 'ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ' ಎಂಬುದು ಮಿತಿಯೇ ಇಲ್ಲದ ಬೊಗಳೆ ಎಂದು ಮತ್ತೊಮ್ಮೆ ಸಾಬೀತಾಗಿದೆ.....ಅಧಿಕಾರವನ್ನು ಹೇಗಾದರೂ ಕಬಳಿಸಬೇಕೆಂದು ಜಿದ್ದಾಜಿದ್ದಿಗೆ ಬಿದ್ದ ಬೂರ್ಜ್ವಾ ಪಕ್ಷಗಳು, ಅದರಲ್ಲೂ ನಿರ್ದಿಷ್ಟವಾಗಿ ಬಿಜೆಪಿಯು ರಾಜಕೀಯ ಕೆಸರೆರಚಾಟ, ಅಸಹ್ಯ ನಿಂದನೆಗಳು, ಅಸಭ್ಯ ಮಾತುಗಳು ಮತ್ತು ಕೊನೆಯೇ ಇಲ್ಲದ ವಂಚನೆ ಮತ್ತು ಸುಳ್ಳಿನಲ್ಲಿ ಎಲ್ಲಾ ಮಿತಿಗಳನ್ನು ಮೀರಿದೆ. ವಿಪರೀತವಾಗಿ ವೈಭವೀಕರಿಸಲ್ಪಟ್ಟಿರುವ ಬಂಡವಾಳಶಾಹಿ ಸಂಸದೀಯ ಪ್ರಜಾಪ್ರಭುತ್ವವು ಇಂದು ಶವಪೆಟ್ಟಿಗೆಯಲ್ಲಿ ಭದ್ರವಾಗಿದ್ದು, ಫ್ಯಾಸೀವಾದಿ ಸರ್ವಾಧಿಕಾರವು ಅದರ ಸ್ಥಾನವನ್ನು ಆಕ್ರಮಿಸಿಕೊಂಡಿದೆ. ಸೋಷಲ್ ಡೆಮಾಕ್ರಟಿಕ್ ಸುಧಾರಣಾವಾದಿ ಎಡಪಕ್ಷವಾಗಿ ಸಿಪಿಐ(ಎಂ) ಐಕ್ಯ ಎಡವಾದಿ ಹೋರಾಟಕ್ಕೆ ತಿಲಾಂಜಲಿ ಇಟ್ಟು ಬಂಡವಾಳಶಾಹಿ ಮೈತ್ರಿಕೂಟದ ಹಿಂಬಾಲಕನಾಗುವ ಮೂಲಕ ತನ್ನನ್ನು ತಾನು ಮತ್ತಷ್ಟು ನಿಕೃಷ್ಟಗೊಳಿಸಿಕೊಂಡಿದೆ.......... ಆದ್ದರಿಂದ, ಬಂಡವಾಳಶಾಹಿ ಶೋಷಣೆಯ ಅಂತ್ಯಕ್ಕೆ ಮುನ್ನುಡಿಯಾಗಿ ಉನ್ನತ ಸಂಸ್ಕೃತಿ ಮತ್ತು ನೈತಿಕತೆಯ ಆಧಾರದಲ್ಲಿ ಕ್ರಾಂತಿಕಾರಿ ಕಾರ್ಮಿಕ ವರ್ಗದ ನಾಯಕತ್ವದಿಂದ ವರ್ಗ ಮತ್ತು ಸಮೂಹ ಹೋರಾಟವನ್ನು ಸಂಘಟಿಸುವುದು ಮತ್ತು ಬೆಳೆಸುವುದು ಈ ಕಾಲದ ತುರ್ತು ಅಗತ್ಯವಾಗಿದೆ" ಎಂಬ ಕಳಕಳಿಯ ಮನವಿಯನ್ನು ದೇಶದ ಮುಂದಿಟ್ಟಿದ್ದಾರೆ.

# ಖ್ಯಾತ ಪತ್ರಕರ್ತರೊಬ್ಬರ ಕಾನೂನುಬಾಹಿರ ಬಂಧನದ ಹಿನ್ನೆಲೆ: ಕಣ್ತೆರೆಸುವ ಸುಪ್ರೀಂಕೋರ್ಟ್ ತೀರ್ಪು!

ಬಿಲ್ಕಿಸ್ ಬಾನು ಪ್ರಕರಣ ಹಾಗೂ ಚುನಾವಣಾ ಬಾಂಡ್ ಕುರಿತು ಸ್ವಾಗಾತಾರ್ಹ ತೀರ್ಪು ನೀಡಿದ ನಂತರ ಈಗ ಸುಪ್ರೀಂಕೋರ್ಟ್, ಜನಪ್ರಿಯ ವೆಬ್ ಪೋರ್ಟಲ್, ನ್ಯೂಸ್ ಕ್ಲಿಕ್‌ನ (News Click) ಸಂಸ್ಥಾಪಕರು ಹಾಗೂ ಮುಖ್ಯ ಸಂಪಾದಕರಾದ ಪ್ರಬೀರ್ ಪುರಕಾಯಸ್ಥ ಹಾಗೂ ಅದೇ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥರಾದ ಅಮಿತ್ ಚಕ್ರವರ್ತಿ ಅವರ ನೆರವಿಗೆ ಧಾವಿಸಿದೆ. ಈ ಇಬ್ಬರನ್ನೂ ಕೇಂದ್ರ ಬಿಜೆಪಿ ಸರ್ಕಾರ, ಕರಾಳವಾದ ಭಯೋತ್ಪಾದನಾ ವಿರೋಧಿ ಕಾನೂನು, ಯುಎಪಿಎ (Unlawful Activities Prevention Act) ಅಡಿಯಲ್ಲಿ ಅಕ್ಟೋಬರ್ 3, 2023 ರಂದು ಬಂಧಿಸಿತ್ತು. ನ್ಯೂಸ್ ಕ್ಲಿಕ್ ಪ್ರಕಟಿಸಿದ ಸುದ್ದಿಯು ದೇಶದ ಸ್ಥಿರತೆ, ಏಕತೆ ಹಾಗೂ ಸಾರ್ವಭೌಮತೆಯ ಮೇಲೆ ನೇರ ಪ್ರಭಾವ ಬೀರಲಿದ್ದು, ರಾಷ್ಟ್ರೀಯ ಭದ್ರತೆಯ ಮೇಲೂ ಪರಿಣಾಮ ಬೀರಲಿದೆ, ಹಾಗಾಗಿ ಯುಎಪಿಎ ಪ್ರಕರಣ ದಾಖಲಿಸಿರುವುದು ಸರಿಯಾಗಿಯೇ ಇದೆ ಎಂದು ದೆಹಲಿ ಉಚ್ಛನ್ಯಾಯಲಯವು ಅಕ್ಟೋಬರ್ 13, 2023ರ ತನ್ನ ತೀರ್ಪಿನಲ್ಲಿ ಹೇಳಿತ್ತು. ಆದರೆ ಅಮಿತ್ ಚಕ್ರವರ್ತಿ ಅವರು ಸರ್ಕಾರದ ಪರವಾದ ಸಾಕ್ಷಿಯಾದ ಮೇಲೆ, ಜನವರಿ 2024ರಲ್ಲಿ ಅವರನ್ನು ಬಿಡುಗಡೆಗೊಳಿಸಲಾಗಿತ್ತು. 74 ವರ್ಷದ ಪ್ರಬೀರ್ ಪುರಕಾಯಸ್ಥರನ್ನು ದೆಹಲಿ ಪೊಲೀಸರು ಯುಎಪಿಎ ಅಡಿಯಲ್ಲಿ ಬಂಧಿಸಿ ಜೈಲಿನಲ್ಲಿಟ್ಟಿರುವುದು "ಕಾನೂನಿನ ದೃಷ್ಟಿಯಲ್ಲಿ ಅಮಾನ್ಯವಾಗಿದೆ" ಎಂದು ಘೋಷಿಸಲು ಯಾವುದೇ ಹಿಂಜರಿಕೆಯಿಲ್ಲ, ಎಂದು ಸುಪ್ರೀಂಕೋರ್ಟ್ ಪೀಠ ಮೇ 15, 2024ರ ತನ್ನ ತೀರ್ಪಿನಲ್ಲಿ ಹೇಳಿದೆ, ಪುರಕಾಯಸ್ಥ ಅವರನ್ನು ಬಂಧನದಿಂದ ಬಿಡುಗಡೆಗೊಳಿಸಲು ಆದೇಶಿಸಿದೆ. ಪುರಕಾಯಸ್ಥ ಅವರು 'ಭಯೋತ್ಪಾದಕ ಚಟುವಟಿಕೆ', 'ಭಯೋತ್ಪಾದಕ ಚಟುವಟಿಕೆಗಳಿಗೆ ದೇಣಿಗೆ ಸಂಗ್ರಹಿಸುವುದು', ಇಂತಹ ಪ್ರಕರಣಗಳಲ್ಲಿ ಆರೋಪಿಯಾಗಿರುವುದರಿಂದ, ಕೆಲವು ತಾಂತ್ರಿಕ ಅಂಶಗಳ ಆಧಾರದ ಮೇಲೆ ಅವರನ್ನು ಬಿಡುಗಡೆ ಮಾಡಬಾರದು ಎಂದು ಸರ್ಕಾರ ವಾದಿಸಿತು. ನ್ಯಾ. ಬಿ.ಆರ್ ಗವಾಯಿ ಹಾಗೂ ನ್ಯಾ.ಸಂದೀಪ್ ಮೆಹ್ತಾ ಅವರನ್ನೊಳಗೊಂಡ ಸುಪ್ರೀಂಕೋರ್ಟ್ ಪೀಠವು ಪ್ರತಿ ಆರೋಪಿಗೆ "ಆತನ ಬಂಧನದ ಆಧಾರಗಳನ್ನು ತಿಳಿದುಕೊಳ್ಳುವ ಮೂಲಭೂತ ಹಾಗೂ ಶಾಸನಬದ್ಧ ಹಕ್ಕಿದ್ದು, ಈ ಆಧಾರಗಳನ್ನು ಯಾವುದೇ ವಿನಾಯಿತಿ ನೀಡದೆ ಅತನಿಗೆ ತ್ವರಿತವಾಗಿ ಬರವಣಿಗೆಯಲ್ಲಿ ನೀಡಬೇಕು"ಎಂದು ಹೇಳಿದೆ. ಪುರಕಾಯಸ್ಥ ವಿರುದ್ಧದ ಎಫ್‌ಐಆರ್ ಪ್ರತಿಯನ್ನು ಸಾರ್ವಜನಿಕವಾಗುವಂತೆ ಅಪಲೋಡ್ ಮಾಡಿಲ್ಲ ಹಾಗೂ ಆ ಪ್ರತಿ ನೀಡಬೇಕೆಂಬ ಪುರಕಾಯಸ್ಥ ಅವರ ಮನವಿಯನ್ನು ಕೂಡ ಪೊಲೀಸರು ತಿರಸ್ಕರಿಸಿದ್ದಾರೆ ಎಂಬುದು ಮತ್ತೊಂದು ಗಮನಾರ್ಹ ಸಂಗತಿ.

**ಸುಪ್ರೀಂಕೋರ್ಟ್‌ನ ಮಹತ್ವದ ಅಭಿಪ್ರಾಯ**

ಸಂವಿಧಾನದ ವಿಧಿ 22(1) ಹೇಳುವುದೇನೆಂದರೆ, "ಬಂಧಿಸಿದ ಯಾವುದೇ ವ್ಯಕ್ತಿಯನ್ನು, ಆತನಿಗೆ ಮಾಹಿತಿ ನೀಡದೆ ಬಂಧನದಲ್ಲಿ ಇಡುವಂತಿಲ್ಲ; ಎಷ್ಟು ಬೇಗನೆ ಸಾಧ್ಯವೋ, ಅಷ್ಟು ಬೇಗ ಆತನಿಗೆ ತನ್ನ ಬಂಧನದ ಆಧಾರಗಳನ್ನು ತಿಳಿಸಬೇಕು ಹಾಗೂ ತನ್ನ ಪರವಾಗಿ ಪ್ರತಿವಾದಿಸಲು, ತನ್ನ ಆಯ್ಕೆಯ ವಕೀಲರನ್ನು ಸಂಪರ್ಕಿಸುವ ಹಕ್ಕನ್ನು ಕೂಡ ತಿರಸ್ಕರಿಸುವಂತಿಲ್ಲ"

"ಮೇಲಿನ ವಿಧಿ 22 (1) ಅತ್ಯಂತ ಪಾವಿತ್ರ್ಯ ಉಳ್ಳದ್ದು, ಇದನ್ನು ಯಾವುದೇ ಸಂದರ್ಭದಲ್ಲೂ ಉಲ್ಲಂಘನೆ ಮಾಡುವಂತಿಲ್ಲ. ಈ ಸಾಂವಿಧಾನಿಕ ಅಗತ್ಯವನ್ನು ಹಾಗೂ ಶಾಸನಬದ್ಧ ಆದೇಶವನ್ನು ಅನುಸರಣೆ ಮಾಡದೆ ಹೋದಲ್ಲಿ, ಆ ಬಂಧನವನ್ನೇ ಕಾನೂನುಬಾಹಿರ ಎಂದು ಪರಿಗಣಿಸಲಾಗುತ್ತದೆ" ಎಂದು ಸುಪ್ರೀಂಕೋರ್ಟ್ ಹೇಳಿದೆ.

ವಾಸ್ತವತೆ ಏನೆಂದರೆ, ಪುರಕಾಯಸ್ಥ ಅವರ ಬಂಧನದ ಆಧಾರಗಳ ಮಾಹಿತಿಯನ್ನು ಅಕ್ಟೋಬರ್ 5 ರಂದು, ಅಂದರೆ ಬಂಧಿಸಿ 24 ಗಂಟೆಗಳ ನಂತರ ಅವರ ಕಾನೂನು ಸಲಹೆಗಾರರಾದ ಅರ್ಷ್‌ದೀಪ್ ಖುರಾನ ಅವರಿಗೆ ನೀಡಲಾಗಿದೆ. ಇದನ್ನು ನೋಡಿದರೆ, ಮೂಲಭೂತ ಕಾನೂನನ್ನೇ ಕಣ್ಣಿಗೆ ರಾಚುವಂತೆ ಉಲ್ಲಂಘನೆ ಮಾಡಲಾಗಿದೆ. 'ಖುರಾನ ಅವರಿಗೆ ಬಂಧನದ ಮಾಹಿತಿಯನ್ನು ಅಕ್ಟೋಬರ್ 4ರಂದು ಬೆಳಿಗ್ಗೆ ಕೋರ್ಟ್ ತೀರ್ಪಿನ ಮುನ್ನ ನೀಡದೆ ಇರುವುದಕ್ಕೆ ಯಾವುದೇ ಸಕಾರಣಗಳಿರಲಿಲ್ಲ' ಎಂದು ನ್ಯಾ.ಮೆಹ್ತಾ ತಮ್ಮ ತೀರ್ಪಿನಲ್ಲಿ ಹೇಳಿದ್ದಾರೆ. ಸಹಜ ನ್ಯಾಯದ ಸಂಹಿತೆಯನ್ನು ಗಾಳಿಗೆ ತೂರಲಾಗಿದೆ.

ಪಿಎಂಎಲ್‌ಎ (Prevention of Money Laundering Act) ಹಾಗೂ ಯುಎಪಿಎ ಅಂತಹ ಕರಾಳ ಕಾಯ್ದೆಗಳು ನ್ಯಾಯಶಾಸ್ತ್ರದ ಎರಡು ಮೂಲಭೂತ ತತ್ವಗಳನ್ನು ಉಲ್ಲಂಘನೆ ಮಾಡುತ್ತವೆ. ಅದೇನೆಂದರೆ, 'ಜಾಮೀನೇ ನಿಯಮ, ಜೈಲು ಅಪವಾದ' ಹಾಗೂ 'ತಪ್ಪಿತಸ್ಥ ಎಂದು ಸಾಬೀತಾಗುವವರೆಗೆ ನಿರಪರಾಧಿ'. ಈ ಕರಾಳ ಕಾಯ್ದೆಗಳು ಬಂಧಿಸುವ ಹಾಗೂ ಜೈಲಿನಲ್ಲಿಡುವ ವಿಶೇಷ ಅಧಿಕಾರವನ್ನು ತನಿಖಾ ಸಂಸ್ಥೆಗಳಿಗೆ ನೀಡುತ್ತವೆ. ಒಟ್ಟಾರೆಯಾಗಿ 'ಆರೋಪಿಯೇ ಸಾಕ್ಷಿಯನ್ನು ನೀಡುವ ಹೊಣೆಯನ್ನು ಹೊತ್ತುಕೊಳ್ಳುವಂತೆ' ಈ ನಿರಂಕುಶ ಕಾನೂನುಗಳು ರೂಪಿತವಾಗಿವೆ. ಜಾಮೀನು ಸುಲಭವಾಗಿ ಸಿಗದೆ ಇರುವ ರೀತಿಯಲ್ಲಿಯೇ ನಿಯಮಗಳನ್ನು ರೂಪಿಸಲಾಗಿದೆ. ಪ್ರಬೀರ್ ಪುರಕಾಯಸ್ಥ ಅವರ ಬಂಧನವನ್ನು ಅಮಾನ್ಯಗೊಳಿಸಿ, ಸಂವಿಧಾನದ ವಿಧಿ 22(1)ನ್ನು ಎತ್ತಿಹಿಡಿಯುತ್ತಾ, ಹೇಗೆ ಮೂಲಭೂತ ಹಕ್ಕು ಹಾಗೂ ಸಂವಿಧಾನದ ರಕ್ಷಣೆಗಳನ್ನು ನಿರಂಕುಶ ಅಧಿಕಾರವು ಮನಬಂದಂತೆ ಉಲ್ಲಂಘನೆ ಮಾಡಿದೆ ಎಂಬುದನ್ನು ಸುಪ್ರೀಕೋರ್ಟ್ ಬೆಳಕಿಗೆ ತಂದಿದೆ.

'ಪ್ರಜಾಪ್ರಭುತ್ವದಲ್ಲಿ ಸರ್ಕಾರವೊಂದು ಮುಕ್ತವಾದ ಪತ್ರಿಕಾ ಮಾಧ್ಯಮಗಳ ಮೇಲೆ ತನಿಖಾ ಸಂಸ್ಥೆಗಳನ್ನು ಛೂಬಿಡುವಂತಿಲ್ಲ, ಅದೂ ಕೂಡ ಸರಿಯಾದ ಪ್ರಕ್ರಿಯೆಯಿಲ್ಲದೆ' ಎಂದು ಡಿಜಿಟಲ್ ಮಾಧ್ಯಮ ಸಂಘಟನೆ ಡಿಜಿಪಬ್ ತಿಳಿಸಿದೆ. ಮುಂದುವರೆಯುತ್ತಾ, 'ಪತ್ರಕರ್ತರ ಜೀವ, ಜೀವನ ಹಾಗೂ ಸ್ವಾತಂತ್ರ್ಯಕ್ಕೆ ಆತಂಕ ತರುವ ನಿಟ್ಟಿನಲ್ಲಿ ಕಾನೂನನ್ನು ಅಸ್ತ್ರವಾಗಿ ಬಳಸಬಾರದು' ಎಂದೂ ಹೇಳಿದೆ. ಪುರಕಾಯಸ್ಥ ಅವರ ಕಾನೂನುಬಾಹಿರ ಬಂಧನವನ್ನು ಹಾಗೂ ಅವರ ಮೇಲೆ ಯುಎಪಿಎ ಪ್ರಕರಣವನ್ನು ದಾಖಲಿಸಿರುವುದನ್ನು ವಿರೋಧಿಸಿ ಪತ್ರಕರ್ತ ಸಂಘಟನೆಗಳು ನಡೆಸಿದ ಪ್ರತಿಭಟನೆಯ ಉದ್ದೇಶವನ್ನು, ಸುಪ್ರೀಂಕೋರ್ಟ್ ತೀರ್ಪು ಬಲಗೊಳಿಸಿದೆ. ಎನ್‌ಸಿಆರ್‌ಬಿ (National Crime Records Beuro) ಪ್ರಕಾರ ಹಿಂದಿನ ವರ್ಷಗಳಿಗೆ ಹೋಲಿಸಿದರೆ 2022ರಲ್ಲಿ ಶೇ.23ರಷ್ಟು ಯುಎಪಿಎ ಪ್ರಕರಣಗಳು ಹೆಚ್ಚಾಗಿವೆ. ಬಿಜೆಪಿ ಸರ್ಕಾರದ ಆಳ್ವಿಕೆಯಲ್ಲಿ ಹಿಂದಿನ ವರ್ಷಗಳಿಗೆ ಹೋಲಿಸಿದ್ದಲ್ಲಿ, 2019 ರಿಂದ 2022 ರವರೆಗೆ, ಪಿಎಂಎಲ್‌ಎ ಪ್ರಕರಣಗಳು ಶೇ.450ರಷ್ಟು ಹೆಚ್ಚಾಗಿವೆ. ಈ ಅಂಕಿಅಂಶಗಳು ಸಾಕಷ್ಟನ್ನು ಬಹಿರಂಗಗೊಳಿಸುತ್ತವೆ. ಅಧಿಕಾರದ ಮದದಲ್ಲಿರುವ ಬಿಜೆಪಿ, ಕಾನೂನಿನ ಮೂಲಭೂತ ನೀತಿ ನಿಯಮಗಳನ್ನು ಪಾಲಿಸುತ್ತಿಲ್ಲ ಎಂಬುದನ್ನು ಇಡೀ ಪ್ರಕರಣ ಸಾಬೀತು ಮಾಡುತ್ತದೆ. ಜನತಾಂತ್ರಿಕ ಮನಸ್ಸುವುಳ್ಳವರು ಇಂತಹ ನಿರಂಕುಶ ವರ್ತನೆಯನ್ನು ಸಹಿಸುವುದಿಲ್ಲ.

**ಪತ್ರಕರ್ತರೇ ಏಕೆ ಗುರಿ?**

'ದಿ ವೈರ್'ನ ವೆಬ್ ಪೋರ್ಟಲ್‌ನ ಸಿದ್ಧಾರ್ಥ್ ವರದರಾಜನ್ ಅವರು, "ನಾವು ಡಜನ್‌ಗಟ್ಟಲೆ ಮಾನಹಾನಿ ಪ್ರಕರಣಗಳನ್ನು ಎದುರಿಸುತ್ತಿದ್ದೇವೆ. ಪ್ರಕರಣ ದಾಖಲಿಸಿದವರಲ್ಲಿ ಕೆಲವು ಪ್ರಭಾವಶಾಲಿ ಕಾರ್ಪೋರೇಟ್ ಮಾಲೀಕರು, ಸರ್ಕಾರದ ಬೆನ್ನೆಲುಬಾಗಿರುವ ಗೌತಮ್ ಅದಾನಿ, ಅನಿಲ್ ಅಂಬಾನಿ, ಸುಭಾಷ್ ಚಂದ್ರ, ಬಿಜೆಪಿ ಸಂಸದ ರಾಜೀವ್ ಚಂದ್ರಶೇಖರ್, ರವಿಶಂಕರ್ ಗುರೂಜಿ, ಅಮಿತ್ ಶಾ ಮಗ, ಜಯ್ ಶಾ ಕೂಡ ಒಳಗೊಂಡಿದ್ದಾರೆ. ತಮಗಾಗಿರುವ ಹಾನಿಗೆ ರೂ.11,450 ಕೋಟಿಯಷ್ಟು ಹಣವನ್ನು ಅವರು ಕೇಳುತ್ತಿದ್ದಾರೆ" ಎಂದು ಹೇಳಿದ್ದಾರೆ. ಕೋವಿಡ್ ಸಂದರ್ಭದಲ್ಲಿ, "ಪ್ರಧಾನಮಂತ್ರಿ ಮೋದಿಯವರು ಲಾಕ್‌ಡೌನ್ ಘೋಷಣೆ ಮಾಡಿದ ಒಂದು ದಿನದ ನಂತರ, ಅಂದರೆ ಮಾರ್ಚ್ 24 ರಂದು, ಉತ್ತರ ಪ್ರದೇಶದಲ್ಲಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು, ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ಡಜನ್‌ಗಟ್ಟಲೆ ಜನರೊಂದಿಗೆ ರಾಮನವಮಿ ಕಾರ್ಯಕ್ರಮದಲ್ಲಿ ಭಾಗವಹಿಸಿದರು" ಎಂದು ಸಿದ್ಧಾರ್ಥ್ ವರದರಾಜನ್ ಅವರು ಟ್ವೀಟ್ ಮಾಡಿದ್ದರು. ಆಗಲೂ ಸುಳ್ಳು ಕಾರಣ ಕೊಟ್ಟು ಅವರ ಮೇಲೆ ಪ್ರಕರಣ ದಾಖಲಿಸಲಾಯಿತು. ಕೇರಳ ಮೂಲದ ಪತ್ರಕರ್ತ ಸಿದ್ದಿಕ್ ಕಪ್ಪನ್, ಹತ್ರಾಸ್‌ನಲ್ಲಿ ನಡೆದ ದಲಿತ ಬಾಲಕಿಯ ಅತ್ಯಾಚಾರ ಹಾಗೂ ಕೊಲೆಯ ವರದಿಯನ್ನು ಮಾಡಲು ಹೋಗಿದ್ದರು. ಉತ್ತರ ಪ್ರದೇಶ ಸರ್ಕಾರವು, ನಿಷೇಧ

11ನೇ ಪುಟಕ್ಕೆ....

# ವಿದೇಶಗಳಿಗೆ ಕಾರ್ಮಿಕರ ರಫ್ತು – ಬಿಜೆಪಿ ಸರ್ಕಾರದ ರಹಸ್ಯ ಕಾರ್ಯಾಚರಣೆ

ಬಿಜೆಪಿ ಸರ್ಕಾರವು ಭಾರತೀಯ ಕಾರ್ಮಿಕರನ್ನು ವಿದೇಶಗಳಿಗೆ ರಹಸ್ಯವಾಗಿ ರಫ್ತು ಮಾಡುತ್ತಿದೆಯೆಂದು ವರದಿಯಾಗಿದೆ. ಇದು ನೈತಿಕ ಹಾಗೂ ಮಾನವ ಹಕ್ಕುಗಳ ಪ್ರಶ್ನೆಯನ್ನು ಎತ್ತಿದೆ. ಸ್ವಾತಂತ್ರ್ಯಪೂರ್ವದಲ್ಲಿ ಬ್ರಿಟಿಷ್ ಆಳ್ವಿಕರು ಭಾರತೀಯ ಕಾರ್ಮಿಕರನ್ನು ಬೇರೆ ವಸಾಹತುಗಳಿಗೆ ಹಡಗಿನಲ್ಲಿ ಸಾಗಣೆ ಮಾಡಿ, ಅಲ್ಲಿ ಅಮಾನವೀಯವಾಗಿ ನಡೆಸಿಕೊಳ್ಳುತ್ತಿದ್ದ ವಸಾಹತು ಪದ್ಧತಿಯ ಪಳೆಯುಳಿಕೆಯಂತೆ ಕಾಣುತ್ತದೆ. ತನ್ನ ನಾಗರಿಕರ ಘನತೆ ಮತ್ತು ಸುರಕ್ಷತೆಗಿಂತ ಹೆಚ್ಚಾಗಿ ಅಲ್ಪಾವಧಿಯ ಆರ್ಥಿಕ ಆದಾಯಕ್ಕೆ ಆದ್ಯತೆ ಕೊಟ್ಟು ಬಿಜೆಪಿ ಸರ್ಕಾರ ವಸಾಹತು ಶೋಷಣೆಯ ಆಚರಣೆಗೆ ಮರುಜೀವ ನೀಡಿದೆ.

**ಕಾರ್ಮಿಕರ ರಫ್ತಿಗೆ ದ್ವಿಪಕ್ಷೀಯ ಒಪ್ಪಂದಗಳು**

ಭಾರತ ಸರ್ಕಾರವು ಸಾರ್ವಜನಿಕ–ಖಾಸಗಿ ಸಹಭಾಗಿತ್ವ ಸಂಸ್ಥೆಯಾದ 'ಕೌಶಲ್ಯ ಅಭಿವೃದ್ಧಿ ನಿಗಮ'ದ ದಲ್ಲಾಳಿತನದ ಮೂಲಕ ವಿವಿಧ ದೇಶಗಳಿಗೆ ಕಾರ್ಮಿಕರನ್ನು ಸರಬರಾಜು ಮಾಡುವ ದ್ವಿಪಕ್ಷೀಯ ಒಪ್ಪಂದಗಳನ್ನು ಮಾಡಿಕೊಳ್ಳುತ್ತಿದೆ. ಈ ಅಮಾನವೀಯ ಒಪ್ಪಂದದಡಿಯಲ್ಲಿ ಕೌಶಲ್ಯವಿರುವ ಹಾಗೂ ಕೌಶಲ್ಯವಿರದ 42,000 ಭಾರತೀಯ ಕಾರ್ಮಿಕರನ್ನು ರಫ್ತು ಮಾಡಲಾಗುವುದು. ಇದು ಪ್ಯಾಲೆಸ್ತೀನ್ ಮೇಲೆ ಇಸ್ರೇಲ್ ನಡೆಸುತ್ತಿರುವ ಭೀಕರ ಹತ್ಯಾಕಾಂಡದ ಹಾಗೂ ಅಲ್ಲಿ ಸುಮಾರು 90,000 ಪ್ಯಾಲೆಸ್ತೀನ್ ಕಾರ್ಮಿಕರ ಉದ್ಯೋಗ ಅನುಮತಿ ಪತ್ರಗಳನ್ನು ರದ್ದುಗೊಳಿಸಿದ ಹಿನ್ನೆಲೆಯಲ್ಲಿ ಬಂದಿದೆ. ಅವರ ಬದಲಿ ಸ್ಥಾನಕ್ಕೆ ಯುವ ನಿರುದ್ಯೋಗಿಗಳಾದ ಭಾರತೀಯ ಕಾರ್ಮಿಕರನ್ನು ತುಂಬಬೇಕು; ಅವರು ನರ್ಸಿಂಗ್ ಹಾಗೂ ಮಿಲಿಟರಿ ಸಹಾಯದ ಜೊತೆಗೆ ನಿರ್ಮಾಣ ಮತ್ತು ಇನ್ನಿತರ ಕ್ಷೇತ್ರಗಳಲ್ಲಿ ಕೆಲಸ ಮಾಡಬೇಕು. ಇಟಲಿಗೆ 20,000 ಕಾರ್ಮಿಕರನ್ನು ಕಳುಹಿಸಲು ಒಪ್ಪಂದವಾಗಿದ್ದರೆ, ತೈವಾನ್‌ಗೆ 1,00,000 ಹೆಚ್ಚುವರಿಯಾಗಿ ಕಳುಹಿಸಲು ಮಾತುಕತೆ ನಡೆಯುತ್ತಿದೆ. ಬಿಜೆಪಿ ಸರ್ಕಾರದ ಕೃತ್ಯಗಳು ಮಾನವ ಶ್ರಮವನ್ನು ಸರಕನ್ನಾಗಿ ಮಾಡಿದೆ. ಅಪಾಯಕಾರಿ ಪರಿಸ್ಥಿತಿಯಿರುವ ಸಂಘರ್ಷದ ಸ್ಥಳಗಳಿಗೆ ರಫ್ತು ಮಾಡಲಾಗುತ್ತಿದೆ. ಅಲ್ಲಿ ವೇತನ ಹೆಚ್ಚಾಗಿರುವುರಿಂದ ಹರಿಯಾಣ, ಉತ್ತರ ಪ್ರದೇಶ ಹಾಗೂ ಇನ್ನಿತರ ರಾಜ್ಯಗಳ ನಿರುದ್ಯೋಗಿ ಯುವಕರು ಅಂತಹ ಅಪಾಯಕಾರಿ ಕೆಲಸಗಳಿಗೆ ಇರುವೆಗಳಂತೆ ಸಾಲುಗಟ್ಟಿ ನಿಂತಿದ್ದಾರೆ. "ಸಾಯುವುದು ನಮ್ಮ ಹಣೆಯಲ್ಲಿ ಬರೆದಿದ್ದರೆ, ಇಲ್ಲಿ ಅಥವಾ ಅಲ್ಲಿ, ಎಲ್ಲಿಯಾದರೂ ಸರಿ ಸಾಯಲೇಬೇಕು" ಎಂದು ಗಾಜ಼ಾದಲ್ಲಿ ತನ್ನನ್ನು ಅಪಾಯಕ್ಕೊಡ್ಡಿರುವ ಕಾರ್ಮಿಕನ ಮಾತುಗಳನ್ನು ಹರಿಯಾಣದಿಂದ ರಾಯಿಟರ್ಸ್ ವರದಿ ಮಾಡಿದೆ.



ಇಸ್ರೇಲ್‌ನಲ್ಲಿ ಉದ್ಯೋಗಕ್ಕಾಗಿ ಸಾಲುಗಟ್ಟಿರುವ ಉತ್ತರ ಭಾರತದ ಯುವಕರು,

ಈ ಮಾತುಗಳು ಭಾರತದ ನಿರುದ್ಯೋಗಿ ಯುವಕರ ಆರ್ಥಿಕ ಸಂಕಷ್ಟದ ಪರಮಾವಧಿಯನ್ನು ಒತ್ತಿ ಹೇಳುತ್ತದೆ. ಸರ್ಕಾರ ಆರ್ಥಿಕ ಅಭಿವೃದ್ಧಿಯ ಬಗ್ಗೆ ಮಾತನಾಡುತ್ತದೆ. ಆದರೆ ಹೆಚ್ಚುವರಿಯಾಗಿರುವ ಮಾನವ ಬಂಡವಾಳ ಮತ್ತು ವಿಪರೀತವಾಗಿರುವ ನಿರುದ್ಯೋಗದ ಪ್ರಮಾಣಗಳು ಇದರ ಪೊಳ್ಳುತನವನ್ನು ತೋರಿಸುತ್ತವೆ. ಈ ಕಾರ್ಮಿಕರ ರಫ್ತು ನೀತಿಗೆ ಮನುಷ್ಯರು ತೆರಬೇಕಾದ ಬೆಲೆಯು ಜೀವ ಹೋಗುವಂತಹುದು. ಅಲ್ಲಿ ಕೊಡುವ ವೇತನಕ್ಕೆ ಭಾರತೀಯ ಕಾರ್ಮಿಕರು ದೀರ್ಘಕಾಲ ಕೆಲಸ ಮಾಡಬೇಕು. ಇಸ್ರೇಲ್ ಮತ್ತು ರಷ್ಯಾಗೆ ಕಳುಹಿಸಿದವರಲ್ಲಿ ಕೆಲವರು ಸತ್ತಿರುವುದು ವರದಿಯಾಗಿದೆ. ವಿದೇಶದಲ್ಲಿರುವ ತನ್ನ ಪ್ರಜೆಗಳನ್ನು ಕಾಪಾಡುವುದರಲ್ಲಿ ಭಾರತ ಸರ್ಕಾರ ಸೋತಿದೆ. ಇದು ದ್ವಿಪಕ್ಷೀಯ ಒಪ್ಪಂದಗಳಲ್ಲಿರುವ ಬದ್ಧತೆಗೆ ಸಂಪೂರ್ಣವಾಗಿ ವಿರುದ್ಧವಾಗಿದೆ. ಈ ನೀತಿಯು ಭಾರತೀಯ ಕಾರ್ಮಿಕರನ್ನು ವಿದೇಶಿ ನೆಲೆಗಳಲ್ಲಿ ಭಯಂಕರ ಪರಿಸ್ಥಿತಿಗೆ ಹಾಗೂ ಅಪಾಯಗಳಿಗೆ ಒಡ್ಡುವ ಮೂಲಕ ಅವರ ಘನತೆ ಹಾಗೂ ಸುರಕ್ಷತೆಗಳನ್ನು ಕಾಪಾಡುವುದರಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ.

ಆದ್ದರಿಂದ ಇದೊಂದು ಬಹಳ ದೋಷಪೂರಿತ ಹಾಗೂ ಅತ್ಯಂತ ಅಮಾನವೀಯ ಕಾರ್ಯತಂತ್ರ. ಸರ್ಕಾರವು ಒಳ್ಳೆಯ ಸಂಬಳ ಸಿಗುವ ಉದ್ಯೋಗಗಳನ್ನು ಸೃಷ್ಟಿ ಮಾಡಿ, ಅಗತ್ಯ ಬಂದರೆ, ಸ್ವಾತಂತ್ರ್ಯ ನಂತರದಲ್ಲಿ ಮಾಡಿದ ಹಾಗೆ ಸರ್ಕಾರವೇ

8ನೇ ಪುಟಕ್ಕೆ....

# ಪದವಿ ನೀಟ್ ಪರೀಕ್ಷೆ 2024

...1ನೇ ಪುಟದಿಂದ

ಎಂದಿಗೂ ಕಂಡುಬಂದಿಲ್ಲ, ಇದು ಆಶ್ಚರ್ಯ ಮತ್ತು ಅಸಂಭವದ ಘಟನೆಯಾಗಿದೆ. ಸಾಮಾನ್ಯ ಕೋರ್ಸ್‌ಗಿಂತ ಆಳವಾದ ಅಧ್ಯಯನದ ಅಗತ್ಯವಿರುವ ತುಂಬಾ ಕಠಿಣವಾಗಿರುವ ಪರೀಕ್ಷೆ ಇದು. ಹಿಂದಿನ ವರ್ಷಗಳ ಫಲಿತಾಂಶಗಳನ್ನು ಗಮನಿಸಿದರೆ, 2021ರಲ್ಲಿ ಮೂವರು ವಿದ್ಯಾರ್ಥಿಗಳು, 2022ರಲ್ಲಿ ಯಾರೂ ಇಲ್ಲ ಮತ್ತು 2023 ರಲ್ಲಿ ಇಬ್ಬರು ವಿದ್ಯಾರ್ಥಿಗಳು 100% ಅಂಕಗಳನ್ನು ಗಳಿಸಿದ್ದಾರೆ. ಈ ವರ್ಷ ಅರವತ್ತೇಳು ವಿದ್ಯಾರ್ಥಿಗಳು 100% ಅಂಕ ಗಳಿಸಿದ್ದು ಹೇಗೆ? ಕೋಚಿಂಗ್ ಸೆಂಟರ್‌ಗಳು, ಮಧ್ಯಮ ವ್ಯಕ್ತಿಗಳು, ಪರೀಕ್ಷಾ ಕೇಂದ್ರಗಳು, ಪೇಪರ್ ಸೆಟ್ಟರ್‌ಗಳು ಮತ್ತು ಪರೀಕ್ಷೆ ನಡೆಸುವ ಸಂಸ್ಥೆಯನ್ನು ಒಳಗೊಂಡಿರುವ ದೊಡ್ಡ ಪ್ರಮಾಣದ ಹಗರಣದ ಸ್ಪಷ್ಟ ಸೂಚನೆಯಿದಾಗಿದೆ. ಒಂದು ನಿಕಟ ಪರಿಶೀಲನೆಯು ಅರವತ್ತೇಳು ಮೊದಲ ಶ್ರೇಣಿಯನ್ನು ಪಡೆದಿರುವವರಲ್ಲಿ ಒಂದೇ ಸರಣಿ ಸಂಖ್ಯೆಗಳನ್ನು ಹೊಂದಿರುವ ಆರು ವಿದ್ಯಾರ್ಥಿಗಳು ಒಂದೇ ಪರೀಕ್ಷಾ ಕೇಂದ್ರದವರು (ಹರಿಯಾಣ) ಎಂದು ತೋರಿಸುತ್ತದೆ. ಇದಲ್ಲದೆ, ಆ ಆರೂ ವಿದ್ಯಾರ್ಥಿಗಳು ಯಾವುದೇ ಉಪನಾಮಗಳನ್ನು ಹೊಂದಿಲ್ಲ ಎಂಬುದು ಕೂಡ ತಿಳಿದುಬಂದಿದೆ.

ಮುಂದಿನ ರ‍್ಯಾಂಕ್ ಪಡೆದವರ ಅಂಕಗಳೇನು? ಕೆಲವರು ಒಟ್ಟು 720ಕ್ಕೆ 719 ಮತ್ತು 718 ಅಂಕಗಳನ್ನು ಗಳಿಸಿದ್ದಾರೆ. ಇದು ಬಹುಆಯ್ಕೆ ಮಾದರಿಯ ಪರೀಕ್ಷೆಯಾಗಿದೆ. ಮತ್ತು ಪ್ರತಿ ತಪ್ಪು ಉತ್ತರಕ್ಕೂ ಮೈನಸ್ ಅಂಕವಿದೆ. ಒಬ್ಬ ವಿದ್ಯಾರ್ಥಿಯು ಎಲ್ಲಾ ಪ್ರಶ್ನೆಗಳಿಗೂ ಸರಿಯಾಗಿ ಉತ್ತರಿಸಿದರೆ, 720 ಅಂಕಗಳನ್ನು ಗಳಿಸಬಹುದು. ಪ್ರತಿ ಸರಿಯಾದ ಉತ್ತರವು 4 ಅಂಕಗಳನ್ನು ಪಡೆಯುತ್ತದೆ ಮತ್ತು ತಪ್ಪು ಉತ್ತರಕ್ಕೆ 1 ಅಂಕವನ್ನು ಕಡಿತಗೊಳಿಸಲಾಗುತ್ತದೆ. ಆದ್ದರಿಂದ, ಒಂದು ಉತ್ತರ ತಪ್ಪಾಗಿದ್ದರೆ ಗಳಿಸಿದ ಒಟ್ಟು ಅಂಕಗಳು 720 – 5= 715 ಆಗಿರುತ್ತದೆ. ಹೀಗಿರುವಾಗ, 718 ಅಥವಾ 719 ಅಂಕಗಳು ದೊರೆಯಲು ಹೇಗೆ ಸಾಧ್ಯ? ಪ್ರಶ್ನೆಪತ್ರಿಕೆಗಳನ್ನು ತಡವಾಗಿ ನೀಡಿದಲ್ಲೆಲ್ಲಾ ಅಭ್ಯರ್ಥಿಗಳಿಗೆ ನೀಡಿದ ಗ್ರೇಸ್ ಅಂಕಗಳಿಂದಾಗಿ ಈ ವ್ಯತ್ಯಯ ಉಂಟಾಗಿದೆ ಮತ್ತು ಈ ಸೂತ್ರದಿಂದ 1500 ವಿದ್ಯಾರ್ಥಿಗಳು ಗ್ರೇಸ್ ಅಂಕಗಳನ್ನು ಪಡೆದಿದ್ದಾರೆ ಎಂದು NEET ನಡೆಸುವ ರಾಷ್ಟ್ರೀಯ ಪರೀಕ್ಷಾ ಪ್ರಾಧಿಕಾರವು ಹೇಳುತ್ತದೆ. ಇದು ಯಾವ ರೀತಿಯ ತರ್ಕ? ಒಂದು ಕೇಂದ್ರದಲ್ಲಿ ಪರೀಕ್ಷೆ ಆರಂಭವಾಗುವುದು ತಡವಾದರೆ ಆ ಕೇಂದ್ರದಲ್ಲಿ ಪರೀಕ್ಷೆಗೆ ಹಾಜರಾಗುವ ಎಲ್ಲಾ ವಿದ್ಯಾರ್ಥಿಗಳು ಗ್ರೇಸ್ ಅಂಕಗಳನ್ನು ಪಡೆಯುತ್ತಾರೆ. ಹಲವು ಕೇಂದ್ರಗಳಲ್ಲಿ 10 ನಿಮಿಷದಿಂದ 30 ನಿಮಿಷಗಳವರೆಗೆ ವಿಳಂಬವಾಗಿರುವುದು ಕಂಡುಬಂದಿದೆ. ಈ ವಿಳಂಬವನ್ನು ಉದ್ದೇಶಪೂರ್ವಕವಾಗಿ ಮಾಡಲಾಗಿದೆಯೇ? ವಿಳಂಬಕ್ಕೆ ಯಾರು ಹೊಣೆ? ಅವರ ವಿರುದ್ಧ ಏನು ಕ್ರಮ ಕೈಗೊಳ್ಳಲಾಗಿದೆ? ಅಂತಹ ಘೋರ ನಿರ್ಲಕ್ಷ್ಯಕ್ಕೆ ಯಾವುದೇ ಹೊಣೆಗಾರಿಕೆ ಇಲ್ಲವೇ? ಒಂದು ವೇಳೆ ಆ ಕೇಂದ್ರದಲ್ಲಿ ಪರೀಕ್ಷೆ ತಡವಾದರೆ ಆ ಕೇಂದ್ರದ ಎಲ್ಲಾ ವಿದ್ಯಾರ್ಥಿಗಳು ವೈದ್ಯಕೀಯ ಕಾಲೇಜಿಗೆ ಪ್ರವೇಶ ಪಡೆಯಲು ಅರ್ಹತೆ ಪಡೆಯುತ್ತಾರೆ ಎಂಬಂತಿದೆ! ಎಷ್ಟು ಕೇಂದ್ರಗಳಲ್ಲಿ ಗ್ರೇಸ್ ಮಾರ್ಕ್ಸ್ ನೀಡಲಾಗಿದೆ? ಗ್ರೇಸ್ ಮಾರ್ಕ್ ನೀಡಲು ಮಾನದಂಡ ಯಾವುದು? NTA NEET ನ ಅಪ್ಲಿಕೇಶನ್ ಬುಕ್‌ಲೆಟ್‌ನಲ್ಲಿ ಗ್ರೇಸ್ ಮಾರ್ಕ್‌ಗಳ ಸೂತ್ರವನ್ನು ಪ್ರಕಟಿಸಿದೆಯೇ? ಈ ಯಾವ ವಿಷಯಗಳ ಕುರಿತಾಗಿಯೂ ಎನ್ ಟಿಎ ಪಾರದರ್ಶಕವಾಗಿಲ್ಲ.

ವಿದ್ಯಾರ್ಥಿಗಳು ಈಗಾಗಲೇ ಪರೀಕ್ಷಾ ಹಾಲ್‌ನೊಳಗೆ ಇರುವುದರಿಂದ ಮತ್ತು ಅವ್ಯವಹಾರಕ್ಕೆ ಯಾವುದೇ ಅವಕಾಶವಿಲ್ಲದ ಕಾರಣ ಎನ್‌ಟಿಎ ಪ್ರಶ್ನೆ ಪತ್ರಿಕೆಗಳನ್ನು ತಡವಾಗಿ ವಿತರಿಸಿದ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಸಮಯವನ್ನು ನೀಡಬಹುದಿತ್ತು. ಭೌತಶಾಸ್ತ್ರದ ಒಂದು ಪ್ರಶ್ನೆಯಲ್ಲಿ ಹಳೆಯ ಮತ್ತು ಹೊಸ NCERT ಪಠ್ಯಪುಸ್ತಕದಲ್ಲಿ ಉತ್ತರವು ವಿಭಿನ್ನವಾಗಿತ್ತೆಂಬುದು NTA ನೀಡಿದ ಇನ್ನೊಂದು ವಿವರಣೆ. ಆದ್ದರಿಂದ, ಯಾವುದೇ ಆಯ್ಕೆಗಳನ್ನು ನೀಡಿದವರಿಗೆ ಪೂರ್ಣ ಅಂಕಗಳನ್ನು ನೀಡಲಾಯಿತು. ಎಂತಹ ವಿಲಕ್ಷಣ ತರ್ಕವಿದು? ಈ ಕಾಯ್ದೆಯಿಂದ ಎಷ್ಟು ಉನ್ನತ ಶ್ರೇಣಿಯ ವಿದ್ಯಾರ್ಥಿಗಳು ಪ್ರಯೋಜನ ಪಡೆದರು? NTA ಹೇಳುವಂತೆ ಮೊದಲ ರ‍್ಯಾಂಕ್ ಪಡೆದ 44 ವಿದ್ಯಾರ್ಥಿಗಳು ಗ್ರೇಸ್ ಮಾರ್ಕ್‌ಗಳಿಂದ ಪ್ರಯೋಜನ ಪಡೆದಿದ್ದಾರೆ. ಅದೇ ಸಂಖ್ಯೆಯ ಅಂಕಗಳನ್ನು ಗಳಿಸುವ ವಿದ್ಯಾರ್ಥಿಗಳಿಗೆ NTA ರ‍್ಯಾಂಕಿಂಗ್ ಅನ್ನು ಹೇಗೆ ಮಾಡಲಾಗುತ್ತದೆ? 67 ವಿದ್ಯಾರ್ಥಿಗಳು 100% ಅಂಕಗಳನ್ನು ಗಳಿಸಿದರೆ, ಅವರ ಶ್ರೇಯಾಂಕವನ್ನು ಅರ್ಜಿಯ ಸಮಯ ಮತ್ತು ದಿನಾಂಕದ ಆಧಾರದ ಮೇಲೆ ಮಾಡಲಾಗಿದೆ, ಅಂದರೆ ಪ್ರವೇಶ ಪರೀಕ್ಷೆಗೆ ಮೊದಲು ಅರ್ಜಿ ಸಲ್ಲಿಸಿದವರು ಅತ್ಯುನ್ನತ ಶ್ರೇಣಿಯನ್ನು ಪಡೆಯುತ್ತಾರೆ. ಇದು ಯಾರಿಗೂ ಒಪ್ಪಿಗೆಯಾಗದ ವಿಧಾನ. ನವದೆಹಲಿಯ AIIMSನಲ್ಲಿ ಸಾಮಾನ್ಯ ವರ್ಗಕ್ಕೆ ಕೇವಲ 48 ಸೀಟುಗಳಿವೆ. ಆದ್ದರಿಂದ, ಈ ಬಾರಿ NEET-UG ನಲ್ಲಿ 100% ಅಂಕಗಳನ್ನು ಗಳಿಸಿದ ಎಲ್ಲ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರತಿಷ್ಠಿತ ಸಂಸ್ಥೆಯಾದ ನವದೆಹಲಿಯ AIIMS ನಲ್ಲಿ ಸೀಟು ಸಿಗುವುದಿಲ್ಲ. ನೀಟ್ ಪರೀಕ್ಷೆಯ ಪತ್ರಿಕೆಗಳು ನಿರ್ದಿಷ್ಟ ದಿನಾಂಕದಂದು ಸೋರಿಕೆಯಾಗುತ್ತವೆ ಎಂಬ ವಿಡಿಯೋ ಪರೀಕ್ಷೆಗೂ ಮುನ್ನವೇ ಹರಿದಾಡಿತ್ತು.



ರಾಜ್ಯದಾದ್ಯಂತ ನೀಟ್ ಹಗರಣದ ವಿರುದ್ಧ ಎಐಡಿಎಸ್‌ಓ ಪ್ರತಿಭಟನೆ.

ವಿದ್ಯಾರ್ಥಿಗಳು, ಪೋಷಕರು ಮತ್ತು ಶಿಕ್ಷಕರು ಪತ್ರಿಕೆಗಳು ಸೋರಿಕೆಯಾಗಿದೆ ಎಂದು ಎನ್‌ಟಿಎಗೆ ತಿಳಿಸಿದ್ದರು, ಆದರೆ ಎನ್‌ಟಿಎ ಅದನ್ನು ಲಘುವಾಗಿ ಪರಿಗಣಿಸಿತು. ವಾಸ್ತವವಾಗಿ, ಪರೀಕ್ಷೆಗೆ ಒಂದು ದಿನ ಮೊದಲು ನೀಟ್‌ನ ಪತ್ರಿಕೆ ಸೋರಿಕೆಯ ಆಧಾರದ ಮೇಲೆ ಪಾಟ್ನಾ ಪೊಲೀಸರು ಹದಿಮೂರು ಜನರನ್ನು ಬಂಧಿಸಿದ್ದರು. ದೇಶದ ವಿವಿಧ ಭಾಗಗಳಲ್ಲಿ ಪೇಪರ್ ಸೋರಿಕೆಯು ಸಾಮಾನ್ಯ ವಿದ್ಯಮಾನವಾಗಿ ಹೋಗಿದೆ. ನಾಯಿಕೊಡೆಗಳಂತೆ ಹೆಚ್ಚುತ್ತಿರುವ ಖಾಸಗಿ ವೈದ್ಯಕೀಯ ಕಾಲೇಜುಗಳು ಹೆಚ್ಚಿನ ಶುಲ್ಕ ವಿಧಿಸುವುದರಿಂದ ಮತ್ತು ಸರ್ಕಾರದಿಂದ ಈ ಸಂಸ್ಥೆಗಳಿಗೆ ನೀಡುವ ಪುಷ್ಟಿಯಿಂದಾಗಿ ನಮ್ಮ ದೇಶದಲ್ಲಿ ವೈದ್ಯಕೀಯ ಶಿಕ್ಷಣವು ತುಂಬಾ ದುಬಾರಿಯಾಗಿದೆ. ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಸೀಟುಗಳು ಸೀಮಿತವಾಗಿವೆ. ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಪ್ರವೇಶ ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ಮಾಡಲು ಇದು ಸಾಕಾಗುವುದಿಲ್ಲ. ಕೋಚಿಂಗ್ ಸಂಸ್ಥೆಗಳು ಇದರ ಲಾಭವನ್ನು ಪಡೆದುಕೊಳ್ಳುತ್ತಿವೆ ಮತ್ತು ಇದು ಈಗ ಲಾಭದಾಯಕ ವ್ಯವಹಾರವಾಗಿದೆ. ಪಾಲಕರು ತಮ್ಮ ಜೀವನದ ಬಹುಪಾಲು ಉಳಿತಾಯವನ್ನು ತಮ್ಮ ಮಕ್ಕಳ ಶಿಕ್ಷಣಕ್ಕಾಗಿ ವಿನಿಯೋಗಿಸವಂತಾಗಿದೆ. ಕೇಂದ್ರೀಕೃತ ಪರೀಕ್ಷಾ ವ್ಯವಸ್ಥೆಯು ವಿದ್ಯಾರ್ಥಿಗಳನ್ನು ಹಿಂದೆಂದೂ ಕಂಡಿರದ ತೀವ್ರ ಮಾನಸಿಕ ಬಿಕ್ಕಟ್ಟಿಗೆ ತಳ್ಳುತ್ತಿದೆ. ಕಳೆದ ಮೂರು ವರ್ಷಗಳಲ್ಲಿಯೇ, 35,000 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಆತ್ಮಹತ್ಯೆಗೆ ಶರಣಾಗಿದ್ದಾರೆ. ಸಮಾನತೆಯ ಸಮಾಜದಲ್ಲಿ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಗುಣಮಟ್ಟದ ಶಿಕ್ಷಣ ನೀಡುವುದು ಸರ್ಕಾರದ ಆದ್ಯ ಕರ್ತವ್ಯವಾಗಬೇಕು.

ಲಕ್ಷಾಂತರ ವಿದ್ಯಾರ್ಥಿಗಳು, ಪೋಷಕರು ಮತ್ತು ಶಿಕ್ಷಕರ ಕನಸುಗಳು ಇಂದು ಅಪಾಯದಲ್ಲಿವೆ. ಬಂಡವಾಳಶಾಹಿ ವ್ಯವಸ್ಥೆಯ ದಾಳಿಗೆ ಶಿಕ್ಷಣ ವ್ಯವಸ್ಥೆ ನಲುಗುತ್ತಿದೆ. ಈ ಪ್ರಕರಣದಲ್ಲಿ ಸಂಪೂರ್ಣ ಪಾರದರ್ಶಕತೆಯೊಂದಿಗೆ ಸ್ವತಂತ್ರ ನ್ಯಾಯಾಂಗ ತನಿಖೆಯ ಅಗತ್ಯವಿದೆ. ಜೊತೆಗೆ, ಕೇಂದ್ರೀಕೃತ ಪರೀಕ್ಷಾ ವಿಧಾನವನ್ನು ಹಿಂಪಡೆದು ರಾಜ್ಯ ಮಟ್ಟದಲ್ಲಿಯೇ ಪ್ರವೇಶ ಪರೀಕ್ಷೆಗಳನ್ನು ನಡೆಸುವಂತಾಗಬೇಕಿದೆ. ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರು ಮತ್ತು ಶಿಕ್ಷಣ ತಜ್ಞರು ಒಂದೇ ವೇದಿಕೆಯಡಿಯಲ್ಲಿ ಒಗ್ಗೂಡಿ ನ್ಯಾಯಯುತ ಮತ್ತು ಸ್ವತಂತ್ರ ವಿಚಾರಣೆಗಾಗಿ ಸರ್ಕಾರದ ಮೇಲೆ ಒತ್ತಡ ಹೇರುವ ಅಗತ್ಯವಿದೆ. ಅಂತೆಯೇ, ಶಿಕ್ಷಣವನ್ನು ವ್ಯಾಪಾರದ ವಸ್ತುವನ್ನಾಗಿ ಮಾರ್ಪಾಡು ಮಾಡುತ್ತಿರುವ ಆಳುವ ವರ್ಗದ ಕುತಂತ್ರದ ವಿರುದ್ಧ, ಜನ ಸಮೂಹ ಒಂದಾಗಿ ಪ್ರಜಾತಾಂತ್ರಿಕ ನೆಲೆಗಟ್ಟಿನ ಮೇಲೆ ಆಂದೋಲನವನ್ನು ಬೆಳೆಸಬೇಕಿದೆ. ಇದು ಈ ಹೊತ್ತಿನ ಅವಶ್ಯಕತೆ.

# ತೈಲ ಕಂಪನಿಗಳು ಹೇರಳ ಲಾಭವನ್ನು ಗಳಿಸುತ್ತವೆ !

ಪೆಟ್ರೋಲ್–ಡೀಸೆಲ್‌ನ ಗಗನಕ್ಕೇರುತ್ತಿರುವ ಚಿಲ್ಲರೆ ಸುಂಕವನ್ನು ಇಳಿಸುವ ಬೇಡಿಕೆಯನ್ನು ಮುಂದಿಟ್ಟಾಗ, ಸರ್ಕಾರವು ಅದೇ ಹಳೇ ರಾಗವನ್ನು ಹಾಡುತ್ತದೆ– "ತೈಲ ಕಂಪನಿಗಳು ಭಾರೀ ನಷ್ಟವನ್ನು ಅನುಭವಿಸುತ್ತವೆ". ಆದರೆ ಅದು ನಿಜಾಂಶವೇ? ಇಲ್ಲವೇ ಇಲ್ಲ. ಇತ್ತೀಚಿನ ವರದಿಯ ಪ್ರಕಾರ, ಮೂರು ಪ್ರಮುಖ ಸಾರ್ವಜನಿಕ ಉದ್ದಿಮೆಯ ತೈಲ ಕಂಪನಿಗಳಾದ–ಇಂಡಿಯನ್ ಆಯಿಲ್, ಭಾರತ್ ಪೆಟ್ರೋಲಿಯಂ ಮತ್ತು ಹಿಂದೂಸ್ತಾನ್ ಪೆಟ್ರೋಲಿಯಂ ಒಟ್ಟಾಗಿ 23–24 ಸಾಲಿನಲ್ಲಿ 81,000 ಕೋಟಿ ರೂ.ಗಳ ಭಾರಿ ಲಾಭವನ್ನು ಗಳಿಸಿವೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಗಣನೀಯವಾಗಿ ಕುಸಿದಿದ್ದರೂ, ಚಿಲ್ಲರೆ ಸುಂಕವನ್ನು ಕಡಿಮೆ ಮಾಡಿ ಸಾಮಾನ್ಯ ಜನರಿಗೆ ಪರಿಹಾರವನ್ನು ನೀಡುವ ಜವಾಬ್ದಾರಿಯನ್ನು ಬಿಜೆಪಿ ಸರ್ಕಾರವು ತೆಗೆದುಕೊಂಡಿಲ್ಲ. ಏಕೆಂದರೆ, ಪೆಟ್ರೋಲ್–ಡೀಸೆಲ್ ಮೇಲೆ ಹೆಚ್ಚಿನ ತೆರಿಗೆ ವಿಧಿಸುವ ಹಾಗೂ ತೈಲ ಕಂಪನಿಗಳಿಂದ ಅಸಾಧಾರಣ ಲಾಭಾಂಶವನ್ನು ಪಡೆಯುವ ಮೂಲಕ, ಸರ್ಕಾರವು ತನ್ನ ಬೊಕ್ಕಸವನ್ನು ಹಿಗ್ಗಿಸುತ್ತದೆ ಮತ್ತು ನಂತರ ಬಂಡವಾಳಿಗರಿಗೆ ತೆರಿಗೆ ರಿಯಾಯಿತಿಗಳು, ತೆರಿಗೆ ಮನ್ನಾ ಮತ್ತು ವಿನಾಯಿತಿಗಳು ಮುಂತಾದವುಗಳಿಂದ ಆಗುವ ಆದಾಯ ಗಳಿಕೆಯ ಬೃಹತ್ ಕೊರತೆಯನ್ನು ನಿರ್ವಹಿಸುತ್ತದೆ. 2019–2023ರ ಅವಧಿಯಲ್ಲಿ ಸರ್ಕಾರವು ಗಳಿಸಿದ ಒಟ್ಟು ತೈಲ ಆದಾಯವು ಸುಮಾರು 12 ಲಕ್ಷ ಕೋಟಿ ರೂಪಾಯಿ ಎಂದು ಅಂದಾಜಿಸಲಾಗಿದೆ. ಸರ್ಕಾರವು ತೈಲ ದೈತ್ಯರ ನಷ್ಟವಿದು ಎಂದು ಸೂಚಿಸಲು ಪ್ರಯತ್ನಿಸುತ್ತದೆ. ನಾವು



ಈ ಹಿಂದೆ ಸಾಕಷ್ಟು ಬಾರಿ ಗಮನಸೆಳೆದಿರುವಂತೆ, ಇದು ಅಂಡರ್–ರಿಕವರಿಯಾಗಿದ್ದು, ಅದನ್ನು ನಷ್ಟವೆಂದು ತೋರಿಸಲಾಗುತ್ತಿದೆ.

ಅನಿಯಂತ್ರಣದ (Deregulation) ಮೊದಲು ಪೆಟ್ರೋಲ್, ಡೀಸೆಲ್, ಎಲ್‌ಪಿಜಿ ಮತ್ತು ಸೀಮೆಎಣ್ಣೆಗಳ ಆಮದು ಸಮಾನ ಬೆಲೆ ಮತ್ತು ಚಿಲ್ಲರೆ ಬೆಲೆಯ ನಡುವಿನ ವ್ಯತ್ಯಾಸವನ್ನು ಅಂಡರ್ ರಿಕವರಿ ಎಂದು ಕರೆಯುತ್ತಾರೆ. ಅಂಡರ್ ರಿಕವರಿ ಎಂಬುದು ಊಹೆಯ ಆಧಾರದ ಮೇಲೆ ಕಾಲ್ಪನಿಕ ನಷ್ಟವಾಗಿದೆ ಮತ್ತು ನೈಜ ಪರಿಭಾಷೆಯಲ್ಲಿ ನಿಜವಾದ ನಷ್ಟವಲ್ಲ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಇಟಲಿಯಲ್ಲಿ ಒಂದು ಜೊತೆ ಶೂಗಳ ತಯಾರಿಕೆಯ ವೆಚ್ಚವು 1000 ರೂ.ಗಳು ಎಂದು ನಾವು ಭಾವಿಸೋಣ ಮತ್ತು ಭಾರತವು ಇಟಾಲಿಯನ್ ಚರ್ಮವನ್ನು ಆಮದು ಮಾಡಿಕೊಳ್ಳುತ್ತದೆ ಮತ್ತು 600 ರೂ.ಗಳಷ್ಟು ಕಡಿಮೆ ವೆಚ್ಚದಲ್ಲಿ ಬೂಟುಗಳನ್ನು ತಯಾರಿಸುತ್ತದೆ.

ಆದ್ದರಿಂದ, "ಆಮದು ಸಮಾನ ಬೆಲೆ" ಕಾಪಾಡಿಕೊಳ್ಳಲು, ಭಾರತದಲ್ಲಿ ಬೂಟುಗಳನ್ನು 1000 ರೂ.ಗೆ ಮಾರಾಟ ಮಾಡಬೇಕೇ ಹೊರತು 600 ರೂಗಳಿಗಲ್ಲ. ಇಲ್ಲದಿದ್ದರೆ, ಶೂ ತಯಾರಿಸುವ ಕಂಪನಿಯು 400 ರೂ.ಗಳ ಅಡಿಯಲ್ಲಿ ಅಂಡರ್ ರಿಕವರಿ ಅನುಭವಿಸುತ್ತದೆ! ಹಾಗಾಗಿ ಇದು ಇಟಾಲಿಯನ್ ವೆಚ್ಚದ ಆಧಾರದ ಮೇಲೆ ಕಾಲ್ಪನಿಕ ಲೆಕ್ಕಾಚಾರವಾಗಿದೆ, ಆದರೆ ಭಾರತೀಯ ವೆಚ್ಚದ ಪ್ರಕಾರವಲ್ಲ. ಹಾಗಾದರೆ ಅದು ನಷ್ಟವೇ? ಆದರೆ ಸರ್ಕಾರ ಹೇಳುತ್ತಿರುವುದು ಅದನ್ನೇ. ವಿವೇಚನಾಶೀಲ ಜನರಿಗೆ ಈ ಕುತಂತ್ರವನ್ನು ಅರಿಯಲು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ. ಈಗ ಪ್ರಕಟವಾದ ತೈಲ ಕಂಪನಿಗಳ ಲಾಭದ ಅಂಕಿ ಅಂಶವು ಜನರು ಹೇಗೆ ಸರ್ಕಾರದಿಂದ ವಂಚನೆಗೊಳಗಾಗಿದ್ದಾರೆ ಎಂಬುದನ್ನು ದೃಢಪಡಿಸುತ್ತದೆ.



ಕಲಬುರಗಿ ಜಿಲ್ಲೆಯ ವಿವಿಧ ಹಳ್ಳಿಗಳಿಂದ ಬರುವ ವಿದ್ಯಾರ್ಥಿಗಳ ಶಾಲಾ–ಕಾಲೇಜುಗಳ ಸಮಯಕ್ಕೆ ಅನುಗುಣವಾಗಿ ಬಸ್ ಸೌಕರ್ಯ ಒದಗಿಸುವಂತೆ ಎಐಡಿಎಸ್‌ಓ ನೇತೃತ್ವದಲ್ಲಿ ಸಾರಿಗೆ ವಿಭಾಗೀಯ ಕೇಂದ್ರ ಕಛೇರಿ ಎದುರು ಪ್ರತಿಭಟನೆ.

## ಕೋಟ್ಯಧಿಪತಿ ರಾಜಕಾರಣಿಗಳು:

# ಇವರು ಜನರನ್ನು ಪ್ರಾಮಾಣಿಕವಾಗಿ ಪ್ರತಿನಿಧಿಸುತ್ತಾರೆಯೋ?

ಇತ್ತೀಚೆಗೆ ಮುಗಿದ 18ನೇ ಲೋಕಸಭಾ ಚುನಾವಣೆಯ ಎಲ್ಲ ಹಂತಗಳಲ್ಲಿ ವಿವಿಧ ಪಕ್ಷಗಳ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸುವಾಗ ತಮ್ಮ (ಪತಿ/ಪತ್ನಿಯರದೂ ಸೇರಿ) ಆಸ್ತಿಯನ್ನು ಘೋಷಣೆ ಮಾಡಿಕೊಂಡಿದ್ದು, ಅದು ಮಾಧ್ಯಮಗಳಲ್ಲಿ ವರದಿಯಾಗಿರುವುದನ್ನು ನೀವು ಗಮನಿಸಿರುತ್ತೀರಿ. ಅವರಲ್ಲಿ ಬಹುತೇಕರು ಕೋಟ್ಯಧೀಶರೆಂಬ ನಂಬಲಾಗದ ಆದರೆ ಗಾಬರಿ ಹುಟ್ಟಿಸುವಂತಹ ಸತ್ಯವನ್ನು ಇದು ಬಹಿರಂಗಪಡಿಸಿದೆ. ಅಸೋಸಿಯೇಶನ್ ಫಾರ್ ಡೆಮಾಕ್ರೆಟಿಕ್ ರಿಫಾರ್ಮ್ಸ್ (ಎಡಿಆರ್) ವರದಿಯ ಪ್ರಕಾರ, ಒಂದನೇ ಹಂತದಲ್ಲಿ ನಾಮಪತ್ರ ಸಲ್ಲಿಸಿದ 450 ಅಭ್ಯರ್ಥಿಗಳು (ಒಟ್ಟು ಅಭ್ಯರ್ಥಿಗಳ ಶೇ.28) ಕೋಟ್ಯಧಿಪತಿಗಳು (ಒಂದು ಕೋಟಿಗೂ ಹೆಚ್ಚು ಆಸ್ತಿವಂತರು) ಎಂದು ತಿಳಿದುಬಂದಿದೆ. ಇವರಲ್ಲಿ ಒಟ್ಟು 716 ಕೋಟಿ ರೂಪಾಯಿ ಮೌಲ್ಯದ ಆಸ್ತಿಯೊಂದಿಗೆ ಕಾಂಗ್ರೆಸ್ ಅಭ್ಯರ್ಥಿ ನಕುಲನಾಥ್ ಪ್ರಥಮ ಸ್ಥಾನದಲ್ಲಿದ್ದಾರೆ.

ಎರಡನೇ ಹಂತದಲ್ಲಿ, 1210 ಅಭ್ಯರ್ಥಿಗಳಲ್ಲಿ 390 ಜನ ಕೋಟ್ಯಾಧೀಶರಿದ್ದರು. ವೆಂಕಟರಮಣೆಗೌಡ (ಕಾಂಗ್ರೆಸ್), ಡಿ.ಕೆ.ಸುರೇಶ (ಕಾಂಗ್ರೆಸ್) ಹಾಗೂ ಹೇಮಾ ಮಾಲಿನಿ (ಬಿಜೆಪಿ) ಅವರು ಕ್ರಮವಾಗಿ 622 ಕೋಟಿ, 593 ಕೋಟಿ ಹಾಗೂ 278 ಕೋಟಿ ರೂಪಾಯಿಗಳ ಆಸ್ತಿವಂತರಾಗಿ ಅಗ್ರಸ್ಥಾನದಲ್ಲಿದ್ದಾರೆ. ಕೇರಳದ ಕೊಟ್ಟಾಯಂ ಕ್ಷೇತ್ರದಿಂದ ನಮ್ಮ ಪಕ್ಷ ಎಸ್‌ಯುಸಿಐ(ಸಿ)ದಿಂದ ಸ್ಪರ್ಧೆಗಿಳಿದಿದ್ದ ಕಾಮ್ರೇಡ್ ವಿಪಿ ಕೋಚುಮನ್, ಕೇವಲ 2,230 ರೂಪಾಯಿಯೊಂದಿಗೆ ಐದನೇ ಕನಿಷ್ಠ ಆಸ್ತಿವಂತರಾಗಿದ್ದರು. ಮೂರನೇ ಹಂತದಲ್ಲಿ ಶೇ 29ರಷ್ಟು ಅಭ್ಯರ್ಥಿಗಳು ಕೋಟ್ಯಧಿಪತಿಗಳಿದ್ದರು.

ನಾಲ್ಕನೇ ಹಂತದ ಚುನಾವಣೆಯಲ್ಲಿ ಸ್ಪರ್ಧಿಸಿದ 1717 ಅಭ್ಯರ್ಥಿಗಳ ಪೈಕಿ 1710 ಮಂದಿ ತಮ್ಮ ಅಫಿಡವಿಟ್‌ನಲ್ಲಿ ಘೋಷಿಸಿಕೊಂಡಿರುವಂತೆ 477 ಅಭ್ಯರ್ಥಿಗಳು 'ಕೋಟ್ಯಧಿಪತಿಗಳು'. ಆಂಧ್ರಪ್ರದೇಶದ ಗುಂಟೂರು ಕ್ಷೇತ್ರದಲ್ಲಿ ತೆಲುಗುದೇಶಂ ಪಕ್ಷದಿಂದ ಸ್ಪರ್ಧಿಸಿದ ಅಭ್ಯರ್ಥಿ 5075 ಕೋಟಿಗೂ ಮೀರಿದ ಆಸ್ತಿಯನ್ನು ಹೊಂದಿದ್ದಾರೆ! ತೆಲಂಗಾಣದ ಚೆವೆಳ್ಳಾ ಕ್ಷೇತ್ರದಲ್ಲಿ ಬಿಜೆಪಿಯನ್ನು ಪ್ರತಿನಿಧಿಸಿರುವ ಕೊಂಡಾ ವಿಶ್ವೇಶ್ವರರೆಡ್ಡಿ ಎರಡನೇ ಸ್ಥಾನದಲ್ಲಿದ್ದು ಅವರ ಆಸ್ತಿಯ ಒಟ್ಟು ಮೌಲ್ಯ 4,568 ಕೋಟಿ ದಾಟಿದೆ! ಎಡಿಆರ್ ಪ್ರಕಾರ, ಐದನೇ ಹಂತದ 695 ಅಭ್ಯರ್ಥಿಗಳಲ್ಲಿ 227 ಅಭ್ಯರ್ಥಿಗಳು ಕೋಟಿ ವೀರರು. ಬಿಜೆಪಿಯ ಅನುರಾಗ್ ಶರ್ಮಾ, 212 ಕೋಟಿ ಮೌಲ್ಯದೊಂದಿಗೆ ಶ್ರೀಮಂತ ಅಭ್ಯರ್ಥಿಯಾಗಿದ್ದಾರೆ. ನಮ್ಮ ಪಕ್ಷದಿಂದ ಉತ್ತರ ಪ್ರದೇಶದ ಪ್ರತಾಪಗಡ ಹಾಗೂ ಪಶ್ಚಿಮ ಬಂಗಾಳದ ಶ್ರೀರಾಮಪುರ ಕ್ಷೇತ್ರಗಳಲ್ಲಿ ಸ್ಪರ್ಧಿಸಿದ ಅಭ್ಯರ್ಥಿಗಳಾದ ರಾಮಕುಮಾರ್ ಯಾದವ್ ಹಾಗೂ ಪ್ರದ್ಯುತ್ ಚೌಧರಿಯವರು ಕೆಳಗಿನಿಂದ ಕ್ರಮವಾಗಿ 2ನೇ ಮತ್ತು ಏಳನೇ ಸ್ಥಾನಗಳಲ್ಲಿದ್ದರು. 6ನೇ ಹಂತದಲ್ಲಿ, ಬಿಜೆಪಿ ನಾಯಕ ನವೀನ್ ಜಿಂದಾಲ್ ಹರಿಯಾಣದ ಕುರುಕ್ಷೇತ್ರದಲ್ಲಿ ಸ್ಪರ್ಧಿಸಿದ ಅತ್ಯಂತ ಶ್ರೀಮಂತ ಅಭ್ಯರ್ಥಿಯಾಗಿದ್ದು ಅವರ ಆಸ್ತಿ ಮೌಲ್ಯ 1241 ಕೋಟಿ. ಆದರೆ ನಮ್ಮ ಪಕ್ಷ ಎಸ್‌ಯುಸಿಐ (ಸಿ) ದಿಂದ ಸ್ಪರ್ಧಿಸಿದ ಕಾಮ್ರೇಡ್ ರಾಮ್‌ಕುಮಾರ್ ಯಾದವ್ (ಉತ್ತರ ಪ್ರದೇಶದ ಪ್ರತಾಪ್‌ಗಡಕ್ಷೇತ್ರ) ಅವರು ಹೊಂದಿದ ಹಣ ರೂ. 1686 ಮಾತ್ರ! ಏಳನೇ ಅಥವಾ ಕೊನೆಯ ಹಂತದಲ್ಲಿ 33% ಅಭ್ಯರ್ಥಿಗಳು ಆಗರ್ಭ ಶ್ರೀಮಂತರಾಗಿದ್ದಾರೆ.

ದೇಶದ 18ನೇ ಲೋಕಸಭಾ ಚುನಾವಣೆಯಲ್ಲಿ 1187 (14.23%) ಅಭ್ಯರ್ಥಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳಿವೆಯೆಂದೂ ಎಡಿಆರ್ ವರದಿ ಮಾಡಿದೆ. ಈ ಪ್ರಕರಣಗಳಲ್ಲಿ ಕೊಲೆ, ಸುಲಿಗೆ, ಅತ್ಯಾಚಾರ, ಗೂಂಡಾಗಿರಿ ಹಾಗೂ ಹಣದ ದುರ್ಬಳಕೆಗಳಂತಹ ಗುರುತರ ಆರೋಪಗಳೂ ಇವೆ.

ಕಳೆದ ಲೋಕಸಭೆಯ 543 ಸಂಸದರ ಪೈಕಿ 475 ಅಭ್ಯರ್ಥಿಗಳು ಕೋಟ್ಯಾಧೀಶರಾಗಿದ್ದರು. ಇದರರ್ಥ, ಸಂಸತ್ತಿನ ಕೆಳಮನೆಯ 87.5% ರಷ್ಟು ಸದಸ್ಯರು ಕೋಟಿ ರೂಪಾಯಿಗಳಿಗಿಂತ ಹೆಚ್ಚು ಆಸ್ತಿಯನ್ನು ಹೊಂದಿ ದೇಶದ ಶ್ರೀಮಂತರ ವಲಯಕ್ಕೆ ಸೇರಿದವರಾಗಿದ್ದರು. ಅವರ ಸರಾಸರಿ ಸಂಪತ್ತು 21 ಕೋಟಿ ರೂಪಾಯಿಗಳು! ನಮ್ಮ ದೇಶದ ಸಂಸದರು ಹಾಗೂ ಜನಸಾಮಾನ್ಯರ ಆಸ್ತಿಯಲ್ಲಿ ಅಜಗಜಾಂತರ ವ್ಯತ್ಯಾಸವಿದೆ. ನೌಕರರ (ಹೆಚ್ಚು ಕಡಿಮೆ ಜನಸಂಖ್ಯೆಯ 10%) ಸರಾಸರಿ ತಿಂಗಳ ವೇತನ ರೂ 32,000. ಮಹಾತ್ಮಾಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ದುಡಿಯುವ ಕೂಲಿ ಕಾರ್ಮಿಕನ ದಿನದ ಸರಾಸರಿ ವೇತನ ಕೇವಲ ರೂ. 250! ಅವರು 100 ದಿನ ಕೆಲಸ ಮಾಡಿದಾಗ 25,000 ರೂ ಗಳಿಸಿದರೆ, ನಮ್ಮ ಸಂಸದರ ಸರಾಸರಿ ಸಂಪತ್ತು 21 ಕೋಟಿ ರೂಪಾಯಿಗಳು!

ಹಾಗಾದರೆ ಈ ಸಂಸದರು ಯಾರ ಪ್ರತಿನಿಧಿಗಳು? ಅವರು ಎಂದಾದರೂ ಹಸಿವು, ಬಡತನ, ನಿರ್ಗತಿಕತೆ, ನಿರುದ್ಯೋಗ ಹಾಗೂ ಇನ್ನಿತರ ಸಮಸ್ಯೆಗಳಿಂದ ಬಳಲುತ್ತಿರುವ ಕೋಟ್ಯಂತರ ಶೋಷಿತರ ಬಗ್ಗೆ ಯಾವುದೇ ಕಾಳಜಿ ಹೊಂದಿದ್ದಾರೆಯೇ? ಕೃಷಿಯಲ್ಲಿ ಮಿತಿಮೀರಿದ ಖರ್ಚುಗಳಿಂದಾಗಿ ನಲುಗಿ ತಾವು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದೆ ದಿಕ್ಕೆಡುತ್ತಿರುವ ರೈತ ಸಮುದಾಯದ ಕಷ್ಟಗಳಿಗೆ ಎಂದಾದರೂ ಸ್ಪಂದಿಸಿದ್ದಾರೆಯೇ?

ಹಿಂದಿ ಭಾಷೆಯ ದಿನಪತ್ರಿಕೆ, 'ದೈನಿಕಜಾಗರಣ'ವು ತನ್ನ ಮೇ 17, 2024ರ ಸಂಚಿಕೆಯಲ್ಲಿ, 'ಕೋಟ್ಯಧಿಪತಿ ರಾಜಕಾರಣಿಗಳು ಜನತೆಯ ಕಷ್ಟಕೋಟಲೆಗಳಿಗೆ ಕಿವುಡು, ಕುರುಡರಾಗಿರುವಾಗ, ಎಸ್‌ಯುಸಿಐ (ಸಿ) ಪಕ್ಷ ಮಾತ್ರ ಮಿಲಿಯಾಂತರ ಶೋಷಿತರ ಸಂಕಷ್ಟಗಳಿಗೆ ದನಿ ಎತ್ತುವ ಕೆಲಸ ಮಾಡಿದೆ' ಎಂದು ಸರಿಯಾಗಿ ಗುರುತಿಸಿದೆ.

## ಇಂಜಿನಿಯರಿಂಗ್ ಕಾಲೇಜುಗಳ ಶುಲ್ಕ ಹೆಚ್ಚಳ

### ರಾಜ್ಯ ಸರ್ಕಾರದ ನಿರ್ಧಾರಕ್ಕೆ AIDSO ವಿರೋಧ!

ಖಾಸಗಿ ಕಾಲೇಜುಗಳ ಸರ್ಕಾರಿ ಕೋಟಾದಲ್ಲಿ 96,574 ರೂ.ಗಳಿಂದ 1,06,231 ರೂ.ಗಳ ವರೆಗೆ ಶುಲ್ಕ ಏರಿಸಿದ್ದು, ಟೈಪ್-1 ಕಾಲೇಜುಗಳಲ್ಲಿ 1.69 ಲಕ್ಷ ರೂ.ಗಳಿಂದ 1.86ಲಕ್ಷ ರೂ.ಗಳವರೆಗೆ ಹಾಗೂ ಟೈಪ್-2 ಕಾಲೇಜುಗಳಲ್ಲಿ 2.37 ಲಕ್ಷ ರೂ.ಗಳಿಂದ 2.61 ಲಕ್ಷ ರೂ.ಗಳವರೆಗೆ ಶುಲ್ಕ ಏರಿಸಲಾಗಿದೆ.

ಈಗಾಗಲೇ ಯಾವುದೇ ಅಡೆ-ತಡೆ ಇಲ್ಲದೇ ಮ್ಯಾನೇಜ್ಮೆಂಟ್ ಕೋಟಾ ಅಡಿಯಲ್ಲಿ ಬರುವ ಶುಲ್ಕವನ್ನು ಮನಸೋಇಚ್ಛೆ ಖಾಸಗಿ ಕಾಲೇಜುಗಳು ಏರಿಸುತ್ತಿವೆ. ಬೆಂಗಳೂರಿನ ಕಾಲೇಜು ಒಂದರಲ್ಲಿ ಮ್ಯಾನೇಜ್ಮೆಂಟ್ ಸೀಟಿನ ಶುಲ್ಕ ರೂ. 26 ಲಕ್ಷದಷ್ಟಿದೆ. ಇಂತಹ ಸಂದರ್ಭದಲ್ಲಿ, ಸರ್ಕಾರದ ನಿಯಂತ್ರಣದ ಕೆಳಗೆ ಬರುವ ಶುಲ್ಕವನ್ನಾದರೂ ಏರಿಸದಂತೆ ಸರ್ಕಾರ ಕ್ರಮ ಕೈಗೊಳ್ಳಬೇಕಿತ್ತು. ಈ ರೀತಿ ಪ್ರತಿ ವರ್ಷವೂ ಶೈಕ್ಷಣಿಕ ಶುಲ್ಕ ಏರಿಕೆಯ ಮೂಲಕ ಶಿಕ್ಷಣವನ್ನು ಸಂಪೂರ್ಣವಾಗಿ ವ್ಯಾಪಾರೀ ವಹಿವಾಟಿನಂತೆ ಮಾಡಲು ಸರ್ಕಾರವೇ ಅನುಮತಿ ನೀಡುತ್ತಿದೆ. ಇದು ಅತ್ಯಂತ ದುರದೃಷ್ಟಕರ. ಇದೀಗ, ಖಾಸಗೀ ಕಾಲೇಜುಗಳಲ್ಲಿ, ಇಂಜಿನಿಯರಿಂಗ್ ಶಿಕ್ಷಣ ಪಡೆಯುವುದು ಮಧ್ಯಮ ವರ್ಗದ ಕುಟುಂಬಗಳಿಗೆ ಮರೀಚಿಕೆಯಾಗಿದೆ. ಹೀಗಿದ್ದಾಗ್ಯೂ, ಪ್ರತೀ ವರ್ಷ ಶುಲ್ಕ ಏರಿಕೆ ನಡೆದರೆ, ಮುಂದಿನ ದಿನಗಳಲ್ಲಿ ಮಧ್ಯಮ ವರ್ಗದ ವಿದ್ಯಾರ್ಥಿಗಳು ಯಾರೂ ಸಹ, ಖಾಸಗೀ ಕಾಲೇಜುಗಳಲ್ಲಿ ಇಂಜಿನಿಯರಿಂಗ್ ಸೇರುವುದು ಸಾಧ್ಯವಾಗುವುದಿಲ್ಲ. ಇದಾಗಲೇ, ಖಾಸಗೀ ಅನುದಾನಿತ ಇಂಜಿನಿಯರಿಂಗ್ ಸೀಟುಗಳನ್ನು ಕಡಿಮೆ ಮಾಡುತ್ತಿರುವ ಸರ್ಕಾರ, ಶುಲ್ಕ ಏರಿಕೆಯ ಒತ್ತಡಕ್ಕೆ ಮಣಿದಿರುವುದು ವಿದ್ಯಾರ್ಥಿ ವಿರೋಧಿ ನಡೆಯಾಗಿದೆ.

ಹಾಗಾಗಿ ರಾಜ್ಯ ಸರ್ಕಾರ ತನ್ನ ನಿರ್ಧಾರವನ್ನು ಹಿಂಪಡೆಯಬೇಕೆಂದು ಎಐಡಿಎಸ್‌ಓ ಕರ್ನಾಟಕ ರಾಜ್ಯ ಸಮಿತಿಯು ಆಗ್ರಹಿಸಿದೆ.

# ಅಗ್ನಿವೀರ್

...1ನೇ ಪುಟದಿಂದ

ಅಗ್ನಿವೀರರು ಸೇವೆಯ ಸಮಯದಲ್ಲಿ ಸಾವನ್ನಪ್ಪಿದರೆ ಅಥವಾ ಕೊಲ್ಲಲ್ಪಟ್ಟರೆ ಅವನ ಕುಟುಂಬಕ್ಕೆ 42 ಲಕ್ಷ ರೂಪಾಯಿ ರಕ್ಷಣಾ ವಿಮಾ ಸೇರಿದಂತೆ ಒಂದು ಕೋಟಿ ರೂಪಾಯಿಯನ್ನು ಪರಿಹಾರವಾಗಿ ಕೊಡಲಾಗುತ್ತದೆ. ನಾಲ್ಕು ವರ್ಷಗಳ ಅವಧಿ ಮುಗಿದ ನಂತರ ಕೇವಲ ಶೇ.25ರಷ್ಟು ಅಗ್ನಿವೀರರನ್ನು ಖಾಯಂ ರಕ್ಷಣಾ ಸೇವೆಗಳಲ್ಲಿ ಉಳಿಸಿಕೊಳ್ಳಲಾಗುತ್ತದೆ. ಉಳಿದವರು ಮತ್ತೆ ಉದ್ಯೋಗಕ್ಕಾಗಿ ಬೀದಿಬೀದಿ ಅಲೆಯಬೇಕು. ನಿರುದ್ಯೋಗಿ ಯುವ ಜನರನ್ನು ಶೋಷಿಸಲು ಎಂತಹ ವಿನೂತನ ಮಾರ್ಗ ನೋಡಿ!

### ಯೋಜನೆಯ ವಿರುದ್ಧ ಭುಗಿಲೆದ್ದ ಆಕ್ರೋಶ

ಪ್ರತಿ ವರ್ಷ ಸುಮಾರು 55 ರಿಂದ 60 ಸಾವಿರ ಮಿಲಿಟರಿ ಸಿಬ್ಬಂದಿ ಸೇವೆಯಿಂದ ನಿವೃತ್ತರಾಗುತ್ತಾರೆ. ಕೊರೋನಾ ಸಾಂಕ್ರಾಮಿಕ ರೋಗದಿಂದಾಗಿ 2020 ಮತ್ತು 2021 ರಲ್ಲಿ ಯಾವುದೇ ಹೊಸ ನೇಮಕಾತಿಯನ್ನು ಮಾಡಲಾಗಿಲ್ಲ. ಇದರಿಂದಾಗಿ ವಿಶೇಷವಾಗಿ ಗ್ರಾಮೀಣ ಪ್ರದೇಶದ ಬಡವರ್ಗದ ಲಕ್ಷಾಂತರ ನಿರುದ್ಯೋಗಿ ಯುವಕರು ಖಾಯಂ ರಕ್ಷಣಾ ಉದ್ಯೋಗಗಳಿಗೆ ಸೇರಲು ಕಾತರದಿಂದ ಕಾಯುತ್ತಿದ್ದರು. ಆದರೆ ಇದರ ಬದಲಾಗಿ, 2022ರ ಅಂತ್ಯದ ವೇಳೆಗೆ ಅಗ್ನಿಪಥ್ ಯೋಜನೆಯನ್ನು ಘೋಷಿಸಿದಾಗ, ಜಮ್ಮು ಮತ್ತು ಕಾಶ್ಮೀರ, ಪಂಜಾಬ್, ಹರಿಯಾಣದಿಂದ ಹಿಡಿದು ದಕ್ಷಿಣದ ರಾಜ್ಯಗಳವರೆಗೆ ದೇಶದ ಪ್ರಮುಖ ಭಾಗಗಳಲ್ಲಿ ಉದ್ಯೋಗಾಕಾಂಕ್ಷಿ ಯುವಕರಿಂದ ಮಿಲಿಟರಿ ಸೇವೆಗಳಲ್ಲಿನ ಗುತ್ತಿಗೆ ನೇಮಕಾತಿ ವ್ಯವಸ್ಥೆಯ ವಿರುದ್ಧ ಹಿಂಸಾತ್ಮಕ ಹೋರಾಟಗಳು ಭುಗಿಲೆದ್ದವು. ಮಿಲಿಟರಿ ಸೇವೆಗೆ ತಮ್ಮನ್ನು ಸಮರ್ಥರನ್ನಾಗಿಸಿಕೊಳ್ಳಲು ಅವರು ವರ್ಷಾನುಗಟ್ಟಲೆ ಕಷ್ಟಪಡುತ್ತಾರೆ. ಆದರೆ ಅವರಿಗೆ ಖಾಯಂ ಉದ್ಯೋಗವನ್ನು ನಿರಾಕರಿಸುವಂತೆ ಅಗ್ನಿಪಥ್ ಯೋಜನೆಯನ್ನು ರೂಪಿಸಲಾಯಿತು. ನಾಲ್ಕು ವರ್ಷಗಳ ಗುತ್ತಿಗೆ ಸೇವೆಯ ನಂತರ ಅವರ ಭವಿಷ್ಯವೇನು? ಮತ್ತೆ ಅವರು ನಿರುದ್ಯೋಗಿಗಳಾಗುತ್ತಾರೆ. ಹಾಗಾಗಿ ಅವರ ಈ ಹೋರಾಟವು ಸಂಪೂರ್ಣವಾಗಿ ನ್ಯಾಯಯುತವಾದುದು. ಆದರೆ ಸರ್ವಾಧಿಕಾರಿ ಬಿಜೆಪಿ ಸರ್ಕಾರಕ್ಕೆ ಈ ಪ್ರತಿಭಟನೆಯನ್ನು ಪೊಲೀಸ್ ದೌರ್ಜನ್ಯದಿಂದ ಹತ್ತಿಕ್ಕಲು ಯಾವುದೇ ಹಿಂಜರಿಕೆಯಾಗಲಿಲ್ಲ.

### ನಿರುದ್ಯೋಗ ಪರಿಸ್ಥಿತಿ

ನಿರುದ್ಯೋಗ ಸಮಸ್ಯೆಯು ಮುಗಿಲು ಮುಟ್ಟುತ್ತಿದೆ, (ಕಳೆದ 45-50 ವರ್ಷಗಳಲ್ಲೇ ಅತಿ ಹೆಚ್ಚು) ಮತ್ತು ಶೇ 83 ರಷ್ಟು ಯುವಕರು ನಿರುದ್ಯೋಗಿಗಳಾಗಿದ್ದಾರೆ ಎಂದು ಹೇಳಲಾಗುತ್ತಿದೆ. ಜೊತೆಗೆ ಐಐಟಿಯಿಂದ ಹೊರಬಂದಿರುವ ಶೇ 20 ರಿಂದ 30 ರಷ್ಟು ಇಂಜಿನಿಯರ್‌ಗಳು ಬೀದಿಗಳಲ್ಲಿ ಅಲೆಯುತ್ತಿರುವಾಗ, ನಾಲ್ಕು ವರ್ಷಗಳ ಗುತ್ತಿಗೆ ಮಿಲಿಟರಿ ಕೆಲಸ ಮುಗಿದ ನಂತರ ಈ ಅಗ್ನಿವೀರರ ಭವಿಷ್ಯವೇನು? ಇಲ್ಲಿ ಖಾಯಂ ಉದ್ಯೋಗದ ಪರಿಕಲ್ಪನೆಯನ್ನು ಸಂಪೂರ್ಣವಾಗಿ ತೊಡೆದು ಹಾಕಿ, ಅದನ್ನು ಕಡಿಮೆ ಸಂಬಳದ ಅಲ್ಪಾವಧಿ ಉದ್ಯೋಗವನ್ನಾಗಿ ಬದಲಾಯಿಸುವುದು ಈ ಬಂಡವಾಳಶಾಹಿ ಜಾಗತೀಕರಣದ ರೂಪಿತ ಉದ್ದೇಶವಾಗಿದೆ ಎಂಬುದು ನಮಗೆ ತಿಳಿದಿದೆ. ಈ ಗುತ್ತಿಗೆ ನೌಕರರು ಖಾಯಂ ನೌಕರರಂತೆಯೇ ಕೆಲಸವನ್ನು ನಿರ್ವಹಿಸುತ್ತಾರೆ, ಆದರೆ ಯಾವುದೇ ಉದ್ಯೋಗ ಭದ್ರತೆ ಇಲ್ಲದೆ ಶೋಚನೀಯ ಮೊತ್ತದ ವೇತನದಲ್ಲಿ. ಇನ್ನೊಂದು ಕಡೆ ಹೊರಗುತ್ತಿಗೆ ಎನ್ನುವುದು ಕೂಡ ಇದೇ ರೀತಿ ಕಾರ್ಮಿಕ ಶೋಷಣೆಯ ವಿಭಿನ್ನ ರೂಪವಾಗಿದೆ. ಕೇವಲ ಖಾಸಗಿ ವಲಯ ಮಾತ್ರವಲ್ಲದೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೂಡ ಕೆಲವು ಉನ್ನತ ಅಧಿಕಾರಿಗಳನ್ನು ಹೊರತುಪಡಿಸಿ ಖಾಯಂ ನೌಕರರ ನೇಮಕಾತಿಯನ್ನು ನಿಲ್ಲಿಸಿಬಿಟ್ಟಿವೆ. ಆದ್ದರಿಂದ ಅಗ್ನಿವೀರರು ರಕ್ಷಣಾ ಕೆಲಸದಿಂದ ವಜಾಗೊಂಡ ನಂತರ ಹೆಚ್ಚೆಂದರೆ ತಿಂಗಳಿಗೆ 10 ರಿಂದ 15 ಸಾವಿರ ವರೆಗಿನ ವೇತನ ಹೊಂದಿರುವ ಭದ್ರತಾ ಸಿಬ್ಬಂದಿಯ ಕೆಲಸವನ್ನೋ ಅಥವಾ ಖಾಸಗಿ ವಿಭಾಗದಲ್ಲಿ ಅದೇ ರೀತಿಯ ಉದ್ಯೋಗವನ್ನೋ ಪಡೆಯಬಹುದು. ಈ ಕಠೋರ ಪರಿಸ್ಥಿತಿ ಒಂದೆಡೆ ಯುವ ಮನಸ್ಸುಗಳನ್ನು ತಲ್ಲಣಗೊಳಿಸುತ್ತಿದ್ದರೆ ಮತ್ತೊಂದೆಡೆ ಹತಾಶೆ ಮತ್ತು ಖಿನ್ನತೆಯನ್ನು ಹೆಚ್ಚಿಸುತ್ತಿದೆ. ಅಗ್ನಿವೀರರು ಇದಕ್ಕೆ ಹೊರತಾಗಿಲ್ಲ.

### ಖಾಸಗಿ ಕೂಲಿ ಆಳುಗಳು?

ಮೃತ್ಯುಶಯ್ಯೆಯಲ್ಲಿರುವ ಬಂಡವಾಳಶಾಹಿ ವ್ಯವಸ್ಥೆಯ ಹಾಗೂ ಸಾಮ್ರಾಜ್ಯಶಾಹಿ ಯುಗದ ಈ ಹಂತದಲ್ಲಿ ಮುಸುಕಿನ ಯುದ್ಧ, ಪ್ರಾಕ್ಸಿ ಯುದ್ಧ, ದೀರ್ಘಕಾಲದ ಸ್ಥಳೀಯ ಯುದ್ಧ, ಆಕ್ರಮಣಕಾರಿ ಯುದ್ಧ, ದಂಗೆ, ಭಯೋತ್ಪಾದನೆ - ಎಲ್ಲವೂ ಹೆಚ್ಚುತ್ತಿವೆ. ಆರ್ಥಿಕತೆಯ ಮಿಲಿಟರಿಕರಣವನ್ನು ಹೆಚ್ಚಿಸಲು, ಶಸ್ತ್ರಾಸ್ತ್ರಗಳ ಸಂಗ್ರಹವನ್ನು ಬಿಡುಗಡೆ ಮಾಡಲು, ರಾಜಕೀಯ ಲಾಭದ ಪರಿಧಿಯನ್ನು ಹೆಚ್ಚಿಸಿಕೊಳ್ಳಲು ಮತ್ತು ವಿರೋಧಿ ದೇಶಗಳನ್ನು ಬೆದರಿಸಿ ತಮಗೆ ಶರಣಾಗುವಂತೆ ಮಾಡಲು ಸಾಮ್ರಾಜ್ಯಶಾಹಿ ಶಕ್ತಿಗಳೇ ಈ ಯುದ್ಧಗಳನ್ನು ರೂಪಿಸುತ್ತಿವೆ. ಇಂತಹ ಯುದ್ಧಗಳನ್ನು ನಡೆಸುವಾಗ ಆಕ್ರಮಣಕಾರಿ ದೇಶಗಳು ಸಹ ಸಾಕಷ್ಟು ದೊಡ್ಡ ಸಂಖ್ಯೆಯ ಸಾವು ನೋವುಗಳನ್ನು ಎದುರಿಸುತ್ತವೆ. ಆದ್ದರಿಂದ ಖಾಸಗಿ ಕೂಲಿ ಆಳುಗಳಿಗೆ ಬೇಡಿಕೆ ಹೆಚ್ಚುತ್ತಿದೆ. ಇದರಿಂದಾಗಿ ಆ ದೇಶಗಳ ಮುಖ್ಯ ರಕ್ಷಣಾ ಪಡೆಗಳು ಹಾಗೆಯೇ ಉಳಿಯುತ್ತವೆ. ಅಗ್ನಿಪಥ್ ಖಾಸಗಿ ಸೈನ್ಯದ ರೂಪವಲ್ಲದೆ ಬೇರೇನೂ ಅಲ್ಲ. ಈ ಅಗ್ನಿವೀರರನ್ನು ಮುಂಚೂಣಿಯ ಸೈನಿಕರಂತೆ ಯುದ್ಧ ವಲಯಗಳಿಗೆ ಕಳುಹಿಸಿ ಅವರನ್ನು ಹೆಚ್ಚಿನ ಅಪಾಯಕ್ಕೆ ಒಡ್ಡಲಾಗುತ್ತದೆ. ಈ ಗುತ್ತಿಗೆ ಸೈನಿಕರ ಬಗ್ಗೆ ಸರ್ಕಾರ ಯಾವುದೇ ಜವಾಬ್ದಾರಿಗಳನ್ನು ತೆಗೆದುಕೊಳ್ಳುವುದಿಲ್ಲ. ಇದು ಇಂದಿನ ಬಂಡವಾಳಶಾಹಿ ಸಾಮ್ರಾಜ್ಯಶಾಹಿ ವ್ಯವಸ್ಥೆಯ ಅತ್ಯಂತ ಅಸಹ್ಯ, ಅಮಾನವೀಯ ಮತ್ತು ಅನೈತಿಕ ಮುಖವಾಗಿದೆ.




ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯ ಶಹಾಬಾದ್ ಸ್ಥಳೀಯ ಸಮಿತಿಯಿಂದ ಮಹಿಳಾ ಶಿಬಿರವನ್ನು ಜುಲೈ 1 ರಂದು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಸಂಘಟನೆಯ ರಾಜ್ಯ ಕಾರ್ಯದರ್ಶಿಗಳಾದ ಕಾಮ್ರೇಡ್ ಶೋಭಾ ಎಸ್. ಮಾತನಾಡಿದರು.

# ಮೂರು ಹೊಸ ಕ್ರಿಮಿನಲ್ ಕಾನೂನುಗಳು: ನೂರಾರು ಪ್ರಶ್ನೆಗಳು

ಹಳೆಯ ವಸಾಹಾತುಶಾಹಿ ಕಾಲದ ಮೂರು ಕಾಯ್ದೆಗಳಾದ ಭಾರತೀಯ ದಂಡ ಸಂಹಿತೆ 1886, ಕ್ರಿಮಿನಲ್ ಪ್ರೊಸೀಜರ್ ಕೋಡ್ 1973 ಮತ್ತು ಭಾರತೀಯ ಎವಿಡೆನ್ಸ್ ಆಕ್ಟ್ 1872, ಇವುಗಳ ಬದಲಿಗೆ ಮೂರು ಹೊಸ ಕಾನೂನುಗಳಾದ 'ಭಾರತೀಯ ನ್ಯಾಯ ಸಂಹಿತಾ, ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ ಮತ್ತು ಭಾರತೀಯ ಸಾಕ್ಷಿ ಅಧಿನಿಯಮ'ಗಳನ್ನು ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಕೊನೆಗಳಿಗೆಯಲ್ಲಿ ಮಂಡಿಸಲಾಯಿತು. ಹಳೆಯ ಕಾನೂನುಗಳಿಗಿದ್ದ ಇಂಗ್ಲೀಷ್ ಹೆಸರಿನ ಬದಲು ಭಾರತೀಯ ಆವೃತ್ತಿಗಳು ಎಂದು ಭಾಸವಾಗುವಂತೆ ಸಂಸ್ಕೃತ ಪರಿಭಾಷೆಯಲ್ಲಿ ಮಸೂದೆಗಳಿಗೆ ಹಿಂದುತ್ವವಾದಿ ಹೆಸರಿಡಲಾಗಿದೆ.

ಈ ಮಸೂದೆಗಳು ಹಳೆಯ ಕ್ರಿಮಿನಲ್ ಕಾನೂನುಗಳನ್ನು ಆಧುನೀಕರಿಸುವ ಮತ್ತು ಸರಳಗೊಳಿಸುವ ಗುರಿಯನ್ನು ಹೊಂದಿವೆ ಎಂದು ಸರ್ಕಾರ ಹೇಳಿಕೊಂಡರೂ, ಈ ಮಸೂದೆಗಳ ಸುತ್ತ ಹಲವು ವಿವಾದಗಳು ಹುಟ್ಟಿಕೊಂಡಿವೆ. ಗಮನಾರ್ಹವಾಗಿ, ಈ ಮಸೂದೆಗಳನ್ನು ರಚಿಸುವಾಗ, ನ್ಯಾಯಾಂಗ, ವಕೀಲರ ಸಂಘಗಳು, ನಾಗರಿಕ ಸಮಾಜ ಅಥವಾ ಅಂಚಿನಲ್ಲಿರುವ ಸಮುದಾಯಗಳ ಯಾವುದೇ ಪ್ರತಿನಿಧಿಗಳು ಭಾಗಿಯಾಗಿಲ್ಲ. ಅವರ ಪ್ರತಿಕ್ರಿಯೆಯನ್ನು ಪಡೆಯಲು ಸಾರ್ವಜನಿಕರೊಂದಿಗೆ ಯಾವುದೇ ಪೂರ್ವ ಸಮಾಲೋಚನೆ ಇರಲಿಲ್ಲ. ಈ ಮಸೂದೆಗಳನ್ನು ಬಿಜೆಪಿ ಸರ್ಕಾರವು ಏಕಪಕ್ಷೀಯವಾಗಿ ಸಿದ್ಧಪಡಿಸಿದ್ದು, ಸಾಮಾನ್ಯ ಜನರ ಹಿತಾಸಕ್ತಿಗೆ ಧಕ್ಕೆ ತರುವಂತಹ ನಿರಂಕುಶ ನಿರ್ಧಾರಗಳನ್ನು ತೆಗೆದುಕೊಳ್ಳುವ ಅದರ ಪ್ರವೃತ್ತಿಗೆ ಅನುಗುಣವಾಗಿಯೇ ಇವು ಸಿದ್ದವಾಗಿವೆ.

**ದೇಶದ್ರೋಹವನ್ನು ರದ್ದುಗೊಳಿಸಲಾಗಿದೆಯೇ?**

ಹೊಸ ನ್ಯಾಯ ಸಂಹಿತಾ ಮಸೂದೆಯಲ್ಲಿ ವಸಾಹತುಶಾಹಿ ಕಾಲದ 'ದೇಶದ್ರೋಹ' ಎಂಬ ಪದವನ್ನು ಕೈಬಿಡಲಾಗಿದೆ ಎಂದು ಬಿಜೆಪಿ ಸರ್ಕಾರ ಪ್ರತಿಪಾದಿಸುತ್ತಿದೆ. ಆದರೆ ಭಾರತೀಯ ದಂಡ ಸಂಹಿತೆ (IPC) 1860 ರ ಸೆಕ್ಷನ್ 124 ಅನ್ನು ಬದಲಿಸುವ ಹೊಸ ಮಸೂದೆಯ ಸೆಕ್ಷನ್ 150 ಅನ್ನು ವಾಸ್ತವದಲ್ಲಿ ಹೆಚ್ಚು ದಬ್ಬಾಳಿಕೆಯ ಸಾಧನವಾಗಿ ಉಪಯೋಗವಾಗುವಂತೆ ವಿನ್ಯಾಸಗೊಳಿಸಲಾಗಿದೆ. ಹೊಸ ವಿಧಿಯು "ಭಾರತದಲ್ಲಿ ಕಾನೂನಿನಿಂದ ಸ್ಥಾಪಿಸಲ್ಪಟ್ಟ ಸರ್ಕಾರದ ಬಗ್ಗೆ ಅತೃಪ್ತಿ ಹೊಂದಿರುವ ಅಥವಾ ಅತೃಪ್ತಿಯನ್ನು ತೋರಿಸುವ ವ್ಯಕ್ತಿಯ ವಿರುದ್ಧವೂ ಸರ್ಕಾರವು ಕ್ರಮ ಕೈಗೊಳ್ಳಬಹುದು" ಎಂದು ಹೇಳುವ ಮೂಲಕ ಎಲ್ಲಾ ಮೂಲಭೂತ ಹಕ್ಕುಗಳನ್ನು ವಾಸ್ತವಿಕವಾಗಿ ನಿರ್ಬಂಧಿಸುತ್ತದೆ. ಸ್ವಾಭಾವಿಕವಾಗಿ ಪ್ರಸ್ತಾಪಿತ ಕಾನೂನಿನ ವ್ಯಾಪ್ತಿಯು ಹೆಚ್ಚು ವಿಸ್ತಾರವಾಗಿದೆ; "ಸಾರ್ವಭೌಮತ್ವ, ಏಕತೆ ಮತ್ತು ಸಮಗ್ರತೆಗೆ ಅಪಾಯವನ್ನುಂಟುಮಾಡುತ್ತದೆ" ಎಂಬ ಪದಗಳನ್ನು ನಿಖರವಾಗಿ ಹೇಗೆ ಅರ್ಥೈಸಲಾಗಿದೆ ಎಂಬುದರ ಕುರಿತು ಯಾವುದೇ ವ್ಯಾಖ್ಯಾನವಿಲ್ಲದ ಕಾರಣ, ಇದು ಅಸ್ಪಷ್ಟವಾಗಿದೆ ಮತ್ತು ರಾಜ್ಯ ಮತ್ತು ಸರ್ಕಾರಗಳ ವ್ಯಾಖ್ಯಾನಕ್ಕೇ ಬಿಡಲಾಗಿದೆ.

ಇಲ್ಲಿ ಗಮನಾರ್ಹವಾದುದೆಂದರೆ, ಹೊಸ ಮಸೂದೆಯ ಸೆಕ್ಷನ್ 111(6)(ಎ) 'ಭಯೋತ್ಪಾದಕ'ನೆಂದರೆ, ಶಸ್ತ್ರಾಸ್ತ್ರಗಳನ್ನು, ಸ್ಫೋಟಕ ವಸ್ತುಗಳನ್ನು ಅಭಿವೃದ್ಧಿಪಡಿಸುವ, ತಯಾರಿಸುವ, ಸ್ವಾಧೀನದಲ್ಲಿಟ್ಟುಕೊಳ್ಳುವ, ಸಾಗಿಸುವ, ಸರಬರಾಜು ಮಾಡುವ ಅಥವಾ ಉಯೋಗಿಸುವ ಅಥವಾ ವಿಕಿರಣ, ವಿಷಕಾರಿ ಅನಿಲ, ಇನ್ನಿತರ ಅಪಾಯಕಾರಿ ವಸ್ತುಗಳನ್ನು ಹರಡುವ ಅಥವಾ ಬೆಂಕಿ, ಪ್ರವಾಹ, ಸ್ಫೋಟವನ್ನುಂಟು ಮಾಡುವ' ವ್ಯಕ್ತಿಯೆಂದು ಉಲ್ಲೇಖಿಸುತ್ತದೆ. ಇಲ್ಲಿ ಈ ಸೆಕ್ಷನ್ ಎಷ್ಟು ಅಸ್ಪಷ್ಟವಾಗಿದೆಯೆಂದರೆ, ಸಾರ್ವಜನಿಕ ಸೌಲಭ್ಯಗಳ ಹಾನಿ ಮತ್ತು ಖಾಸಗಿ ಆಸ್ತಿಯನ್ನು ನಾಶಪಡಿಸುವುದು ಭಯೋತ್ಪಾದಕ ಅಪರಾಧ ಎಂದು ವರ್ಗೀಕರಿಸಲಾಗಿದೆ. ಇದು ಕಾಯ್ದೆಯನ್ನು



ದುರ್ಬಳಕೆ ಮಾಡಲು ಸುಲಭ ಅವಕಾಶವನ್ನು ಒದಗಿಸಿ ಕೊಡುತ್ತದೆ, ಗ್ಯಾಸ್ ಸಿಲಿಂಡರ್‌ಗಳು ಸಿಡಿಯುವುದು, ಶಾರ್ಟ್ ಸರ್ಕ್ಯೂಟ್ ಇತ್ಯಾದಿಗಳ ಸಂದರ್ಭದಲ್ಲಿಯೂ ಯಾರನ್ನು ಬೇಕಾದರೂ ತಪ್ಪಿತಸ್ಥರೆಂದು ಘೋಷಿಸಬಹುದೇ ಮತ್ತು ಭಯೋತ್ಪಾದಕ ಎಂದು ಬ್ರಾಂಡ್ ಮಾಡಬಹುದೇ?

ಆದ್ದರಿಂದ, ಇದು ವಾಸ್ತವಿಕವಾಗಿ ನಾಗರಿಕರ ವಿರುದ್ಧದ ಯುದ್ಧ ಘೋಷಣೆಯಾಗಿದ್ದು, ಅವರು ಕಷ್ಟಪಟ್ಟು ಸಂಪಾದಿಸಿದ ನಾಗರಿಕ ಮತ್ತು ಪ್ರಜಾಪ್ರಭುತ್ವದ ಹಕ್ಕುಗಳನ್ನು ರಕ್ಷಿಸುವ ಬದಲಿಗೆ ನಿರಂಕುಶಾಧಿಕಾರವನ್ನು ನೀಡುತ್ತದೆ. ಇದಲ್ಲದೆ, ಆಳ್ವಿಕರ ಹಿತಾಸಕ್ತಿಗೆ ವಿರುದ್ಧವಾಗಿ ವರ್ತಿಸುವ ಯಾರನ್ನಾದರೂ ಬಂಧಿಸಲು ಈ ಅಸ್ಪಷ್ಟ ಪದಗಳ ಕಾನೂನುಗಳ ಅಡಿಯಲ್ಲಿ ಪೊಲೀಸ್-ಮಿಲಿಟರಿಗೆ ಅನಿರ್ಬಂಧಿತ ಅಧಿಕಾರವನ್ನು ನೀಡಲಾಗುತ್ತದೆ.

ಉದಾಹರಣೆಗೆ, ತಮ್ಮ ರಾಜ್ಯ ಸರ್ಕಾರ ಅಥವಾ ಪಕ್ಷದ ವಿರುದ್ಧ ಧ್ವನಿಯೆತ್ತುವವರನ್ನು ಸೂಚಿಸಲು ಪ್ರಧಾನಮಂತ್ರಿ ಮೋದಿ 'ತುಕ್ಡೇ ತುಕ್ಡೇ ಗ್ಯಾಂಗ್' ಅಥವಾ 'ನಗರ ನಕ್ಸಲರು' ಎಂಬ ಪದಗಳನ್ನು ಬಳಸುತ್ತಾರೆ. ಹೊಸ ಕಾನೂನಿನಲ್ಲಿರುವ ಮೇಲೆ ತಿಳಿಸಿದ ಅಸ್ಪಷ್ಟತೆಯ ಲಾಭವನ್ನು ಪಡೆದು ತಮ್ಮ ವಿರೋಧಿಗಳಿಗೆ ಈ ತರಹದ ಪಟ್ಟ ಕಟ್ಟಿ ಅವರನ್ನು ಭಯೋತ್ಪಾದಕರ ವ್ಯಾಖ್ಯಾನಕ್ಕೆ ಒಳಪಡಿಸುವುದು ಸುಲಭ.

**ನ್ಯಾಯ ಸಂಹಿತಾ ಮಸೂದೆಯ ಇತರ ಕೆಲವು ಪ್ರಸ್ತಾಪಗಳು**

ಭಾರತೀಯ ದಂಡ ಸಂಹಿತೆ (IPC) ಯಲ್ಲಿನ 511 ಸೆಕ್ಷನ್‌ಗಳಿಗೆ ವಿರುದ್ಧವಾಗಿ, ಹೊಸ ಭಾರತೀಯ ನ್ಯಾಯ ಸಂಹಿತಾ ಮಸೂದೆಯು 356 ಸೆಕ್ಷನ್‌ಗಳನ್ನು ಹೊಂದಿದೆ. 33 ಅಪರಾಧಗಳಿಗೆ ಜೈಲು ಶಿಕ್ಷೆಯನ್ನು ಹೆಚ್ಚಿಸಲಾಗಿದೆ. 83 ಅಪರಾಧಗಳಲ್ಲಿ ದಂಡದ ಮೊತ್ತವನ್ನು ಹೆಚ್ಚಿಸಲಾಗಿದೆ ಮತ್ತು 23 ಅಪರಾಧಗಳಲ್ಲಿ ಕಡ್ಡಾಯ ಕನಿಷ್ಠ ಶಿಕ್ಷೆಯನ್ನು ಸೇರಿಸಲಾಗಿದೆ.

ಹೊಸ ಸೆಕ್ಷನ್ 316 ವಂಚನೆಯ ಕುರಿತಾಗಿದೆ. ಹಿಂದಿನ ಸೆಕ್ಷನ್ 420 ರ ಅಡಿಯಲ್ಲಿ, ವಂಚನೆಯ ಅಪರಾಧಕ್ಕೆ ಗರಿಷ್ಠ ಮತ್ತು ಕನಿಷ್ಠ ಶಿಕ್ಷೆ ಕ್ರಮವಾಗಿ ಏಳು ವರ್ಷ ಮತ್ತು ಒಂದು ವರ್ಷ. ಹೊಸ ಷರತ್ತು 316 ರಲ್ಲಿ ಗರಿಷ್ಠ ಏಳು ವರ್ಷಗಳ ಶಿಕ್ಷೆಯನ್ನು ಉಳಿಸಿಕೊಂಡಿದ್ದರೂ, ಕನಿಷ್ಠ ಶಿಕ್ಷೆಯನ್ನು ಆರು ತಿಂಗಳಿಗೆ ಇಳಿಸಲಾಗಿದೆ ಅಂದರೆ ವಂಚನೆಗೆ ಸೌಮ್ಯವಾದ ಶಿಕ್ಷೆಯನ್ನು ಪಡೆಯಬಹುದು.

ನ್ಯಾಯ ಸಂಹಿತೆಯ ಕಲಂ 69 ರಲ್ಲಿ 'ಮಹಿಳೆಯರು ಮತ್ತು ಮಕ್ಕಳ ವಿರುದ್ಧದ ಅಪರಾಧಗಳು' ಎಂಬ ಶೀರ್ಷಿಕೆಯ ಕೆಳಗಿನ ಪದಗಳನ್ನು ಒಳಗೊಂಡಿದೆ: "ಯಾರು, ವಂಚನೆಯ ಮೂಲಕ ಅಥವಾ ಮದುವೆಯಾಗುವ ಉದ್ದೇಶವಿಲ್ಲದೆ ಮಹಿಳೆಯನ್ನು ಮದುವೆಯಾಗುವುದಾಗಿ ಭರವಸೆ ನೀಡಿ ಅವಳೊಂದಿಗೆ ಲೈಂಗಿಕ ಸಂಭೋಗವನ್ನು ನಡೆಸುತ್ತಾರೆಯೋ. ಅಂತಹ ಲೈಂಗಿಕ ಸಂಭೋಗವು ಅತ್ಯಾಚಾರದ ಅಪರಾಧಕ್ಕೆ ಸಮನಾಗಿರುವುದಿಲ್ಲ.""

ಇನ್ನೊಂದೆಡೆ "ಉದ್ಯೋಗದ ಅಥವಾ ಬಡ್ತಿ ಸುಳ್ಳು ಭರವಸೆ, ಪ್ರೇರಣೆ ಅಥವಾ ಗುರುತನ್ನು ಬದಲಾಯಿಸಿದ ನಂತರ ಮದುವೆಯಾಗುವುದು" ಎಂಬ ಪ್ರಸ್ತಾಪವನ್ನು ತಜ್ಞರು ಹೇಳುವ ಪ್ರಕಾರ, ಮುಸ್ಲಿಂ ಪುರುಷ ಮತ್ತು ಹಿಂದೂ ಮಹಿಳೆ ವಿವಾಹದಲ್ಲಿ ಭಾಗಿಯಾಗಿರುವಾಗ ಅದನ್ನು "ವಂಚಕ ವಿಧಾನ" ಅಥವಾ "ಗುರುತನ್ನು ಬದಲಾಯಿಸುವುದು" ಎಂದು ಅರ್ಥೈಸುವ ಮೂಲಕ ಅಂತರ್ಧರ್ಮೀಯ ಸಂಬಂಧಗಳನ್ನು ಅಪರಾಧ ಎಂದು ವ್ಯಾಖ್ಯಾನಿಸುವ ಅಪಾಯವಿದೆ.

**ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ**

ಈ ಸುರಕ್ಷಾ ಸಂಹಿತಾ ಮಸೂದೆ ಹಳೆಯ ಕಾಯಿದೆಯಲ್ಲಿದ್ದ 478 ಸೆಕ್ಷನ್‌ಗಳ ಜಾಗದಲ್ಲಿ 533 ಸೆಕ್ಷನ್‌ಗಳನ್ನು ಹೊಂದಿದೆ. ಅಂದರೆ ಹೊಸದಾಗಿ 55 ಸೇರಿಸಿದೆ. ಸಂಹಿತೆಯಲ್ಲಿ ಒಟ್ಟು 175 ಸೆಕ್ಷನ್‌ಗಳನ್ನು ಬದಲಾಯಿಸಲಾಗಿದೆ. ಇದು ಕ್ರಿಮಿನಲ್ ಕಾರ್ಯವಿಧಾನವನ್ನು ಯಾವ ರೀತಿಯಲ್ಲಿ ಸುಧಾರಿಸುತ್ತದೆ?

ಸುರಕ್ಷಾ ಸಂಹಿತೆಯ ಸೆಕ್ಷನ್ 256 (3) ಹೇಳುತ್ತದೆ: "ಆರೋಪಿಯು ಯಾವುದೇ ಸಾಕ್ಷಿಯ ಹಾಜರಾತಿ ಅಥವಾ ಯಾವುದೇ ದಾಖಲೆ ಅಥವಾ ವಸ್ತುವನ್ನು ಹಾಜರುಪಡಿಸುವ ಪ್ರಕ್ರಿಯೆಗಾಗಿ ಅರ್ಜಿ ಸಲ್ಲಿಸಿದರೆ, ನ್ಯಾಯಾಧೀಶರಿಗೆ ಅಂತಹ ಅರ್ಜಿಯನ್ನು ಅಸಮಾಧಾನ ಅಥವಾ ವಿಳಂಬದ ಉದ್ದೇಶಕ್ಕಾಗಿ ಅಥವಾ ನ್ಯಾಯ ಸ್ಥಾಪನೆಯನ್ನು ಸೋಲಿಸುವ ಕಾರಣಕ್ಕಾಗಿ ಮಾಡಲಾಗಿದೆ ಎಂಬುದು ಮನವರಿಕೆಯಾದರೆ ಅರ್ಜಿಯನ್ನು ನಿರಾಕರಿಸಬಹುದು". ಇದರರ್ಥ ನ್ಯಾಯಾಧೀಶರು ಮೇಲ್ಮನವಿಯು 'ನ್ಯಾಯದ ಸ್ಥಾಪನೆಯ ಉದ್ದೇಶವನ್ನು ಸೋಲಿಸುತ್ತದೆ' ಎಂದು ಭಾವಿಸಿದರೆ ಯಾರನ್ನಾದರೂ ಪಾಟೀ ಸವಾಲು ಮಾಡುವ ಹಕ್ಕನ್ನು ಆರೋಪಿಗೆ ನೀಡಲಾಗುವುದಿಲ್ಲ – ಇದು ಇದುವರೆಗೆ ಗುರುತಿಸಲ್ಪಟ್ಟ ಹಕ್ಕನ್ನು ವಿಧ್ವಂಸಗೊಳಿಸುವ ಮೂಲಕ ನ್ಯಾಯಾಧೀಶರಿಗೆ ಅನಿರ್ಬಂಧಿತ ಅಧಿಕಾರವನ್ನು ನೀಡುವ ಮತ್ತೊಂದು ಅಸ್ಪಷ್ಟ ಪದ. ಇದೊಂದು ನ್ಯಾಯಾಲಯದಲ್ಲಿ ಯಾವುದೇ ಕ್ರಿಮಿನಲ್ ಅಥವಾ ಸಿವಿಲ್ ವಿಚಾರಣೆಯ ಸಂಧರ್ಭದಲ್ಲಿ ದೊರೆಯುವ ಪ್ರಜಾಸತ್ತಾತ್ಮಕ ಹಕ್ಕುಗಳ ಉದ್ದೇಶಪೂರ್ವಕ ಮೊಟಕುಗೊಳಿಸುವಿಕೆಯೇ?

ಸುರಕ್ಷಾ ಸಂಹಿತಾ ಕಾಯ್ದೆಯ ಸೆಕ್ಷನ್ 187, ಯಾವುದೇ ವ್ಯಕ್ತಿಯ ಪೊಲೀಸ್ ಕಸ್ಟಡಿಯ ಕುರಿತೂ ಕಾನೂನನ್ನು ಬದಲಾಯಿಸಿದೆ. ಸುಪ್ರೀಂ ಕೋರ್ಟ್ 1992 ರಲ್ಲಿ ನೀಡಿದ ತೀರ್ಪಿನಲ್ಲಿ ಪೊಲೀಸ್ ಕಸ್ಟಡಿಯಲ್ಲಿ 15 ದಿನಗಳನ್ನು ಮೀರಬಾರದು ಎಂದು ಸ್ಪಷ್ಟವಾಗಿ ಹೇಳಿದೆ. ಆದರೆ ಪ್ರಸ್ತುತ ಅದನ್ನು ಬದಲಾಯಿಸಿ 90 ದಿನಗಳ ಕಾಲ ಪೋಲೀಸ್ ಕಸ್ಟಡಿಯಲ್ಲಿ ಉಳಿಯುವುದು ಎಂದು ತಿದ್ದಲಾಗಿದೆ. ಇದು ಥರ್ಡ್ ಡಿಗ್ರಿ ಚಿತ್ರಹಿಂಸೆ ಹೆಚ್ಚಾಗುವುದಕ್ಕೆ ಕಾರಣವಾಗುತ್ತದೆ ಮತ್ತು ಈಗಾಗಲೇ ಹೆಚ್ಚುತ್ತಿರುವ ಕಸ್ಟಡಿ ಸಾವುಗಳೂ ಸಹ ಜಾಸ್ತಿಯಾಗಬಹುದು.

ಅದೇ ಮಸೂದೆಯ ಸೆಕ್ಷನ್ 43(3) ರಲ್ಲಿ ಉಲ್ಲೇಖಿಸಲಾದ "ಕೈಕೋಳಗಳ ಬಳಕೆ" ಯ ವಿಚಾರವಾಗಿ ಪ್ರಸ್ತಾಪಿಸಿರುವುದು ಈ ಹಿಂದೆ ನೀಡಿದ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಸಂಪೂರ್ಣವಾಗಿ ತಳ್ಳಿ ಹಾಕುತ್ತದೆ. 1978 ರಲ್ಲಿ ಸುಪ್ರೀಂ ಕೋರ್ಟ್ ಹೀಗೆ ಹೇಳಿದೆ: "...ಹಿಂದಿನ ಯುಗದ ಈ ಅನಾಗರಿಕ ಅವಶೇಷಗಳು ಸಂವಿಧಾನದ ಆಶಯದ ವಿರುದ್ಧದ ಅಪರಾಧವೆಂಬುದನ್ನು ಅರಿತುಕೊಳ್ಳಬೇಕು".

ಸುರಕ್ಷಾ ಸಂಹಿತೆಯ ಸೆಕ್ಷನ್ 173 ಅತ್ಯಂತ ಆಘಾತಕಾರಿ ಸೆಕ್ಷನ್ ಆಗಿದ್ದು, ಇದರಲ್ಲಿ ಯಾವುದೇ ಸಂಜ್ಞೇಯ ಅಪರಾಧದ(Cognizable) ಪ್ರಕರಣದಲ್ಲಿ ವ್ಯಕ್ತಿಯನ್ನು ಬಂಧಿಸಲು ಮತ್ತು ಯಾವುದೇ ಪ್ರಾಥಮಿಕ ವಿಚಾರಣೆ ನಡೆಸದೆ ಅಂತಹ ವ್ಯಕ್ತಿಯನ್ನು ಬಂಧನದಲ್ಲಿ ಮುಂದುವರೆಸಲು ಪೊಲೀಸರಿಗೆ ಸಂಪೂರ್ಣ ಅಧಿಕಾರ ನೀಡಲಾಗಿದೆ. ಸೆಕ್ಷನ್ 193 ರಲ್ಲಿ ಹೇಳಿರುವಂತೆ ಇದು ನ್ಯಾಯಾಲಯದಿಂದ ಪೂರ್ವಾನುಮತಿ ಪಡೆಯದೆ ಹೆಚ್ಚಿನ ತನಿಖೆ ನಡೆಸಲು ತನಿಖಾಧಿಕಾರಿಗೆ ಅನುಮತಿ ನೀಡುತ್ತದೆ.

ಸುರಕ್ಷಾ ಸಂಹಿತೆಯ ಸೆಕ್ಷನ್ 33 ಒಂದು ಕಾಟ ಕೊಡುವ ಸೆಕ್ಷನ್ ಆಗಿದ್ದು, ಪೊಲೀಸರು ಯಾವುದೇ ಅಪರಾಧದ ಬಗ್ಗೆ ಒಬ್ಬ ವ್ಯಕ್ತಿ ಮಾಹಿತಿಯನ್ನು ಹೊಂದಿರಬಹುದು ಎಂಬ ಕಾರಣಕ್ಕಾಗಿ ಕಿರುಕುಳ ನೀಡಬಹುದು ಹಾಗೂ ಅಮಾಯಕರನ್ನು ಬಂಧನದಲ್ಲಿಡಬಹುದು.

**ಸಾಕ್ಷ್ಯ ಸಂಹಿತಾ**

ಹಿಂದೆಯಿದ್ದ ಸಾಕ್ಷಿ ಕಾಯ್ದೆಯ 167ರ ಜಾಗದಲ್ಲಿ ಈಗಿನ ಸಾಕ್ಷ್ಯ ಸಂಹಿತಾ ಮಸೂದೆಯು 170 ಸೆಕ್ಷನ್‌ಗಳನ್ನು ಒಳಗೊಂಡಿದೆ. 23 ಸೆಕ್ಷನ್‌ಗಳನ್ನು ಬದಲಾಯಿಸಲಾಗಿದೆ, ಒಂದು ಹೊಸ ಸೆಕ್ಷನ್ ಸೇರಿಸಲಾಗಿದೆ ಮತ್ತು ಐದನ್ನು ರದ್ದುಗೊಳಿಸಲಾಗಿದೆ.

ಸಾಕ್ಷ್ಯ ಸಂಹಿತೆಯ ಸೆಕ್ಷನ್ 115 ಈ ಕೆಳಗಿನಂತಿದೆ: ಈ ಸೆಕ್ಷನ್ ಸೂಕ್ಷ್ಮ 10ನೇ ಪುಟಕ್ಕೆ....




ಹಾಸನ: ಬಾಲಕಿಯರ ಬಿಸಿಎಮ್ ಇಂಜಿನಿಯರಿಂಗ್, ಮೆಡಿಕಲ್ ವಿದ್ಯಾರ್ಥಿನಿಲಯಕ್ಕೆ ಸೂಕ್ತ ಭದ್ರತೆ ಹಾಗೂ ಮೂಲಭೂತ ಸೌಕರ್ಯಗಳಿಗೆ ಆಗ್ರಹಿಸಿ AIDSO ನೇತೃತ್ವದಲ್ಲಿ ಪ್ರತಿಭಟನೆ.




ಬಳ್ಳಾರಿ: ಕಲ್ಲುಕಂಭ ಗ್ರಾಮಕ್ಕೆ ಚರಂಡಿ, ಮಹಿಳೆಯರಿಗೆ ಸಾರ್ವಜನಿಕ ಶೌಚಾಲಯ ನಿರ್ಮಿಸಲು ಒತ್ತಾಯಿಸಿ ಎಸ್‌ಯುಸಿಐ(ಕಮ್ಯುನಿಸ್ಟ್) ಪಕ್ಷದಿಂದ ಪ್ರತಿಭಟನೆ.

# ಸರ್ಕಾರದ ವಿಧೇಯ ಆರ್ಥಿಕ ತಜ್ಞರು ಮತ್ತು ಔದ್ಯೋಗಿಕ ಅಂಕಿ ಅಂಶಗಳು: ತಥ್ಯವಾವುದು?

ಸರ್ಕಾರಿ ಆರ್ಥಿಕ ತಜ್ಞರು, ವಿಶೇಷವಾಗಿ, ಕಳೆದ ಐದು ವರ್ಷಗಳಲ್ಲಿ, ದತ್ತಾಂಶಗಳು ನಿರ್ದೇಶಿಸಿದಂತೆ ವಿಶ್ಲೇಷಣೆ ಮಾಡುವುದರ ಬದಲಾಗಿ, ತಾವೇ ವಿಶ್ಲೇಷಣೆಯನ್ನು ನಿರ್ದೇಶಿಸುತ್ತಿರುವಂತೆ ತೋರುತ್ತಿದೆ. ನರೇಂದ್ರ ಮೋದಿ ಸರ್ಕಾರದ ಆಡಳಿತದಲ್ಲಿ "ಅಭೂತಪೂರ್ವ ಸಂಖ್ಯೆಯ" ಉದ್ಯೋಗಗಳು ಸೃಷ್ಟಿಯಾಗಿದ್ದು, ಕಳೆದ ಏಳೆಂಟು ವರ್ಷಗಳಲ್ಲಿ ಪ್ರತಿ ವರ್ಷ ಸರಾಸರಿ ಹತ್ತು ದಶಲಕ್ಷ ಉದ್ಯೋಗಗಳು ಸೃಷ್ಟಿಯಾಗಿವೆಯೆಂಬುದು ಅವರ ಇತ್ತೀಚಿನ ಸಮರ್ಥನೆಯಾಗಿದೆ. ಈ ಹೇಳಿಕೆಯನ್ನು ನೀಡಿದ ಸರ್ಕಾರಿ ಆರ್ಥಿಕ ತಜ್ಞರು, ಪ್ರತಿಯೊಂದು ಕೆಲಸವನ್ನೂ, ಕೃಷಿ ಇರಲಿ ಕೃಷಿಯೇತರವಿರಲಿ, ಉದ್ಯೋಗವೆಂದೇ ಪರಿಗಣಿಸಿದ್ದಾರೆ. ತಮ್ಮ ಕ್ಷೇತ್ರದ ಬಗ್ಗೆ ಕನಿಷ್ಠ ತಿಳುವಳಿಕೆ ಇರುವ ಯಾವ ಅಭಿವೃದ್ಧಿ ಆರ್ಥಿಕ ತಜ್ಞನೂ ಇಂತಹ ಪ್ರಾಥಮಿಕ ತಪ್ಪು ಮಾಡಲಾರ.

ಕೇವಲ ಕಳೆದ ಮೂರು ವರ್ಷಗಳಲ್ಲಿ, ಕೃಷಿ ಕಾರ್ಯದಲ್ಲಿ ತೊಡಗಿದ ಕೆಲಸಗಾರರ ಸಂಖ್ಯೆಯು 200 ದಶಲಕ್ಷದಿಂದ 260 ದಶಲಕ್ಷಕ್ಕೆ ಏರಿದೆ. ಇದು ಮುಖ್ಯವಾಗಿ 2020 – 2022 ನಡುವಿನಲ್ಲಿ ನಡೆದ ಹಿಮ್ಮುಖ ವಲಸೆಯಿಂದಾಗಿದ್ದು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, 200 ದಶಲಕ್ಷ ಕೆಲಸಗಾರರು ಭಾರತದ ಜಿಡಿಪಿಯಲ್ಲಿ 15% ರಷ್ಟು ಕೊಡುಗೆ (ಕೃಷಿ ಕ್ಷೇತ್ರದಿಂದ) ನೀಡುತ್ತಿದ್ದು, ಈಗ 260 ಮಿಲಿಯನ್ ಕೆಲಸಗಾರರದ್ದೂ ಅಷ್ಟೇ ಕೊಡುಗೆಯಾಗಿರುವುದು. ಇದು ಒಂದು ರೀತಿಯಲ್ಲಿ ಉದ್ಯೋಗರಹಿತ ಬೆಳವಣಿಗೆಯೆಂದರೆ ತಪ್ಪಲ್ಲ. ಕೃಷಿ ಕ್ಷೇತ್ರದೆಡೆ ಮತ್ತೆ ಮರಳಿ ಬರುತ್ತಿರುವ ಈ ಪ್ರಕ್ರಿಯೆಯು, ಔದ್ಯೋಗಿಕತೆಯ ರಾಚನಿಕ ಬದಲಾವಣೆಯಲ್ಲಿ ಆರ್ಥಿಕತೆಗೆ ಹಿನ್ನಡೆಯಾದಂತೆ.

ಆರ್ಥಿಕ ಬೆಳವಣಿಗೆಯ ಲಕ್ಷಣವೆಂದರೆ, ತಲಾ ಆದಾಯದ ಏರಿಕೆಯ ಜೊತೆಗೆ, ಉತ್ಪಾದನೆ ಹಾಗೂ ಔದ್ಯೋಗಿಕತೆ, ಎರಡರಲ್ಲೂ ಕೃಷಿ ಕ್ಷೇತ್ರದಿಂದ ಕೈಗಾರಿಕಾ ಹಾಗೂ ಸೇವಾ ಕ್ಷೇತ್ರದೆಡೆಗೆ ಸಾಗುವ ರಾಚನಿಕ ಬದಲಾವಣೆ. ಇದರಿಂದಾಗಿ, ಒಟ್ಟಾರೆ ಉತ್ಪಾದಕತೆ ಮತ್ತು ಆದಾಯದಲ್ಲಿ ಏರಿಕೆಯಾಗುತ್ತದೆ. ಭಾರತದ ಇತಿಹಾಸದಲ್ಲಿ ಮೊದಲ ಬಾರಿಗೆ, 2004 ರ ನಂತರ, ಕೃಷಿ ನಿರತ ಕೆಲಸಗಾರರ ಒಟ್ಟುಸಂಖ್ಯೆಯಲ್ಲಿ ಇಳಿಕೆಯಾಗಿದ್ದು, ಇದು ಗಮನಿಸಬೇಕಾಗಿರುವಂತಹ ಅಂಶ. 2004ರ ಮೊದಲೂ, ಅರ್ಧ ಶತಮಾನದವರೆಗೂ ಭಾರತದ ಔದ್ಯೋಗಿಕತೆಯಲ್ಲಿ ಕೃಷಿಯ ಪಾಲು ಇಳಿಮುಖವಾಗುತ್ತಿದ್ದರೂ, ಕೃಷಿ ಕಾರ್ಮಿಕರ ಸಂಖ್ಯೆಯ ಒಟ್ಟು ಸಂಖ್ಯೆಯಲ್ಲಿ ಇಳಿಕೆ ಇದ್ದಿರಲಿಲ್ಲ.

ಭಾರತದ ಜಿಡಿಪಿಯು (7.7%) ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ಕಂಡರಿಯದಷ್ಟು ಪ್ರಮಾಣದಲ್ಲಿ 2004–2012 ಅವಧಿಯಲ್ಲಿ ಏರಿದ್ದರಿಂದ, ಕೃಷಿಯೇತರ ಉದ್ಯೋಗಗಳು, ಪ್ರತಿವರ್ಷ 7.5 ಮಿಲಿಯನ್‌ನಷ್ಟು ಏರಿಕೆ ಕಂಡವು. ಈ ಏರಿಕೆಯು, 2019ರಲ್ಲಿ ವಾರ್ಷಿಕ 2.9 ಮಿಲಿಯನ್‌ಗೆ ದಿಢೀರ್ ಇಳಿದಿದ್ದನ್ನು ನಮ್ಮ ಸರ್ಕಾರಿ ಆರ್ಥಿಕ ತಜ್ಞರಿಗೆ ಕಂಡಿಲ್ಲವೆನಿಸುತ್ತದೆ. 2012–2018 ರ ಅವಧಿಯಲ್ಲಿ, ಯುವಕರ ನಿರುದ್ಯೋಗ 6% ರಿಂದ 17.8%, ಅಂದರೆ ಮೂರು ಪಟ್ಟು ಹೆಚ್ಚಾಗಿದೆ. ಇದಕ್ಕಿಂತಲೂ ಹೆಚ್ಚು ಅಸೂಕ್ಷ್ಮವಾದ ಹೇಳಿಕೆಯೆಂದರೆ, ಯುವಕರ ನಿರುದ್ಯೋಗವು ತಾತ್ಕಾಲಿಕ, 15–30 ವಯಸ್ಸಿನವರೆಗೆ ಮಾತ್ರ ಸೀಮಿತವಾಗಿರುವಂತಹದ್ದು, 30 ವಯಸ್ಸಿನ ನಂತರದಲ್ಲಿ, ನಿರುದ್ಯೋಗವು 1%ಗೆ ಇಳಿಯುತ್ತದೆ, ಇಷ್ಟು ಸಣ್ಣ ಪ್ರಮಾಣದ ನಿರುದ್ಯೋಗ, ನಿರುದ್ಯೋಗವೇ ಅಲ್ಲ ಎನ್ನುವುದು. ಈ ವಿಶ್ಲೇಷಣೆಯು, ಎರಡು ದೃಷ್ಟಿಕೋನಗಳಿಂದ ಸಮಸ್ಯಾತ್ಮಕವಾಗಿದೆ.

ಮೊದಲನೆಯದಾಗಿ, ಓರ್ವ ವಿದ್ಯಾವಂತನ ದುಡಿಮೆಯ ಬದುಕಿನಲ್ಲಿ ಹತ್ತು ವರ್ಷಕ್ಕಿಂತಲೂ ಹೆಚ್ಚಿನ ಕಾಲ ನಿರುದ್ಯೋಗದಲ್ಲಿ ಅಥವಾ ಅರೆಕಾಲಿಕ ಉದ್ಯೋಗದಲ್ಲಿ ಕಳೆದುಹೋದರೆ, ಅದು ಮಾನವ ಸಂಪನ್ಮೂಲದ ಅಪರಿಪೂರ್ಣ ಬಳಕೆಯಾಗುತ್ತದಲ್ಲದೆ, ಘನತೆಯ ಕುಸಿತವೂ ಆಗುತ್ತದೆ. ಸಂಭಾವ್ಯ ಜಿಡಿಪಿಗೂ ಇದರಿಂದ ನಷ್ಟ. ಎರಡನೆಯದಾಗಿ, ಮೂವತ್ತು ವರ್ಷ ವಯಸ್ಸಿನ ನಂತರ, ನೌಕರಿ ಸಿಕ್ಕರೂ ಅದು, ಅನೌಪಚಾರಿಕ, ಹಾಗಾಗಿ ಅರೆ ಉದ್ಯೋಗವಾಗುತ್ತದೆ.

ಕೃಷಿಯಲ್ಲಿ ತೊಡಗಿದ ಹಿರಿ ಕಿರಿ ಸ್ತ್ರೀಯರ ವೇತನಾರಹಿತ ಕೌಟುಂಬಿಕ ಕೆಲಸದಲ್ಲಿ, 28.3 ಮಿಲಿಯನ್ (2017–18) ನಿಂದ 2022–23 ರ ಹೊತ್ತಿಗೆ, 58.2 ಮಿಲಿಯನ್‌ರಷ್ಟು ಏರಿಕೆ ಕಂಡು ಬಂದಿದೆ. ಇದೇ ಅವಧಿಯಲ್ಲಿ, ಸ್ವಯಂ ಕೃಷಿಯ ಕೆಲಸದಲ್ಲಿ ತೊಡಗಿರುವವರ ಸಂಖ್ಯೆ 9.2 ಮಿಲಿಯನ್‌ನಿಂದ 29.2 ಮಿಲಿಯನ್ನಷ್ಟಾಗಿದೆ. ಇಲ್ಲಿ ಕಾಣುವ 50 ಮಿಲಿಯನ್ ಉದ್ಯೋಗದ ಏರಿಕೆ ಸಂಕಷ್ಟದಿಂದ ಪ್ರೇರಿತವಾಗಿದ್ದು. ಇದರಲ್ಲಿ ಸಂಭ್ರಮ ಪಡುವಂತಹುದೇನೂ ಇಲ್ಲ.

ಮಿಲಿಯಾಂತರ ಬಡ ಜನರು, ಜೀವನ ನಿರ್ವಹಣೆಗೆ ಏನನ್ನಾದರೂ ಮಾಡಲೇಬೇಕು. ವೇತನ ಅಥವಾ ಗುಣಮಟ್ಟದ ಬಗ್ಗೆ ಚಿಂತಿಸಲಾರರು. ಹಾಗಾಗಿ ಅವರು ಕಾರ್ಮಿಕರ 'ಸಂಖ್ಯೆ'ಗೆ ಸೇರುತ್ತಲೇ ಇರುತ್ತಾರೆ. ಅಧಿಕಾರದಲ್ಲಿರುವವರ ಪರ ಆರ್ಥಿಕ ತಜ್ಞರು ಇದನ್ನೇ ಉದ್ಯೋಗವೆಂದು ಕರೆದು, ನಿರುದ್ಯೋಗದ ಸಂಖ್ಯೆಯಲ್ಲಿ ಇಳಿಕೆಯಾಗಿದೆ ಎಂದರೆ ಹೇಗೆ? ಉತ್ಪಾದನಾ ಉದ್ಯೋಗವು, ನಿಜಾಂಶದಲ್ಲಿ 60 ಮಿಲಿಯನ್ ನಿಂದ(2011–12) 55 ಮಿಲಿಯನ್‌ಗೆ (2017–18) ಕುಸಿದಿದೆ. ಇದೇ ವರ್ಷದಲ್ಲಿ ಭಾರತವು, ತನ್ನ 45 ವರ್ಷದ ಲೇಬರ್ ಮಾರುಕಟ್ಟೆ ಸಮೀಕ್ಷೆಯ ಇತಿಹಾಸದಲ್ಲೇ, ಅತಿ ಹೆಚ್ಚಿನ ನಿರುದ್ಯೋಗವನ್ನು ಕಂಡಿದೆ.

ಒಂದು ಅಂದಾಜಿನ ಪ್ರಕಾರ, ನಾಲ್ಕು ಪ್ರಮುಖ ಕ್ಷೇತ್ರ – ಕೃಷಿ, ನಿರ್ಮಾಣ, ಉತ್ಪಾದನೆ ಹಾಗೂ ಸೇವಾ ಕ್ಷೇತ್ರಗಳ ವೇತನ/ಸಂಪಾದನೆಯು ಎಲ್ಲಾ ಬಗೆಯ ಕಾರ್ಮಿಕರಲ್ಲಿ (ಪ್ರಾಸಂಗಿಕ ಮತ್ತು ನಿಯತ ವೇತನ, ಸ್ವಯಂ ಉದ್ಯೋಗಿಗಳು) ಸ್ಥಗಿತತೆ ಕಂಡಿದೆ. ತಮ್ಮ ಇತ್ತೀಚಿನ ಪುಸ್ತಕವೊಂದರಲ್ಲಿ, ಓರ್ವ ಸರ್ಕಾರಿ ಆರ್ಥಿಕ ತಜ್ಞರು ಕಂಡುಕೊಂಡಂತೆ, ಭಾರತದ 80% ಕೆಲಸಗಾರರ (ನಿಯತ ಹಾಗು ಸ್ವಉದ್ಯೋಗಿ) ಸಂಪಾದನೆಯು 2017–18 ರಿಂದ 2022–23ರ ಅವಧಿಯಲ್ಲಿ ಏರಿಯೇ ಇಲ್ಲ. 20% ಇರುವ ಪ್ರಾಸಂಗಿಕ ಕೆಲಸಗಾರರಿಗೆ ಮಾತ್ರ ಆದಾಯದಲ್ಲಿ ಒಂದಿಷ್ಟು ಹೆಚ್ಚಳ ಕಂಡು ಬಂದಿದೆ.

ಪ್ರಪಂಚದ 5 ನೆಯ ಅತಿದೊಡ್ಡ ಹಾಗೂ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆ ಎನಿಸಿಕೊಂಡ ರಾಷ್ಟ್ರದಲ್ಲಿ, ಮೂರು ಗುಂಪಿನ ಜನರು ಕೆಲಸಕ್ಕಾಗಿ ಹಾತೊರೆಯುತ್ತಿದ್ದಾರೆ. ಮೊದಲನೆಯದಾಗಿ, ಪ್ರತಿ ವರ್ಷ ಲೇಬರ್ ಮಾರುಕಟ್ಟೆಗೆ ಸೇರಿಕೊಳ್ಳುವ ಆರು ಮಿಲಿಯನ್ ಯುವಕ ಯುವತಿಯರು; ಎರಡನೆಯವರು, ಈಗಾಗಲೇ ಇರುವ ನಿರುದ್ಯೋಗಿಗಳು, ಮತ್ತು ಮೂರನೆಯದಾಗಿ ಕೃಷಿಯಲ್ಲಿರುವ 260 ಮಿಲಿಯನ್ ಕೆಲಸಗಾರರು ಅಥವಾ ಜಿಡಿಪಿಗೆ 15% ಕಾಣಿಕೆ ನೀಡುವ 45% ರ ಕಾರ್ಯಪಡೆ. ಇತ್ತೀಚಿನ ಸಿಎಸ್‌ಡಿಎಸ್ ಸಮೀಕ್ಷೆಯ (2024) ಪ್ರಕಾರ, 62% ಮತದಾರರ ಅನಿಸಿಕೆಯೆಂದರೆ, ಐದು ವರ್ಷದ ಹಿಂದಿಗಿಂತ ಈಗ ಕೆಲಸ ಸಿಗುವುದು ಕಠಿಣ. ನಗರ ಪ್ರದೇಶದಲ್ಲಿ ಈ ಅಭಿಪ್ರಾಯ 65% ಇದೆ.

ಈಗಲೂ ಸಾಕಾರಗೊಳ್ಳದ ಹಿಂದೆ ಮಾಡಿದ ಎರಡು ಕೋಟಿ ಉದ್ಯೋಗದ ವಾಗ್ದಾನಕ್ಕೆ ಯುವ ಮತದಾರರನ್ನು ಮರಳುಮಾಡಿ ಮೂರ್ಖರನ್ನಾಗಿಸುವ ಸಾಧ್ಯತೆ ಈ ಬಾರಿ ಖಂಡಿತವಾಗಿಯೂ ಇಲ್ಲ. (ಕೃಪೆ: ದಿ ವೈರ್, 08–05–24)




## ಎಐಡಿವೈಓ 59ನೇ ಸಂಸ್ಥಾಪನಾ ದಿನ

### ರಾಜ್ಯದಾದ್ಯಂತ ವಿವಿಧ ಕಾರ್ಯಕ್ರಮಗಳು


ಮೈಸೂರು: ಸಿಪಿಸಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಸಸಿ ನೆಡುವ ಕಾರ್ಯಕ್ರಮ.



ದಾವಣಗೆರೆ: ದೃಶ್ಯಕಲಾ ಕಾಲೇಜಿನಲ್ಲಿ ಸಸಿ ನೆಡುವ ಕಾರ್ಯಕ್ರಮ


ಬೆಂಗಳೂರು: ಸಾರ್ವಜನಿಕ ನೇತ್ರದಾನ ಪ್ರತಿಜ್ಞೆ ಕಾರ್ಯಕ್ರಮ.




ಧಾರವಾಡ: ಕಲಕೇರಿ ಗ್ರಾಮದಲ್ಲಿ ರಕ್ತದಾನ ಶಿಬಿರ


ವಿಜಯನಗರ: ಬಸವನದುರ್ಗದಲ್ಲಿನ ಆರೋಗ್ಯ ಜಾಗೃತಿ ಮತ್ತು ಉಚಿತ ವೈದ್ಯಕೀಯ ಶಿಬಿರ


ಕಲಬುರಗಿ: ಉಚಿತ ವೈದ್ಯಕೀಯ ಶಿಬಿರ, ಶಹಾಬಾದ

# ಅಮೇರಿಕಾದ ವಿದ್ಯಾರ್ಥಿ ಹೋರಾಟಗಾರರೊಂದಿಗೆ ನಾವಿದ್ದೇವೆ

ಅಮೇರಿಕದಲ್ಲಿ ಮೊಳಗುತ್ತಿರುವ ವಿದ್ಯಾರ್ಥಿಗಳ ಹೋರಾಟವನ್ನು ನಾವೆಲ್ಲಾ ಬಹು ಭರವಸೆಗಳೊಂದಿಗೆ ಎದುರು ನೋಡುತ್ತಿದ್ದೇವೆ. ಏಪ್ರಿಲ್ 17 ರಂದು ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಈ ಹೋರಾಟ ಪ್ರಾರಂಭವಾಯಿತು. ಈ ಆಂದೋಲನವು ಇಸ್ರೇಲ್ ನೊಂದಿಗೆ ಹಾಗೂ ಯುದ್ಧದ ಮೂಲಕ ಹಸಿವು ತೀರಿಸಿಕೊಳ್ಳುತ್ತಿರುವ ಕಂಪನಿಗಳಿಂದ ಸಂಬಂಧ ಕಡಿದುಕೊಳ್ಳುವಂತೆ ಒತ್ತಾಯಿಸಿತು. ಪ್ಯಾಲಸ್ತೈನ್ ಮೇಲಿನ ನರಮೇಧ ನಿಲ್ಲಿಸಲು ಆಗ್ರಹಿಸಿ ನಡೆಯುತ್ತಿರುವ ಈ ಹೋರಾಟ ಕಾಡ್ಗಿಚ್ಚಿನಂತೆ ಇಡೀ ಅಮೇರಿಕಾವನ್ನೇ ವ್ಯಾಪಿಸಿತ್ತು. ವಿಶ್ವವಿದ್ಯಾಲಯಗಳ ಹಾಗೂ ಸರ್ಕಾರದ ಒತ್ತಡಕ್ಕೆ ಸೆಡ್ಡುಹೊಡೆದು ವಿದ್ಯಾರ್ಥಿಗಳು ಜಮಾಯಿಸಿದ್ದರು. ಪ್ರಗತಿಪರ ಯಹೂದಿ ವಿದ್ಯಾರ್ಥಿಗಳನ್ನೂ ಒಳಗೊಂಡಂತೆ ಎಲ್ಲಾ ಸಮುದಾಯಗಳ ಅಸಂಖ್ಯಾತ ವಿದ್ಯಾರ್ಥಿಗಳು ಬೀದಿಗಿಳಿದಿದ್ದರು. ಅದ್ಭುತ (Éundefined) ಹೋರಾಟಗಳಿಗೆ ಅಮೇರಿಕ ಸಾಕ್ಷಿಯಾಯಿತು! ದಬ್ಬಾಳಿಕೆಯನ್ನು ಪ್ರತಿರೋಧಿಸಿ ನೂರಾರು ವಿಶ್ವದ್ಯಾಲಯಗಳಿಂದ ನೂರಾರು ಸಂಖ್ಯೆಯಲ್ಲಿ ಶಿಕ್ಷಕರೂ ಹೋರಾಟದಲ್ಲಿ ಭುಜ ಕೊಟ್ಟು ನಿಲ್ಲುತ್ತಿರುವುದು ಆಶಾದಾಯಕ. ದಕ್ಷಿಣ ಏಷ್ಯಾದ ಎಡ ಹಾಗೂ ಪ್ರಗತಿಪರ ವಿದ್ಯಾರ್ಥಿ ಸಂಘಟನೆಗಳ ಪರವಾಗಿ ಅಮೇರಿಕಾದ ಐತಿಹಾಸಿಕ ವಿದ್ಯಾರ್ಥಿ ಹೋರಾಟಕ್ಕೆ ನಾವು ಈ ಮೂಲಕ ಸೌಹಾರ್ದತೆ ಸೂಚಿಸುತ್ತೇವೆ. ಮನದುಂಬಿ ಶುಭಾಶಯಗಳನ್ನು ಸಲ್ಲಿಸುತ್ತೇವೆ! ತಿಂಗಳುಗಳಗಟ್ಟಲೇ ಅಮೇರಿಕದ ರಸ್ತೆಗಳು ವಿದ್ಯಾರ್ಥಿ ಸಮೂಹದ ಘೋಷಣೆಗಳೊಂದಿಗೆ ವಿಜೃಂಭಿಸುತ್ತಿರುವಾಗ, ಕ್ಯಾಂಪಸ್‌ಗಳು ಹೋರಾಟದ ಕೇಂದ್ರಗಳಾಗಿರುವುದು ವಿಯೆಟ್ನಾಮ್‌ನ ಮೇಲೆ ಅಮೇರಿಕಾದ ಯುದ್ಧದಾಳಿಯ ವಿರುದ್ಧ ಜನ ಪ್ರಜ್ಞೆಯು ಚೇತನಗೊಂಡ ಹೋರಾಟದ ನೆನಪು



ತರುತ್ತದೆ. ಪ್ರತಿರೋಧದ ಧ್ವನಿಯು ಯುದ್ಧ ಪಿಪಾಸು ಸಾಮ್ರಾಜ್ಯಶಾಹಿಗಳ ಹೃದಯದಲ್ಲಿ ದಿಗಿಲು ಹುಟ್ಟಿಸಿದ್ದಲ್ಲದೇ ಜಗತ್ತಿನಾದ್ಯಂತ ಶಾಂತಿಪ್ರಿಯರಲ್ಲಿ ಆಶಾಕಿರಣದ, ದೃಢ ವಿಶ್ವಾಸದ ಹೊಳೆ ಹರಿಸಿದೆ.

ಹೋರಾಟದ ಧ್ಯೇಯೋದ್ದೇಶದೊಂದಿಗೆ ಈ ಮೂಲಕ ನಮ್ಮ ಧ್ವನಿಯನ್ನೂ ಸೇರಿಸುತ್ತೇವೆ. ಶಿಕ್ಷೆಗೊಳಪಟ್ಟ ವಿದ್ಯಾರ್ಥಿಗಳ ಮೇಲಿನ ಕ್ರಮಗಳನ್ನು ಹಿಂಪಡೆಯಬೇಕೆಂದು ಈ ಮೂಲಕ ಆಗ್ರಹಿಸುತ್ತೇವೆ. ಪ್ರಜಾತಾಂತ್ರಿಕ ಹೋರಾಟಗಳಿಗೆ, ಮಿಲಿಟರಿ ಹಾಗೂ ಪೋಲಿಸ್ ತಡೆಯೊಡ್ಡುವುದನ್ನು ಈ ಕೂಡಲೇ ನಿಲ್ಲಿಸಿ, ಪ್ರಜತಾಂತ್ರಿಕ ನೀತಿ ನಿಯಮಗಳನ್ನು ಅನುಸರಿಸಿ ಎಂದು ಆಗ್ರಹಿಸುತ್ತೇವೆ. ಯುದ್ಧ ಹಾಗೂ ನರಮೇಧಕ್ಕೆ ಎಲ್ಲಾ ಸಂಪನ್ಮೂಲಗಳನ್ನು ತಲುಪಿಸುತ್ತಿರುವ ಕ್ರಮಗಳ ವಿರುದ್ಧ ಪ್ರತಿರೋಧದ ಧ್ವನಿಯನ್ನು ಬಲಪಡಿಸುತ್ತಾ ಹಾಗೂ ಹೋರಾಟಗಾರರ ಧ್ವನಿಗೆ ಜಗತ್ತಿನ ಎಲ್ಲಾ ಶಾಂತಿ ಪ್ರಿಯ ವಿದ್ಯಾರ್ಥಿ ಹಾಗೂ ಜನಸಮೂಹ ಶಕ್ತಿ ನೀಡಬೇಕೆಂದು ಕರೆ ನೀಡುತ್ತೇವೆ.

**ಬಾಂಗ್ಲಾದೇಶ**

ಬಾಂಗ್ಲಾದೇಶ್ ಛಾತ್ರೋ ಫೆಡರೇಶನ್ (ಬಿಸಿಎಫ್)

ಬಾಂಗ್ಲಾದೇಶ್ ಸ್ಟೂಡೆಂಟ್ಸ್ ಯೂನಿಯನ್ (ಬಿಎಸ್‌ಯು)

ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಕೌನ್ಸಿಲ್ (ಡಿಎಸ್‌ಸಿ)

ಹಿಲ್ ಸ್ಟೂಡೆಂಟ್ಸ್ ಕೌನ್ಸಿಲ್

ರೆವಲ್ಯೂಶನರಿ ಸ್ಟೂಡೆಂಟ್ಸ್ ಯೂನಿಟಿ (ಆರ್‌ಎಸ್‌ಯು)

ರೆವಲ್ಯೂಶನರಿ ಸ್ಟೂಡೆಂಟ್ಸ್–ಯೂತ್ ಮೂವ್‌ಮೆಂಟ್

ಸ್ಟೂಡೆಂಟ್ಸ್ ಫೆಡರೇಶನ್ ಆಫ್ ಬಾಂಗ್ಲಾದೇಶ್(ಎಸ್‌ಎಫ್‌ಬಿ)

ಸೋಷಲಿಸ್ಟ್ ಸ್ಟೂಡೆಂಟ್ ಫ್ರಂಟ್ (ಎಸ್‌ಎಸ್‌ಎಫ್)

**ಭಾರತ**

ಆಲ್ ಇಂಡಿಯಾ ಡೆಮಾಕ್ರೆಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಶನ್ (AIDSO)

ಆಲ್ ಇಂಡಿಯಾ ಸ್ಟೂಡೆಂಟ್ಸ್ ಅಸೋಸಿಯೇಶನ್ (AISA)

ಆಲ್ ಇಂಡಿಯಾ ಸ್ಟೂಡೆಂಟ್ಸ್ ಬ್ಲಾಕ್ (AISB)

ಆಲ್ ಇಂಡಿಯಾ ಸ್ಟೂಡೆಂಟ್ಸ್ ಫೆಡರೇಶನ್ (AISF)

ಪ್ರೊಗ್ರೆಸಿವ್ ಸ್ಟೂಡೆಂಟ್ಸ್ ಯೂನಿಯನ್ (PSU)

**ನೇಪಾಳ**

ಆಲ್ ನೇಪಾಳ್ ನ್ಯಾಷನಲ್ ಇಂಡಿಪೆಂಡೆಂಟ್ ಸ್ಟೂಡೆಂಟ್ಸ್ ಯೂನಿಯನ್ (ರೆವಲೂಶ್ನರಿ)

ನೇಪಾಳ ಸ್ಟೂಡೆಂಟ್ಸ್ ಯೂನಿಯನ್ (ಸೋಷಲಿಸ್ಟ್)

**ಪಾಕಿಸ್ತಾನ್**

ಡೆಮಾಕ್ರೆಟಿಕ್ ಸ್ಟೂಡೆಂಟ್ಸ್ ಫೆಡರೇಶನ್ (DSF)

ನ್ಯಾಶನಲ್ ಸ್ಟೂಡೆಂಟ್ಸ್ ಫೆಡರೇಶನ್ (NSF)

ಪ್ರೊಗ್ರೆಸಿವ್ ಸ್ಟೂಡೆಂಟ್ಸ್ ಕಲೆಕ್ಟಿವ್ (PSC)

**ಶ್ರೀಲಂಕಾ**

ಇಂಟರ್ ಯೂನಿವರ್ಸಿಟಿ ಬಿಕ್ಕು ಫೆಡರೇಶನ್ (IUBF)

ಇಂಟರ್ ಯೂನಿವರ್ಸಿಟಿ ಸ್ಟೂಡೆಂಟ್ಸ್ ಫೆಡರೇಶನ್ (IUSF)

ರೆವಲ್ಯೂಷನರಿ ಸ್ಟೂಡೆಂಟ್ಸ್ ಯೂನಿಯನ್ (RSU)

# ವಿದೇಶಗಳಿಗೆ ಕಾರ್ಮಿಕರ ರಫ್ತು

...3ನೇ ಪುಟದಿಂದ

ಶ್ರಮಾಧಾರಿತ ಕೈಗಾರಿಕೆಗಳನ್ನು ತೆರೆದು, ನಿರುದ್ಯೋಗ ಮತ್ತು ಆರ್ಥಿಕ ಸಂಕಷ್ಟಗಳನ್ನು ಆಂತರಿಕವಾಗಿ ಬಗೆಹರಿಸಿಕೊಳ್ಳಬಹುದಿತ್ತು. ಬದಲಿಗೆ ಸಮಸ್ಯೆಯನ್ನು ರಫ್ತು ಮಾಡಿ ಮಾನವನ ಶ್ರಮವನ್ನು ಪಣಕ್ಕಿಟ್ಟಿದೆ.

ಭಾರತದ ರಾಜಕೀಯ ಹಾಗೂ ಆರ್ಥಿಕತೆಯ ಸಮಕಾಲೀನ ಪರಿಸ್ಥಿತಿಯಲ್ಲಿ ಅಪರಿಹಾರ್ಯ ವಾಸ್ತವವನ್ನು ಮರೆಮಾಚಲು 'ಹೆಚ್ಚುವರಿ ಮಾನವ ಬಂಡವಾಳ' ಎನ್ನುವ ಪದವನ್ನು ಪದೇಪದೇ ಬಳಸಲಾಗುತ್ತಿದೆ. ನಿರುದ್ಯೋಗ ಇಳಿಮುಖವಾಗುತ್ತಿದೆಯೆಂದು ಸರ್ಕಾರ ಎಷ್ಟೇ ಬಡಾಯಿ ಕೊಚ್ಚಿಕೊಂಡರೂ ನೆಲದ ಸ್ಥಿತಿ ಬೇರೆ ಕಥೆಯನ್ನೇ ಹೇಳುತ್ತದೆ. ನಿರುದ್ಯೋಗ ಅಪಾಯಕಾರಿಯಾಗಿ ಏರುತ್ತಿದೆ. ಮೂಲಸೌಕರ್ಯಗಳ ಯೋಜನೆಯ ಮೂಲಕ ಉದ್ಯೋಗ ಸೃಷ್ಟಿ ಮಾಡುವುದು ಸರ್ಕಾರಕ್ಕೆ ಬಹಳ ದೂರದ ಮಾತು. ಆದ್ದರಿಂದ ವಿದೇಶಿ ಹೊರಗುತ್ತಿಗೆಯ ಮೂಲಕ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಲು ಹೊರಟಿರುವ ಭಾರತ ಸರ್ಕಾರ ಕೊಳಕು ಆಟವನ್ನಾಡುತ್ತಿದೆ.

**ರಷ್ಯಾದಲ್ಲಿ ಭಾರತೀಯ ಕಾರ್ಮಿಕರ ಸ್ಥಿತಿಗತಿ**

ವರದಿಗಳು ಸೂಚಿಸುವ ಪ್ರಕಾರ, ರಷ್ಯಾಗೆ ಹೋಗಿರುವ ಕಾರ್ಮಿಕರನ್ನು ಉಕ್ರೇನ್ ವಿರುದ್ಧದ ಯುದ್ಧದ ಮುಂಚೂಣಿಯಲ್ಲಿ ಹೋರಾಡಲು ದಬ್ಬಲಾಗುತ್ತಿದೆ. ಯುದ್ಧದ ಸಮಯದಲ್ಲಿ ಇಸ್ರೇಲಿನಲ್ಲಿರುವ ಪ್ಯಾಲೆಸ್ತೀನ್ ಕಾರ್ಮಿಕರ ಪರಿಸ್ಥಿತಿ ಚಿಂತಾಜನಕವಾಗಿದೆ, ಅತ್ಯಂತ ಅಪಾಯಕಾರಿಯಾಗಿದೆ. ಇಸ್ರೇಲಿನಲ್ಲಿ 2024ರ ಮಾರ್ಚ್ 4 ರಂದು ನಡೆದ ಕ್ಷಿಪಣಿ ದಾಳಿಯಲ್ಲಿ ಭಾರತೀಯ ಕಾರ್ಮಿಕನೊಬ್ಬ ಸತ್ತಿದ್ದಾನೆ ಮತ್ತು ಹಲವರು ಗಾಯಗೊಂಡಿದ್ದಾರೆ. ಅದಕ್ಕೂ ಮುಂಚೆ ರಷ್ಯನ್ ಸೈನ್ಯದ ಜೊತೆಜೊತೆಗೆ ಯುದ್ಧ ಮಾಡಲು ಬಲವಂತವಾಗಿ ಕಳುಹಿಸಿದ ಮೇಲೆ ರಷ್ಯಾ–ಉಕ್ರೇನ್ ಗಡಿಭಾಗದಲ್ಲಿ ಇಬ್ಬರು ಹತರಾಗಿದ್ದಾರೆ. ಆದರೂ ಭಾರತೀಯ ಕಾರ್ಮಿಕರಲ್ಲಿರುವ ಹತಾಶೆ, ಅವರನ್ನು ಭಾರತದಿಂದ ಅಭಿವೃದ್ಧಿ ಹೊಂದಿದ ಆರ್ಥಿಕತೆಯಿರುವ ದೇಶಗಳಿಗೆ ಅಕ್ರಮವಾಗಿ ವಲಸೆ ಹೋಗುವಂತೆ ಮಾಡುತ್ತಿದೆ. ಇತ್ತೀಚಿಗೆ ವಿಮಾನವೊಂದರಲ್ಲಿ ನಿಕರಾಗುವಾ ಮೂಲಕ ಅಮೆರಿಕಾ ತಲುಪುವ ಆಸೆಯಿದ್ದ ಭಾರತೀಯರೇ ತುಂಬಿಕೊಂಡಿದ್ದರು. ಭಾರತೀಯರನ್ನು ಅಕ್ರಮವಾಗಿ ಅಮೆರಿಕಾಗೆ ಸಾಗಿಸುವ ಮಾನವ ಕಳ್ಳಸಾಗಣೆಯ ಏಜೆನ್ಸಿಗಳು ಹುಟ್ಟಿಕೊಂಡಿವೆ.

ಹರಿಯಾಣದ ಗಾರೆ ಕೆಲಸದವರಾದ 28 ವರ್ಷದ ವಿವೇಕ್ ಶರ್ಮಾರ ಕಥೆ ಪರಿಸ್ಥಿತಿಯ ಗಂಭೀರತೆಯನ್ನು ಎತ್ತಿ ತೋರಿಸುತ್ತದೆ. ಇಸ್ರೇಲಿನಲ್ಲಿ ಯುದ್ಧ ನಡೆಯುತ್ತಿರುವುದು ಶರ್ಮಾಗೆ ಗೊತ್ತಿದ್ದರೂ ಸಹ ವರ್ಷಕ್ಕೆ 12,000 ಡಾಲರ್ ಗಳಿಸಬಹುದು ಎನ್ನುವ ಉತ್ಸಾಹದಲ್ಲಿದ್ದರು. ಭಾರತದಲ್ಲಿ ಅಷ್ಟನ್ನು ಗಳಿಸಲು ಅವರಿಗೆ ಐದು ವರ್ಷ ಬೇಕಾಗುತ್ತಿತ್ತು. ಬಹಳ ಇತ್ತೀಚಿನವರೆಗೂ ಕೊಲ್ಲಿ (ಗಲ್ಫ್) ದೇಶಗಳಲ್ಲಿ ಭಾರತೀಯ ಕಾರ್ಮಿಕರು ಅನುಭವಿಸಿದ ಪರಿಸ್ಥಿತಿಯು ವಸಾಹತು ಕಾಲದಲ್ಲಿದ್ದ ಜೀತದಾಳುಗಳ ಪರಿಸ್ಥಿತಿಗಿಂತ ಉತ್ತಮವೇನಾಗಿರಲಿಲ್ಲ. ಅವರು ಬೇರೆ ದೇಶಗಳಲ್ಲಿದ್ದ ತಮ್ಮ ಸಹ–ಕಾರ್ಮಿಕರಂತೆ ಹಕ್ಕುಗಳನ್ನು ಮತ್ತು ಧ್ವನಿಯನ್ನು ಕಳೆದುಕೊಂಡಿದ್ದರು. ಈ ಕಾರ್ಮಿಕರ ಪರಿಸ್ಥಿತಿಯು ವಿದೇಶದಲ್ಲಿರುವ ತನ್ನ ಪ್ರಜೆಗಳನ್ನು ಕಾಪಾಡುವುದರಲ್ಲಿ ಭಾರತದ ಸರ್ಕಾರದ ವಿಫಲತೆಯನ್ನು ಒತ್ತಿ ಹೇಳುತ್ತದೆ. ಇಂದಿಗೂ ಹಲವಾರು ದೇಶಗಳಲ್ಲಿ ಮುಂದುವರೆಯುತ್ತಿರುವ ಇಂತಹ ಅಮಾನವೀಯ ದುಡಿಯುವ ಪರಿಸ್ಥಿತಿಯ ಬಗ್ಗೆ ಭಾರತದ ರಾಜಕಾರಣಿಗಳಿಗೆ, ರಾಯಭಾರಿಗಳಿಗೆ ಮತ್ತು ಅಧಿಕಾರಿಗಳಿಗೆ ಸಂಪೂರ್ಣ ಅರಿವಿದೆ; ಮತ್ತೆ ರಾಯಭಾರಿಗಳು ಸಹಜವಾಗಿಯೇ ಕಾರ್ಮಿಕರ ಪ್ರತಿನಿಧಿಗಳೂ ಕೂಡ. ಕೊಲ್ಲಿ ಸಾಮ್ರಾಜ್ಯದಲ್ಲಿದ್ದ ಭಾರತದ ಮಾಜಿ ರಾಯಭಾರಿಯೊಬ್ಬರು, ಅಲ್ಲಿ ತಮಗೆ ರಾಯಭಾರ ಕೆಲಸಕ್ಕಿಂತ ಹೆಚ್ಚಾಗಿ ಭಾರತೀಯ ಕಾರ್ಮಿಕರಿಗೆ ಉತ್ತಮ ದುಡಿಯುವ ಪರಿಸ್ಥಿತಿಯನ್ನು ತಂದುಕೊಡುವಂತಹ ಕೆಲಸವೇ ಆಯಿತು ಎಂದು ಹೇಳಿದ್ದಾರೆ. ಕತಾರ್‌ನಲ್ಲಿ ಇತ್ತೀಚೆಗೆ 45ಕ್ಕೂ ಹೆಚ್ಚು ಭಾರತೀಯ ಕಾರ್ಮಿಕರು ಬೆಂಕಿ ಅವಘಡದಲ್ಲಿ ಸಾವನ್ನಪ್ಪಿದ ಘಟನೆ ಈ ಪರಿಸ್ಥಿತಿಗೆ ಹಿಡಿದ ಕನ್ನಡಿ.

ಇಲ್ಲೊಂದು ಮುಖ್ಯವಾದ ಅಂಶವಿದೆ. ಅಮೆರಿಕನ್ ಸಾಮ್ರಾಜ್ಯಶಾಹಿಗಳು ಶಸ್ತ್ರಾಸ್ತ್ರ ಹಾಗೂ ಹಣವನ್ನು ರಫ್ತು ಮಾಡುತ್ತಾರೆ. ಹಿಂಸೆ ಹಾಗೂ ಅವಲಂಬನೆಯನ್ನು ಹುಟ್ಟು ಹಾಕುತ್ತಾರೆ. ಆದರೆ ಇದಕ್ಕೆ ಸಂಪೂರ್ಣವಾಗಿ ವಿಭಿನ್ನವಾದ ಸಾಮ್ರಾಜ್ಯಶಾಹಿ ಸ್ವರೂಪದಲ್ಲಿ ಭಾರತವು ಹಣಕಾಸು ಬಂಡವಾಳವನ್ನಷ್ಟೇ ರಫ್ತು ಮಾಡುವುದಿಲ್ಲ; ಅದು ತನ್ನ ಅಸಹಾಯಕ ನಿರುದ್ಯೋಗಿ ಪ್ರಜೆಗಳನ್ನು ಅಂದರೆ ಮಾನವ ಬಂಡವಾಳವನ್ನೇ ರಫ್ತು ಮಾಡುತ್ತದೆ.

**ಉದ್ಯೋಗವೆಂಬ ಮರೀಚಿಕೆ**

ಈ ಕ್ರೂರ ಪದ್ಧತಿಯು, ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆಯೆನ್ನುವ ಬಿಜೆಪಿಯ ಮಾತುಗಳು ಪೊಳ್ಳೆಂದು ಬಯಲಿಗೆಳೆದಿದೆ. ಇತ್ತೀಚಿನ ಚುನಾವಣಾ ಭಾಷಣದಲ್ಲಿ ಪ್ರಧಾನಮಂತ್ರಿ ಮೋದಿ ಹೆದ್ದಾರಿ, ಸೇತುವೆ ಮತ್ತು ಮೇಲ್ಸೇತುವೆಗಳ ನಿರ್ಮಾಣದಿಂದ ವ್ಯಾಪಕವಾಗಿ ಉದ್ಯೋಗಾವಕಾಶಗಳು ಸೃಷ್ಟಿಯಾಗಿವೆ ಎಂದು ಹೆಮ್ಮೆಯಿಂದ ಸಾರಿದರು. ಈ ಮಾತುಗಳು ದಾರಿ ತಪ್ಪಿಸುವಷ್ಟೇ ಬಹಳ ಹಾಸ್ಯಾಸ್ಪದವೂ ಆಗಿವೆ. ನಿಜವಾದ ಉದ್ಯೋಗದಲ್ಲಿ ಸೂಕ್ತ ವೇತನಕ್ಕೆ ಖಾಯಂ ಕೆಲಸ ಹಾಗೂ ಉಪಯೋಗವಾಗುವ ಕೆಲಸದಲ್ಲಿ ತೊಡಗುವುದು ಒಳಗೊಂಡಿದೆ. ಬದಲಿಗೆ ನಿರ್ಮಾಣದ ಕೆಲಸಗಳಿಂದ ಹುಟ್ಟಿದ ಉದ್ಯೋಗಗಳು ತಾತ್ಕಾಲಿಕವಾಗಿರುತ್ತವೆ; ಕಡಿಮೆ ವೇತನವಿರುತ್ತದೆ; ಅಸುರಕ್ಷಿತ ದುಡಿಯುವ ಪರಿಸ್ಥಿತಿಯಿಂದ ಕೂಡಿರುತ್ತದೆ ಮತ್ತು ಕೆಲಸದ ಕಾಲಾವಧಿ ಹೆಚ್ಚಾಗಿರುತ್ತದೆ. ಈ ಶ್ರಮಶಕ್ತಿಯು ಭಾರತದ ಶ್ರಮ ಮಾರುಕಟ್ಟೆಯಲ್ಲಿ ಶೇ.93 ರಷ್ಟಿರುವ ಅಸಂಘಟಿತ ವಲಯದ ಒಂದು ಭಾಗ. ಕೈ–ಬಾಯಿಗೆ ಆಗುವಷ್ಟರಲ್ಲಿ ಜೀವಿಸಬಹುದೆಂದು, ಹೇಗೋ ಒಂದು ಜೀವನ ನಡೆಸಬಹುದೆಂದು ಒದ್ದಾಡಲು ಕಾರ್ಮಿಕರನ್ನು ತಳ್ಳುವ ಇಂತಹ ನಿರ್ಮಾಣದ ಕೆಲಸಗಳು ಕಾರ್ಮಿಕರಿಗೆ ಸ್ಥಿರತೆ ಮತ್ತು ಸುರಕ್ಷತೆ ನೀಡುವುದರಲ್ಲಿ ಸಂಪೂರ್ಣವಾಗಿ ವಿಫಲವಾಗಿವೆ.

**ಸಾಯುತ್ತಿರುವ ಬಂಡವಾಳವಾದ – ನಿರುದ್ಯೋಗಕ್ಕೆ ಕಾರಣ**

ಜಾಗತಿಕ ಸಾಮ್ರಾಜ್ಯಶಾಹಿ–ಬಂಡವಾಳಶಾಹಿ ವ್ಯವಸ್ಥೆಯು ಮುಖ್ಯವಾಗಿ ತನ್ನ ಸಾಯುವ ಹಂತದಲ್ಲಿ ಅಗತ್ಯವಿರುವಷ್ಟು ನಿಜವಾದ ಉದ್ಯೋಗವನ್ನು ಸೃಷ್ಟಿಸಲು ಅಸಮರ್ಥವಾಗಿದೆ. ಇತ್ತೀಚಿನ ದಿನಗಳಲ್ಲಿ, ಭಾರತವೂ ಸೇರಿದಂತೆ ಸಾಮ್ರಾಜ್ಯಶಾಹಿ–ಬಂಡವಾಳಶಾಹಿ ರಾಷ್ಟ್ರಗಳು ಖಾಸಗೀಕರಣದ ಭರದಲ್ಲಿವೆ. ಜನರ ಹಣದಿಂದ ಸ್ಥಾಪಿಸಿದ ಸಾರ್ವಜನಿಕ ಉದ್ದಿಮೆಗಳನ್ನು ಪುಡಿಗಾಸಿಗೆ ಖಾಸಗಿಯವರ ಕೈಗಿಟ್ಟಿವೆ. ಸರ್ಕಾರದ ಕೈಯಲ್ಲಿರಬೇಕಾಗಿದ್ದ ಶಿಕ್ಷಣ, ಆರೋಗ್ಯ ಸೇವೆ, ಕೃಷಿ, ಸಂಪರ್ಕ, ರೈಲ್ವೆ ಹಾಗೂ ಇನ್ನಿತರ ಸೇವಾಕ್ಷೇತ್ರಗಳನ್ನು ಯದ್ವಾತದ್ವಾ ಖಾಸಗೀಕರಣ ಮಾಡಲಾಗುತ್ತಿದೆ; ಇವುಗಳನ್ನು ದೊಡ್ಡ ಕೈಗಾರಿಕಾ ಮನೆತನಗಳು ಲಾಭ ಮಾಡುವ ಸರಕುಗಳನ್ನಾಗಿ ಮಾಡಿಕೊಂಡಿವೆ. ಖಾಸಗಿಯವರು ಮಾನವ ಶಕ್ತಿಯನ್ನು ಕಡಿತಗೊಳಿಸಿ, ಅದರ ಜಾಗದಲ್ಲಿ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿ ಉತ್ಪಾದನಾ ವೆಚ್ಚವನ್ನು ಸಾಧ್ಯವಾದಷ್ಟೂ ಕಡಿಮೆ ಮಾಡಲು ನೋಡುತ್ತಿದ್ದಾರೆ. ಆದ್ದರಿಂದ ಅವರು ಸ್ಥಾಪಿಸುವ ಕೈಬೆರಳೆಣಿಕೆಯಷ್ಟು ಕೈಗಾರಿಕೆಗಳು ಕೂಡ ಬಂಡವಾಳ ಆಧಾರಿತ ಕೈಗಾರಿಕೆಗಳು.

ಎರಡನೆಯದಾಗಿ, ಸಾಮ್ರಾಜ್ಯವಾದ–ಬಂಡವಾಳವಾದವು ಪರಿಹರಿಸಲಾಗದ ಮಾರುಕಟ್ಟೆಯ ತೀವ್ರ ಬಿಕ್ಕಟ್ಟಿನಲ್ಲಿ ಸಿಲುಕಿದೆ. ಕೈಗಾರಿಕೋದ್ಯಮಿಗಳು ಎಡೆಬಿಡದೆ ಗರಿಷ್ಠ ಲಾಭದ ಹಿಂದೆ ಬಿದ್ದಿದ್ದಾರೆ. ಗರಿಷ್ಠ ಲಾಭವು ಜನರನ್ನು ಹಿಂಡಿ ಹಿಪ್ಪೆ ಮಾಡುತ್ತಿದೆ; ಹೀಗೆ ಮಾರುಕಟ್ಟೆಯಲ್ಲಿ ಬೇಡಿಕೆ ಇರಲು ಅಗತ್ಯವಾದ ಜನರ ಕೊಳ್ಳುವಶಕ್ತಿಯನ್ನು ಕಸಿದುಕೊಂಡಿದೆ; ಅವರ ಆರ್ಥಿಕ ಅಸ್ಥಿರತೆಯನ್ನು ಉಲ್ಬಣಗೊಳಿಸುತ್ತಿದೆ. ದಿವಾಳಿಯಾದ ಜನರಲ್ಲಿ ಕೊಳ್ಳುವಶಕ್ತಿ ಇಲ್ಲದಿರುವುದರಿಂದ ಸರಕುಗಳು ಮಾರಾಟವಾಗದೆ ಉಳಿಯುತ್ತವೆ; ಇದೆಲ್ಲವೂ ಆರ್ಥಿಕ ಸ್ಥಗಿತದ ವಿಷವರ್ತುಲಕ್ಕೆ ಹಾಗೂ ಸಾಮಾಜಿಕ ಸಂಕಷ್ಟಕ್ಕೆ ದಾರಿ ಮಾಡಿಕೊಡುತ್ತದೆ. ಆದ್ದರಿಂದ ಖಾಸಗಿಯವರು ಸಾವಿರಾರು ಉದ್ಯೋಗಿಗಳನ್ನು ಮತ್ತು ಕಾರ್ಮಿಕರನ್ನು ಬೀದಿಗೆ ಬಿಸಾಕಿ ಕಾರ್ಖಾನೆಗಳನ್ನು ಮುಚ್ಚುತ್ತಾರೆ. ಭಾರತದಲ್ಲಿ ಕಳೆದ 15 ವರ್ಷಗಳಿಂದ 7,50,000 ಕ್ಕೂ ಹೆಚ್ಚು ಕೈಗಾರಿಕೆಗಳು ಮುಚ್ಚಿವೆ; ಇದರಿಂದ ನಿರುದ್ಯೋಗ ಇನ್ನಷ್ಟು ಉಲ್ಬಣವಾಗಿದೆ. ಮಾರುಕಟ್ಟೆ ಇಲ್ಲದಿರುವ ಕಾರಣ ಮೂಲ ಕೈಗಾರಿಕಾ ಕ್ಷೇತ್ರದಲ್ಲಿ ಹೊಸ ಕೈಗಾರಿಕೆ ತೆರೆದಿರುವುದು ಅಪರೂಪ. ಬಂಡವಾಳಶಾಹಿ ಸಿದ್ಧಾಂತದ ಸೀಮೆಯೊಳಗಿದ್ದುಕೊಂಡು ಎಷ್ಟೇ ಆರ್ಥಿಕ ಸಿದ್ಧಾಂತಗಳನ್ನು ರೂಪಿಸಿದರೂ ಈ ಮೂಲಭೂತ ದೋಷವನ್ನು ಸರಿಪಡಿಸಲು ಸಾಧ್ಯವಿಲ್ಲ. ಇದರಲ್ಲೇ ಹುಡುಕಾಟ ನಡೆಸುವ ಅರ್ಥಶಾಸ್ತ್ರಜ್ಞರು ಬರೇ ನಿರರ್ಥಕವಾದ ತತ್ವ, ಸಿದ್ಧಾಂತಗಳನ್ನು, ಆಶ್ವಾಸನೆಗಳನ್ನು ಹರಡುತ್ತಿದ್ದಾರೆ. ಏಕೆಂದರೆ ಬಂಡವಾಳಶಾಹಿ ವ್ಯವಸ್ಥೆಯಿಂದಲೇ ಬರುತ್ತಿರುವ ಬಿಕ್ಕಟ್ಟನ್ನು ಆ ವ್ಯವಸ್ಥೆಗೆ ಏನೂ ಆಗದಂತೆ ಬಗೆಹರಿಸಲು ಸಾಧ್ಯವಿಲ್ಲ. ಭಾರತ ಸರ್ಕಾರದ ಶ್ರಮ ರಫ್ತು ನೀತಿಯು ಈ ವ್ಯವಸ್ಥಿತ ವೈಫಲ್ಯದ ರೋಗಲಕ್ಷಣ. ಬಂಡವಾಳವಾದದ ದೇಹದ ಮೇಲಿನ ಆರದ ಗಾಯ.

ಇಲ್ಲಿ ಸೋವಿಯತ್ ಒಕ್ಕೂಟ ಕೆಲವೇ ವರ್ಷಗಳ ಕಾಲಾವಧಿಯಲ್ಲಿ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಿತೆಂದು ಹೇಳುವುದು ಬಹಳ ಮುಖ್ಯ. 1932ರಲ್ಲಿ ಮಹಾನ್ ಸ್ಟಾಲಿನ್ ಹೇಳಿದ್ದೇನೆಂದರೆ, ಪ್ರತಿಯೊಬ್ಬರೂ ತಮ್ಮ ಶಕ್ತ್ಯಾನುಸಾರ ಕೆಲಸ ಮಾಡಬೇಕು ಮತ್ತು ಅವರಿಗೆ ಉದ್ಯೋಗವನ್ನು ಕೊಡುವ ಜವಾಬ್ದಾರಿ ಸಮಾಜವಾದಿ ಪ್ರಭುತ್ವದ ಮೇಲಿದೆ. ಕೆಲಸ ಮಾಡದೆ ಯಾರೂ ಇರಬಾರದು. ಅಲ್ಲಿ ಕೆಲಸದ ಅವಧಿಯನ್ನೂ ಕಡಿಮೆ ಮಾಡಲಾಯಿತು. ಇದು ಬಂಡವಾಳವಾದಕ್ಕೂ ಮತ್ತು ಸಮಾಜವಾದಕ್ಕೂ ಇರುವ ವ್ಯತ್ಯಾಸ.

ಚಿಂತನಾಶೀಲ ಜನರು ಈ ಸತ್ಯವನ್ನು ಗ್ರಹಿಸಬೇಕು. ಬಂಡವಾಳವಾದ–ಸಾಮ್ರಾಜ್ಯವಾದದ ಸೇವೆಗೈಯಲು ಟೊಂಕಕಟ್ಟಿ ನಿಂತಿರುವ ಯಾವ ಸರ್ಕಾರವೂ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಲಾರದು. ಆದ್ದರಿಂದ ಹೇಗಾದರೂ ಬಿಕ್ಕಟ್ಟಿನಿಂದ ಪಾರಾಗಲು ಮೋಸ, ವಂಚನೆಗಳ ಮಾರ್ಗವನ್ನು ಹುಡುಕುತ್ತದೆ. ಇಂತಹ ವಂಚಕರ ಮುಸುಕನ್ನು ಹರಿಯುವುದು ನಾವು ಮಾಡಬೇಕಾದ ಕೆಲಸ.

# ಲೈಂಗಿಕ ದೌರ್ಜನ್ಯದ ಸಂತ್ರಸ್ತೆಯರಿಗೆ ಧ್ವನಿಯಾದ "ಹಾಸನ ಚಲೋ"

## ವಿಕೃತ ಕಾಮಿ ಹಾಗೂ ಎಲ್ಲಾ ಅಪರಾಧಿಗಳಿಗೆ ಎಚ್ಚರಿಕೆ ನೀಡಿದ ನಾಗರಿಕ ಸಮಾಜ

ಆಕ್ರೋಶ, ಸಿಟ್ಟು, ನೋವಿನಿಂದ ಕೂಡಿದ ಸಾವಿರಾರು ಜನಸಾಮಾನ್ಯರು ಹಾಸನದ ಮಧ್ಯಭಾಗದಲ್ಲಿರುವ ಮಹಾರಾಜ ಉದ್ಯಾನವನದಲ್ಲಿ ಮೇ 30, 2024ರ ಬೆಳಗಿನಿಂದಲೇ ಜಮಾಯಿಸ ತೊಡಗಿದರು. ರಾಜ್ಯದ ಮೂಲೆ ಮೂಲೆಗಳಿಂದ ಎಲ್ಲಾ ವಯೋಮಾನದ ಮಹಿಳೆಯರು, ರೈತರು, ದಲಿತರು, ಯುವಜನರು, ವಿದ್ಯಾರ್ಥಿಗಳು, ಅಲ್ಪಸಂಖ್ಯಾತರು, ಕಾರ್ಮಿಕರು, ಬುದ್ಧಿಜೀವಿಗಳು, ಸಾಹಿತಿಗಳು, ಶಿಕ್ಷಕರು, ವೈದ್ಯರು, ನ್ಯಾಯವಾದಿಗಳು, ಕಲಾವಿದರು, ತಮ್ಮ ಪ್ರತಿರೋಧ ಸೂಚಿಸಲು ಬಂದು ಸೇರಿದರು. ಸುಮಾರು ನೂರಕ್ಕೂ ಹೆಚ್ಚು ಸಂಘಟನೆಗಳು ಈ ಹೋರಾಟದಲ್ಲಿ ಭಾಗಿಯಾದವು. ನಮ್ಮ ಪಕ್ಷ ಎಸ್‌ಯುಸಿಐ–ಸಿನ ವರ್ಗ ಹಾಗೂ ಸಮೂಹ ಮುಂದಳಗಳಾದ ಆಲ್ ಇಂಡಿಯಾ ಮಹಿಳಾ ಸಾಂಸ್ಕೃತಿಕ ಸಂಘಟನೆ, ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಶನ್, ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘಟನೆ, ಅಖಿಲ ಭಾರತ ಕೃಷಿ–ಕೂಲಿ ಕಾರ್ಮಿಕರ ಸಂಘಟನೆ, ಆಲ್ ಇಂಡಿಯಾ ಡೆಮಾಕ್ರೆಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಶನ್‌ಗಳು ಭಾಗವಹಿಸಿದವು.

ಸಾವಿರಾರು ಜನ ಪ್ರತಿಭಟನಾಕಾರರು ಸೇರಿದ್ದ ಉದ್ಯಾನವನದಿಂದ ಮೆರವಣಿಗೆ ಪ್ರಾರಂಭವಾಯಿತು. ಮೆರವಣಿಗೆಯ ಉದ್ದಕ್ಕೂ ಇಕ್ಕೆಲಗಳಲ್ಲಿ ನೂರಾರು ಸ್ಥಳೀಯರು ತುಂಬು ಮನಸ್ಸಿನಿಂದ ಹಾರೈಸಿದರು. ಹಲವಾರು ಜನ ಈ ಪ್ರತಿರೋಧದ ಭಾಗವಾದರು, ಪರೋಕ್ಷವಾಗಿ ಕಾರ್ಯಕ್ರಮದ ಯಶಸ್ಸಿಗೆ ಕೆಲಸ ಮಾಡಿದರು. ದಾರಿಯುದ್ದಕ್ಕೂ ನಿಲ್ಲದ ಘೋಷಣೆಗಳೊಂದಿಗೆ ಮೆರವಣಿಗೆಯು ಹಾಸನದ ಮುಖ್ಯ ರಸ್ತೆಗಳನ್ನು ದಾಟಿ ಪ್ರತಿಭಟನಾ ಸಭೆ ನಡೆಯುವ ಸ್ಥಳ ತಲುಪಿತು. ವೇದಿಕೆ ಮೇಲೆ ಎಡೆಬಿಡದೆ ಘೋಷಣೆಗಳು ಮುಂದುವರಿದವು. ನಂತರ ಹೋರಾಟದ ಗೀತೆಗಳನ್ನು ಹಲವಾರು ಪ್ರಗತಿಪರ ತಂಡಗಳು ಹಾಡಿದವು.

ಬಿಲ್ಕಿಸ್ ಬಾನು ಪ್ರಕರಣದಲ್ಲಿ ಸಾರ್ವಜನಿಕ ಹಿತಾಸಕ್ತಿ ದಾವೆಯನ್ನು ಸರ್ವೋಚ್ಚ ನ್ಯಾಯಾಲಯ ದಲ್ಲಿ ಹಾಕಿ ಪ್ರಕರಣದಲ್ಲಿ ನ್ಯಾಯ ದೊರಕಿಸಲು ಮುಂದಾದ ಶ್ರೀಮತಿ ಸುಭಾಷಿನಿ ಅಲಿಯವರು ಕಾರ್ಯಕ್ರಮದ ಅತಿಥಿಯಾಗಿ ಆಗಮಿಸಿದ್ದರು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಅವರು "ಅಪರಾಧಿಗೆ ಜೈಲು ಮಾತ್ರ ಜಾಮೀನು ಅಲ್ಲ" ಎಂದು ಘೋಷಿಸುತ್ತಾ ಇತ್ತೀಚೆಗಿನ ಜನಪ್ರತಿನಿಧಿಗಳು ಇಂತಹ ಹೊಲಸು ಕೃತ್ಯದಲ್ಲಿ ತೊಡಗುತ್ತಿದ್ದಾರೆ. ಕರ್ನಾಟಕ ಸರ್ಕಾರ ಇಂತಹವರನ್ನು ಬಚಾವ್ ಮಾಡಬಾರದು. ಬದಲಿಗೆ ಸಂತ್ರಸ್ತೆಯರಿಗೆ ಸುರಕ್ಷತೆ, ವೈದ್ಯಕೀಯ ನೆರವು ನೀಡಬೇಕು. ಮಹಿಳೆಯರು ಓದಲು, ಕೆಲಸ ಮಾಡಲು ಹಾಗೂ ತಮ್ಮ ಹಕ್ಕುಗಳನ್ನು ಸ್ಥಾಪಿಸಲು ನಡೆಸಿದ ಹೋರಾಟವನ್ನು ಮುಂದುವರಿಸುತ್ತಾ ಇನ್ನೂ ಹಲವಾರು ಹಕ್ಕುಗಳಿಗಾಗಿ ಹೋರಾಟ ಮಾಡುವ ಅವಶ್ಯಕತೆ ಇದೆ. ನಾನು ನಿಮ್ಮೊಂದಿಗೆ ಈ ಹೋರಾಟದಲ್ಲಿ ಕೊನೆಯವರೆಗೆ ಇರುತ್ತೇನೆ ಎಂದರು.

ಮತ್ತೋರ್ವ ಅತಿಥಿಯಾಗಿ ಮಾತನಾಡಿದ ಹಿರಿಯ ಚಳುವಳಿಗಾರರಾದ ಶ್ರೀ ಎಸ್. ಆರ್.ಹಿರೇಮಠ್‌ರವರು ಸಭೆಯಲ್ಲಿ ಸೇರಿದ ಎಲ್ಲಾ ಹೋರಾಟಗಾರರ ಧೈರ್ಯ ಮೆಚ್ಚತಕ್ಕದ್ದು ಎಂದು ಹೇಳುತ್ತಾ ಐತಿಹಾಸಿಕವಾಗಿ ಎಷ್ಟೋ ಹೋರಾಟಗಳು ಪ್ರಾರಂಭವಾಗಿದ್ದು ಹೀಗೆಯೇ ಎಂದರು. ಸೂರ್ಯ ಮುಳುಗದ ಸಾಮ್ರಾಜ್ಯ ಎಂದು ಗರ್ವದಿಂದ ಬೀಗಿದ್ದ ಬ್ರಿಟಿಷರಿಗೆ ಮಹಡ್ ಚಳುವಳಿ ಪಾಠ ಕಲಿಸಿತ್ತು. ತಾವುಗಳು ಬಳ್ಳಾರಿಯ ರಿಪಬ್ಲಿಕ್ ಅಂತ ಹೇಳಿಕೊಳ್ಳುತ್ತಿದ್ದ ರೆಡ್ಡಿ ಸಹೋದರರಿಗೆ ಸೆರೆಮನೆ ವಾಸವಾಯಿತು. ಹೀಗೆಯೇ ಹಾಸನದಲ್ಲಿ ಪಾಳೇಗಾರಿಕೆಯ ಗರ್ವದಿಂದ ನಡೆಯುತ್ತಿರುವ ಅನ್ಯಾಯಗಳಿಗೆ ಪಾಠ ಕಲಿಸಬೇಕಿದೆ. ಇದು ವ್ಯವಸ್ಥಿತವಾದ ಹೋರಾಟವಾಗಬೇಕಿದೆ. ನಾನು ಕೊನೆಯವರೆಗೂ ಈ ಹೋರಾಟದ ಜೊತೆಗೆ ಇರುತ್ತೇನೆ ಎಂದು ಇಲ್ಲಿ ಘೋಷಿಸುತ್ತೇನೆ ಎಂದು ತಮ್ಮ ಮಾತು ಮುಗಿಸಿದರು.

ಸಭೆಯಲ್ಲಿ ಮಾತನಾಡಿದ ಎಐಎಂಎಸ್‌ಎಸ್‌ನ ರಾಜ್ಯ ಕಾರ್ಯದರ್ಶಿ ಶೋಭಾ ಎಲ್ಲರಿಗೂ ಹೋರಾಟದ ಶುಭಾಶಯಗಳನ್ನು ಹೇಳುತ್ತಾ ಹಾಸನದಲ್ಲಿ ಭಯದ ವಾತಾವರಣ ಸೃಷ್ಟಿಯಾಗಿದೆ, ಹಾಗಾಗಿ ಸಂತ್ರಸ್ತೆಯರು ತಮ್ಮ ದೂರನ್ನು ನೀಡಲು ಮುಂದೆ ಬರಲು ಹಿಂಜರಿಯುತ್ತಿದ್ದಾರೆ. ಅವಮಾನದಿಂದ ಕೆಲವರು ಜೀವ ತೆಗೆದುಕೊಳ್ಳುವ ದಿಕ್ಕಿನಲ್ಲಿ ಆಲೋಚಿಸುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ಸಂಪೂರ್ಣ ಜವಾಬ್ದಾರಿ ತೆಗೆದುಕೊಂಡು ಸಂತ್ರಸ್ತೆಯರ ಜೊತೆ ತುರ್ತಾಗಿ ನಿಲ್ಲಬೇಕಾಗಿದೆ. ಜನತೆಗೆ ರಾಜ್ಯ ಸರ್ಕಾರದಿಂದ ಈ ನಿರೀಕ್ಷೆ ಇದೆ. ಈ ಪ್ರಕರಣದಲ್ಲಿ ಲೈಂಗಿಕ ಹಗರಣದ ಪೆನ್‌ಡ್ರೈವ್ ಅನ್ನು ಹಂಚಿಕೆ ಮಾಡಿರುವವರು ಸೂಕ್ಷ್ಮ ಸಂವೇದನೆಯನ್ನು ಕಳೆದುಕೊಂಡು ಪೈಶಾಚಿಕವಾಗಿ ವರ್ತಿಸಿದ್ದಾರೆ. ಎಲ್ಲಾ ಪೆನ್ ಡ್ರೈವ್ ಗಳನ್ನು ಮುಟ್ಟುಗೋಲು ಹಾಕಿ, ಈ ನೀಚ ರಾಜಕೀಯದಲ್ಲಿ ತೊಡಗಿರುವ ಹಾಗೂ ಕೊಳೆತ ಸಂಸ್ಕೃತಿಯನ್ನು ಹರಡುತ್ತಿರುವ ಎಲ್ಲರಿಗೂ ಕಠಿಣ ಶಿಕ್ಷೆ ಆಗಬೇಕು. ದೌರ್ಜನ್ಯಕ್ಕೆ ಒಳಗಾದ ಎಲ್ಲಾ ಹೆಣ್ಣು ಮಕ್ಕಳು ತಪ್ಪಿತಸ್ಥ ಭಾವನೆಯಿಂದ ಹೊರಬಂದು ಧೈರ್ಯವಾಗಿ ಸಮಾಜವನ್ನು ಎದುರಿಸಬೇಕು, ಅಪರಾಧಿ ತಲೆ ತಗ್ಗಿಸಬೇಕು. ಹಲವು ನೆಪ ಒಡ್ಡಿ ಅಪರಾಧಿ ತಪ್ಪಿಸಿಕೊಂಡರೂ ಸಾಮಾಜಿಕವಾಗಿ – ನೈತಿಕವಾಗಿ ಜನರು ಅಂತಹವರನ್ನು ತಿರಸ್ಕರಿಸಬೇಕಿದೆ. ಸಂತ್ರಸ್ತೆಯರ ಹಾಗೂ ಈ ಹೋರಾಟದ ಜೊತೆಗೆ ಕೊನೆಯವರೆಗೂ ನಮ್ಮ ಎಲ್ಲಾ ಸಂಘಟನೆಗಳು ನಿಲ್ಲುತ್ತೇವೆ ಎಂದು ಹೇಳುತ್ತಾ ಮಾತು ಮುಗಿಸಿದರು.

ಪ್ರತಿಭಟನಾ ಸಭೆಯ ಅಧ್ಯಕ್ಷತೆ ವಹಿಸಿದ ಹೋರಾಟಗಾರ್ತಿ ಶ್ರೀಮತಿ ರೂಪ ಹಾಸನರವರು ಎಲ್ಲಾ ಜಿಲ್ಲೆಗಳಿಂದ ಹೋರಾಟದ ಸಾಗರಕ್ಕೆ




**ಪ್ರತಿಭಟನಾ ಸಭೆಯನ್ನುದ್ದೇಶಿಸಿ ಮಾತನಾಡುತ್ತಿರುವವರು ಕಾಮ್ರೇಡ್ ಶೋಭಾ ಎಸ್, ರಾಜ್ಯ ಕಾರ್ಯದರ್ಶಿಗಳು, AIMSS**

ನದಿಗಳಾಗಿ ಬಂದು ಸೇರಿದ ಎಲ್ಲಾ ಜೀವಪರ ಜನಪರ ಮನಸ್ಸುಗಳಿಗೆ ಧನ್ಯವಾದಗಳನ್ನು ಅರ್ಪಿಸಿದರು. ಹೆಣ್ಣುಮಕ್ಕಳ ಮಾನ– ಪ್ರಾಣ– ಕುಟುಂಬ –ಬದುಕುಗಳನ್ನು ಪಣಕ್ಕಿಟ್ಟು ದಾಳಗಳಾಗಿ ಬಳಸಿಕೊಂಡ ಸಂಸದ ಮಾಡಿದ್ದು ಸರಣಿ ಕಾಮ ಕೃತ್ಯ. ಆತ ಅದನ್ನು ಚಿತ್ರೀಕರಿಸಿ ಬ್ಲಾಕ್ ಮೇಲ್ ಮಾಡುತ್ತಿದ್ದುದು ವಿಕೃತ ಲೈಂಗಿಕ ಹತ್ಯಾಕಾಂಡ ಎಂದು ಧಿಕ್ಕರಿಸಿದರು. ಇದನ್ನು ಎಲ್ಲಾ ರಾಜಕೀಯ ಪಕ್ಷಗಳು ತಮ್ಮ ಚುನಾವಣಾ ರಾಜಕಾರಣಕ್ಕೆ ನಿರ್ಲಜ್ಜವಾಗಿ ಬಳಸಿಕೊಂಡಿವೆ. ಮತ್ತೊಂದೆಡೆ ಹಾಸನದ ಜನತೆ ಸಂತ್ರಸ್ತೆಯರ ಪರವಾಗಿ ಅನುಭವಿಸುತ್ತಿರುವ ನೋವು ಹೇಳಲಿಕ್ಕಾಗದು. ಸಭೆಯಲ್ಲಿ ಎಲ್ಲರೂ ಗಟ್ಟಿಯಾಗಿ ಪ್ರತಿಪಾದಿಸಿದ "ನಿಮ್ಮೊಂದಿಗೆ ನಾವಿದ್ದೇವೆ" ಎಂಬುದನ್ನು ಸಂತ್ರಸ್ತೆಯರು ಮನಸ್ಸಿಗೆ ತೆಗೆದುಕೊಂಡು ಗಟ್ಟಿಯಾಗಿ ನಿಲ್ಲಬೇಕು ಎಂದು ಕರೆ ನೀಡಿದರು.

ಒಟ್ಟಾರೆಯಾಗಿ ಇಡೀ ಸಮಾಜದಲ್ಲಿ ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ಸ್ವರೂಪ ವಿಕಾರವಾಗುತ್ತಿದೆ. ಪುರುಷ ಪ್ರಧಾನ ಮನೋಭಾವನೆ ಒಂದೆಡೆಯಾದರೆ ಮತ್ತೊಂದೆಡೆ ಅಧಿಕಾರ, ಹಣಬಲ, ತೋಳ್ಬಲ, ಕುಟುಂಬ ರಾಜಕೀಯಗಳ ಪ್ರಭಾವ, ಕೊಳೆತ ಸಾಂಸ್ಕೃತಿಕ ಅಧಃಪತನದೊಂದಿಗೆ ಸೇರಿ ವಿಕೃತತೆಯ ಪರಮಾವಧಿ ಮುಟ್ಟಿದೆ. ಇತ್ತೀಚಿನ ಕೆಲವು ಪ್ರಕರಣಗಳು ಸಾಕ್ಷಿಯಾಗಿವೆ– ಕತುವಾನ ಆಸೀಫಾ ಬಾನೊ, ಹತ್ರಾಸ್‌ನ ದಲಿತ ಹೆಣ್ಣುಮಗಳು, ಧರ್ಮಸ್ಥಳದ ಸೌಜನ್ಯ, ಹೈದರಾಬಾದ್‌ನ ಡಾ:ಪ್ರಿಯಾಂಕ ರೆಡ್ಡಿ ಹೀಗೆ ಪಟ್ಟಿ ಅಪೂರ್ಣವಾಗಿದೆ. ಹಾಸನದ ಪ್ರಕರಣದಲ್ಲಿ ಈ ದೌರ್ಜನ್ಯದ ವಿಷಯ ಕೆಲವು ತಿಂಗಳ ಹಿಂದಿನಿಂದಲೇ ಹೊಗೆಯಾಡುತ್ತಿದ್ದರೂ ರಾಜಕೀಯ ಹೊಂದಾಣಿಕೆಗಳಿಗೆ ಇದನ್ನು ಪಕ್ಕಕ್ಕೆ ಸರಿಸಲಾಯಿತು. ಹಾಸನದ ಈ ಘಟನೆಯು ಸಮಾಜವನ್ನು ಅಲ್ಲೋಲ ಕಲ್ಲೋಲ ಮಾಡಿದೆ. ಯುವಪೀಳಿಗೆಯ ನೈತಿಕತೆಯನ್ನು ಮುರಿದು ಅಧಃಪತನಕ್ಕಿಳಿಸಿದ ಹೊಣೆಯನ್ನೂ ಇಂತಹವರು ಹೊರಬೇಕಾಗಿದೆ. ಅಂತಿಮವಾಗಿ ಹೆಣ್ಣುಮಕ್ಕಳ ಸಮಾಧಿಯ ಮೇಲೆ ಅವರ ಐಷಾರಾಮದ ಬಂಗಲೆಯನ್ನು ಕಟ್ಟುತ್ತಿದ್ದಾರೆ.

ಇಂತಹ ಅನ್ಯಾಯಗಳ ವಿರುದ್ಧ ಸಿಡಿದೆದ್ದು ನ್ಯಾಯದ ಸ್ಥಾಪನೆಗಾಗಿ ನಡೆದ ಹೋರಾಟಗಳನ್ನು ಇಲ್ಲಿ ದಾಖಲಿಸಲೇಬೇಕಿದೆ. ದೇಶವೇ ಒಂದಾಗಿ ಮಾಡಿದ ನಿರ್ಭಯ ಚಳುವಳಿಯಿಂದಾಗಿ ಜಸ್ಟೀಸ್ ಜೆ.ಎಸ್.ವರ್ಮಾ ಸಮಿತಿ ರಚನೆಯಾದದ್ದು, ರಾಜಸ್ಥಾನದ ಅಂಗನವಾಡಿ ಕಾರ್ಯಕರ್ತೆ ಬನವಾರಿ ದೇವಿಯ ಚಳವಳಿ, ಗುಜರಾತ್ ಹತ್ಯಾಕಾಂಡದ ಸಂತ್ರಸ್ತೆ ಬಿಲ್ಕಿಸ್ ಬಾನುವಿನ ಹೋರಾಟ, ಭಾರತದ ಹೆಮ್ಮೆಯ ಕುವರಿಯರಾದ ಕುಸ್ತಿಪಟುಗಳ ಹೋರಾಟ, ಹೀಗೆ ಅನೇಕ ಘಟನೆಗಳು ನ್ಯಾಯ ಸ್ಥಾಪನೆಗೆ ಧೈರ್ಯ ತುಂಬುತ್ತವೆ. ಇದೇ ದಿಕ್ಕಿನಲ್ಲಿ ಇಡೀ ಸಮಾಜವು ಉನ್ನತ ನೀತಿ–ನೈತಿಕತೆಯ ಆಧಾರದ ಮೇಲೆ ಸಮಸಮಾಜವನ್ನು ಹೋರಾಡಿ ಕಟ್ಟಬೇಕಾಗಿದೆ.

**ಕಟ್ಟಡ ಕಾರ್ಮಿಕರು ಎದುರಿಸುತ್ತಿರುವ ಶೈಕ್ಷಣಿಕ ಸಹಾಯಧನದಲ್ಲಿನ ಕಡಿತ, ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿನ ಅವ್ಯವಹಾರಗಳು ಹಾಗೂ ಇನ್ನಿತರ ಜ್ವಲಂತ ಸಮಸ್ಯೆಗಳ ವಿರುದ್ಧ AIUTUC ಕರ್ನಾಟಕ ರಾಜ್ಯ ಸಂಯುಕ್ತ ಕಟ್ಟಡ ಕಾರ್ಮಿಕರ ಸಂಘದ ನೇತೃತ್ವದಲ್ಲಿ ನಡೆದ ಜಿಲ್ಲಾ ಸಮ್ಮೇಳನಗಳು.**







**ಖಾಸಗಿ ಟೆಲಿಕಾಂ ಕಂಪನಿಗಳು ಮೊಬೈಲ್ ರೀಚಾರ್ಜ್ ಬೆಲೆಯನ್ನು ಅನಿಯಂತ್ರಿತವಾಗಿ ಹೆಚ್ಚಳ ಮಾಡಿರುವುದನ್ನು ತಕ್ಷಣವೇ ಹಿಂಪಡೆಯಲು ಆಗ್ರಹಿಸಿ ಎಐಡಿವೈಓ ವತಿಯಿಂದ ರಾಜ್ಯವ್ಯಾಪಿ ಪ್ರತಿಭಟನೆ.**


















# ಐಎಲ್‌ಓನ 112ನೇ ಅಂತರರಾಷ್ಟ್ರೀಯ ಕಾರ್ಮಿಕ ಸಮ್ಮೇಳನದಲ್ಲಿ ಎಐಯುಟಿಯುಸಿ

ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆ(ಐಎಲ್‌ಓ)ಯು ವಿಶ್ವಸಂಸ್ಥೆಯ ಒಂದು ಪ್ರಧಾನ ಅಂಗಸಂಸ್ಥೆಯಾಗಿದ್ದು, ಜಾಗತಿಕವಾಗಿ ದುಡಿಯುವ ಜನರ ಮೂಲಭೂತ ಹಕ್ಕುಗಳು, ಸೇವಾಭದ್ರತೆ, ಸಾಮಾಜಿಕ ಭದ್ರತೆ ಹಾಗೂ ಉತ್ತಮ ಸೇವಾ ಪರಿಸ್ಥಿತಿಗಳನ್ನು ಖಾತ್ರಿಪಡಿಸುವ ಸಾಮಾಜಿಕ ಹಾಗೂ ಆರ್ಥಿಕ ನ್ಯಾಯವನ್ನು ಎತ್ತಿಹಿಡಿಯಲು ಬದ್ಧವಾಗಿದೆ. ವಿಶ್ವದ 187 ದೇಶಗಳು ಇದಕ್ಕೆ ಸದಸ್ಯ ರಾಷ್ಟ್ರಗಳಾಗಿವೆ. ಪ್ರತಿವರ್ಷ ಸ್ವಿಟ್ಜರ್ಲೆಂಡಿನ ಜಿನೀವಾದಲ್ಲಿ ಸಮ್ಮೇಳನಗಳನ್ನು ಸಂಘಟಿಸಿ, ಅಲ್ಲಿ ಕಾರ್ಮಿಕ ವರ್ಗಕ್ಕೆ ಸಂಬಂಧಿಸಿದ ವಿವಿಧ ವಿಷಯಗಳ ಬಗ್ಗೆ ಚರ್ಚಿಸಲಾಗುತ್ತದೆ. ಈ ವರ್ಷ ಜೂನ್ 3 ರಿಂದ 14 ರವರೆಗೆ ಜಿನೀವಾದಲ್ಲಿ ನಡೆದ 112ನೇ ಅಂತರರಾಷ್ಟ್ರೀಯ ಕಾರ್ಮಿಕ ಸಮ್ಮೇಳನದ(ILC) ಅಧಿವೇಶನಕ್ಕೆ 187 ದೇಶಗಳ 5000ಕ್ಕೂ ಹೆಚ್ಚು ಸಂಘಟನೆಗಳು-ಪ್ರತಿನಿಧಿಗಳು ಭಾಗವಹಿಸಿದ್ದರು. ನಮ್ಮ ದೇಶದ ಲಕ್ಷಾಂತರ ಕಾರ್ಮಿಕರ ಪರವಾಗಿ, ನಮ್ಮ ಪಕ್ಷದ ಕಾರ್ಮಿಕ ಮುಂದಳ AIUTUC ಸಂಘಟನೆಯು ಭಾಗವಹಿಸಿತ್ತು. AIUTUC ಅಖಿಲ ಭಾರತ ಸಮಿತಿಯ ಉಪಾಧ್ಯಕ್ಷರು ಹಾಗೂ ರಾಜ್ಯ ಅಧ್ಯಕ್ಷರಾದ ಕಾಮ್ರೇಡ್ ಕೆ.ಸೋಮಶೇಖರ್ ಅವರು ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಅಂತರರಾಷ್ಟ್ರೀಯ ಕಾರ್ಮಿಕ ಸಮ್ಮೇಳನ(ILC)ದಲ್ಲಿ ಸರ್ಕಾರದ ಪ್ರತಿನಿಧಿಗಳು, ಮಾಲೀಕವರ್ಗ ಮತ್ತು ಕಾರ್ಮಿಕರ ಗುಂಪುಗಳು ಭಾಗವಹಿಸುತ್ತವೆ. ಇದು ಅತ್ಯುನ್ನತ ತ್ರಿಪಕ್ಷೀಯ ಸಲಹಾ ಸಂಸ್ಥೆಯಾಗಿದೆ. ಇಲ್ಲಿ ತನ್ನ ಕಾರ್ಯಸೂಚಿ(ಅಜೆಂಡಾ)ಯಂತೆ ವಿವಿಧ ಸಮಿತಿಗಳನ್ನು ರಚಿಸಲಾಗುತ್ತದೆ. ಆ ಬಗ್ಗೆ ಪ್ರತಿ ಸಮಿತಿ(ಗುಂಪು) ಪ್ರತ್ಯೇಕವಾಗಿ, ವ್ಯಾಪಕವಾಗಿ ಸಮಾಲೋಚಿಸಿ ಕರಡು ನಿರ್ಣಯಗಳನ್ನು ಮಂಡಿಸುತ್ತದೆ ಮತ್ತು ಅಂತಿಮವಾಗಿ ಇವು ಸಮನ್ವಯತೆಯನ್ನು ಸಾಧಿಸಿ, ಸಮಗ್ರಚರ್ಚೆಯ ನಂತರ ಸಾಮಾನ್ಯ ಅಧಿವೇಶನ(ಪ್ಲಿನರಿ ಸೆಷನ್)ದಲ್ಲಿ ಅಂಗಿಕಾರಗೊಳ್ಳುತ್ತವೆ.

ಜೂನ್-3, 2024 ರಂದು ಉದ್ಘಾಟನಾ ಸಮ್ಮೇಳನದಲ್ಲಿ ಆಡಳಿತ ಮಂಡಳಿಯ(ಗವರ್ನಿಂಗ್ ಬಾಡಿ) ಅಧ್ಯಕ್ಷರು ಮತ್ತು ILO ನ ಮಹಾನಿರ್ದೇಶಕರು "ಸಾಮಾಜಿಕ ಒಪ್ಪಂದವನ್ನು ನವೀಕರಿಸುವ" ಬಗ್ಗೆ ವರದಿಯನ್ನು ಮಂಡಿಸಿದರು. ಈ ಸಲದ ಸಮ್ಮೇಳನದಲ್ಲಿ ಕೆಲಸದ ಸ್ಥಳದಲ್ಲಿ 'ಮೂಲಭೂತ ತತ್ವಗಳು ಮತ್ತು ಹಕ್ಕುಗಳು' ಯೋಗ್ಯ ಕೆಲಸ ಮತ್ತು ಆರೈಕೆ ಆರ್ಥಿಕತೆ(ಕೇರ್‌ಎಕಾನಮಿ), ಜೈವಿಕ ಅಪಾಯಗಳ ವಿರುದ್ಧ ರಕ್ಷಣೆ, ನಾಲ್ಕು ಅಂತರರಾಷ್ಟ್ರೀಯ ಕಾರ್ಮಿಕ ಒಪ್ಪಂದಗಳ ರದ್ದತಿ, ಮಾನದಂಡಗಳ ಅನ್ವಯಿಕೆ ಇತ್ಯಾದಿ ಕುರಿತು ಚರ್ಚಿಸಲಾಯಿತು.

AIUTUC ಉಪಾಧ್ಯಕ್ಷರಾದ ಕಾಮ್ರೇಡ್ ಕೆ.ಸೋಮಶೇಖರ್‌ರವರು, "ಕೆಲಸದ ಸ್ಥಳದಲ್ಲಿ ಮೂಲಭೂತ ತತ್ವಗಳು ಮತ್ತು ಹಕ್ಕುಗಳ ಕಾರ್ಯತಂತ್ರದ ಉದ್ದೇಶದ ಪುನರಾವರ್ತಿತ ಚರ್ಚಾ ಸಮಿತಿ"ಯಲ್ಲಿದ್ದು, ವಿವಿಧ ಅಧಿವೇಶನಗಳಲ್ಲಿ ಸಮಿತಿಯ ಚರ್ಚೆಯಲ್ಲಿ ಭಾಗವಹಿಸಿದರು. ಅವರು ಅಭಿಪ್ರಾಯಗಳನ್ನು ಮಂಡಿಸುತ್ತಾ "ವಿವಿಧ ದೇಶಗಳ ಸರ್ಕಾರಗಳು ಕಾರ್ಮಿಕರನ್ನು ಹೆಚ್ಚು ಹೆಚ್ಚು ಶೋಷಣೆ ಮಾಡುವ ಮೂಲಕ ಅವರ ಮೂಲಭೂತ ಹಕ್ಕುಗಳನ್ನು ದಮನ ಮಾಡುತ್ತಿವೆ. ಕೆಲಸದ ಸ್ಥಳದಲ್ಲಿ ಅವರ ಮೂಲಭೂತ ತತ್ವಗಳು ಮತ್ತು ಹಕ್ಕುಗಳನ್ನು ನಿರಾಕರಿಸಲಾಗುತ್ತಿದೆ ಎಂಬುದನ್ನು ನಾವು ಪ್ರಪಂಚದಾದ್ಯಂತ ನೋಡುತ್ತಿದ್ದೇವೆ. ಕೆಲಸ ಮಾಡುವ ಹಕ್ಕು, ಸಂಘಟನೆಯ ಹಕ್ಕು, ಸಾಮೂಹಿಕ



AIUTUC ಅಖಿಲ ಭಾರತ ಉಪಾಧ್ಯಕ್ಷರಾದ ಕಾಮ್ರೇಡ್ ಕೆ. ಸೋಮಶೇಖರ್ ಸಭೆಯಲ್ಲಿ ಮಾತನಾಡಿದರು.

ಚೌಕಾಸಿ, ಕೆಲಸದ ಅವಧಿಯ ವಿಸ್ತರಣೆ ಮುಂತಾದ ಪ್ರಮುಖ ಒಡಂಬಡಿಕೆಗಳನ್ನು ಸದಸ್ಯ ರಾಷ್ಟ್ರಗಳು ಉಲ್ಲಂಘಿಸುತ್ತಿವೆ ಅಥವಾ ಕಾರ್ಯಗತಗೊಳಿಸುತ್ತಿಲ್ಲ. ಪರಿಣಾಮವಾಗಿ, ಕಾರ್ಮಿಕರು ನಿರ್ದಯವಾಗಿ ಶೋಷಣೆಗೆ ಒಳಗಾಗುತ್ತಿದ್ದಾರೆ ಮತ್ತು ಅವರ ಸೇವಾ ಪರಿಸ್ಥಿತಿಗಳು ಅತ್ಯಂತ ಶೋಚನೀಯವಾಗಿವೆ. ವಿಶ್ವದ ಲಕ್ಷಾಂತರ ಬಡ, ದೀನ-ದಲಿತ, ಕಾರ್ಮಿಕರ ಜೀವನೋಪಾಯವು ಅಪಾಯದಲ್ಲಿದೆ" ಎಂದರು.

ಅವರು ಮುಂದುವರಿದು ವಿಷಯವನ್ನು ಮಂಡಿಸುತ್ತಾ, ""ಸುಸ್ಥಿರ ಉದ್ಯಮಗಳ' ಹೆಸರಿನಲ್ಲಿ ಒಂದಲ್ಲ ಒಂದು ನೆಪಗಳನ್ನು ನೀಡಿ ವ್ಯಾಪಾರ ವ್ಯವಹಾರವನ್ನು ಸುಲಭಗೊಳಿಸುತ್ತಿರುವ ಸರ್ಕಾರಗಳು, ಕಾರ್ಮಿಕರ ಮೂಲಭೂತ ಹಕ್ಕುಗಳನ್ನು ನಿರಾಕರಿಸುತ್ತಿವೆ. ಉದ್ಯಮಗಳು ಎದುರಿಸುತ್ತಿರುವ ಸಮಸ್ಯೆಗಳಿಗೂ ಮತ್ತು ಇದಕ್ಕೂ ಯಾವುದೇ ರೀತಿಯ ಸಂಬಂಧವಿಲ್ಲ. ಆದಾಗ್ಯೂ ಸರ್ಕಾರ ಮತ್ತು ಮಾಲೀಕರು ಕಾರ್ಮಿಕ ಹಕ್ಕುಗಳಿಗೆ ಹೆದರುತ್ತಾರೆ. ಕೃಷಿ ಕಾರ್ಮಿಕರು, ವಲಸೆ ಕಾರ್ಮಿಕರು, ಗೃಹ ಕಾರ್ಮಿಕರು, ಗಿಗ್ ಮತ್ತು ಅನೌಪಚಾರಿಕ ವಲಯದ ಕಾರ್ಮಿಕರು, ಅಸಂಘಟಿತ ವಲಯದ ಕಾರ್ಮಿಕರು ಇಂದಿಗೂ ಯಾವುದೇ ಕಾರ್ಮಿಕ ಕಾಯ್ದೆಗಳ ವ್ಯಾಪ್ತಿಗೆ ಒಳಪಟ್ಟಿಲ್ಲ. ಕೆಲವು ಸ್ಕೀಮ್‌ಗಳ ಹೆಸರಿನಲ್ಲಿ ಸರ್ಕಾರವು ಲಕ್ಷಾಂತರ ಮಹಿಳಾ ಕಾರ್ಮಿಕರ ಸೇವೆಗಳನ್ನು ಪಡೆದು, ವೇತನವನ್ನು ನೀಡದೆ ಅವರನ್ನು ಶೋಷಿಸುತ್ತಿದೆ. ಹೀಗಿರುವಾಗ ಈ ಕಾರ್ಮಿಕರು ಯೋಗ್ಯವಾದ ಕೆಲಸ ಪಡೆಯಬಲ್ಲರೇ? ಭೀಕರ ಪರಿಸ್ಥಿತಿಗಳನ್ನು ಎದುರಿಸುತ್ತಿರುವ ಅವರು ಸಾಮಾಜಿಕ ನ್ಯಾಯವನ್ನು ಅದ್ಹೇಗೆ ಪಡೆಯಬಲ್ಲರು? ಎಂದು ಪ್ರಶ್ನಿಸಿದರು.

ಐಎಲ್‌ಓ ಮಧ್ಯಸ್ಥಿಕೆಯ ನಂತರವೂ ಸದಸ್ಯ ರಾಷ್ಟ್ರಗಳು ಒಪ್ಪಂದಗಳನ್ನು ಉಲ್ಲಂಘಿಸುವ ಬಗ್ಗೆ ಚರ್ಚಿಸುವಾಗ ಸ್ವತಃ ಐಎಲ್‌ಓನ ಮಹಾನಿರ್ದೇಶಕರು ಉಪಸ್ಥಿತರಿದ್ದರು. ಅವರ ಗಮನ ಸೆಳೆಯುತ್ತ ಸೋಮಶೇಖರ್ ಅವರು "ಇಂತಹ ಗಂಭೀರ ಪರಿಸ್ಥಿತಿಯಲ್ಲಿ ಐಎಲ್‌ಓ ಹೊಸ ಶಕ್ತಿಯೊಂದಿಗೆ ಹೊರಹೊಮ್ಮಬೇಕು. ಕಾರ್ಮಿಕರಿಗೆ ಸಾಮಾಜಿಕ ನ್ಯಾಯ, ಭದ್ರತೆ, ಯೋಗ್ಯಜೀವನ ಮತ್ತು ಮೂಲಭೂತ ಹಕ್ಕುಗಳನ್ನು ಖಚಿತಪಡಿಸಲು ಹಾಗೂ ಲಕ್ಷಾಂತರ ಕಾರ್ಮಿಕರ ಹಿತಾಸಕ್ತಿಗಳನ್ನು ರಕ್ಷಿಸಲು ಪ್ರಮುಖ ಒಪ್ಪಂದಗಳನ್ನು ಅನುಸರಿಸಲು ಮತ್ತು ಕಾರ್ಯಗತಗೊಳಿಸಲು ಸದಸ್ಯ ರಾಷ್ಟ್ರಗಳನ್ನು ಒತ್ತಾಯಿಸುವ ಕ್ರಮಗಳನ್ನು ಕೈಗೊಳ್ಳಬೇಕು" ಎಂದು ಆಗ್ರಹಿಸಿದರು.

ಅಂತಿಮವಾಗಿ ಜೂನ್ 14 ರಂದು ಜರುಗಿದ ಐಎಲ್‌ಓ ಸರ್ವಸದಸ್ಯರ ಸಭೆಯಲ್ಲಿ ಕಾರ್ಯಸೂಚಿಯಲ್ಲಿನ ಎಲ್ಲಾ ಕರಡು ನಿಲುವಳಿಗಳು ಸರ್ವಾನುಮತದಿಂದ ನಿರ್ಣಯಗಳಾಗಿ ಅಂಗೀಕಾರಗೊಂಡವು.

### 'ಆಕ್ರಮಿತ ಅರಬ್ ಪ್ರದೇಶದ ಕಾರ್ಮಿಕರ ಪರಿಸ್ಥಿತಿ' ಕುರಿತು ವಿಶೇಷ ಸಭೆ

ಪ್ಯಾಲಿಸ್ತೈನ್‌ನ ಗಾಜಾದಲ್ಲಿ ಉಲ್ಬಣಗೊಂಡ ಯುದ್ಧಕ್ಕೆ ಪ್ರತಿಕ್ರಿಯೆಯಾಗಿ ILO ತುರ್ತು ಪುನಃಶ್ಚೇತನಾ ಯೋಜನೆಯನ್ನು ಕೈಗೆತ್ತಿಕೊಂಡಿತು. ಪ್ಯಾಲಿಸ್ತೈನ್‌ನ ಕಾರ್ಮಿಕರ ಬಿಕ್ಕಟ್ಟಿನ ವಿನಾಶಕಾರಿ ಪರಿಣಾಮವನ್ನು ತಗ್ಗಿಸುವ ಭಾಗವಾಗಿ ILO ತನ್ನ ಬೆಂಬಲವನ್ನು ಘೋಷಿಸಿತಲ್ಲದೆ ಅಲ್ಲಿನ ಅಭಿವೃದ್ಧಿಗಾಗಿ 20 ಮಿಲಿಯನ್ ಡಾಲರ್ ಮೊತ್ತವನ್ನು ಸಂಗ್ರಹಿಸುವ ಮನವಿಯನ್ನು ತನ್ನ ಸದಸ್ಯ ರಾಷ್ಟ್ರಗಳ ಮುಂದಿಟ್ಟಿತು. ಮೂಲಸೌಕರ್ಯಗಳನ್ನು ಸರಿಪಡಿಸಲು-ಮರುನಿರ್ಮಿಸುವುದು ಮತ್ತು ಮೂಲಭೂತ ಸೇವೆಗಳನ್ನು ಮರುಸ್ಥಾಪಿಸುವುದು, ಕಾರ್ಮಿಕರಿಗೆ ಕ್ಷಿಪ್ರಗತಿಯಲ್ಲಿ ಕೆಲಸಗಳನ್ನು, ಉದ್ಯೋಗಗಳನ್ನು ಸೃಷ್ಟಿಸುವುದು, ಈ ಮೂರು ಅಡಿಪಾಯಗಳ ಆಧಾರದ ಮೇಲೆ ತುರ್ತು ಪುನಃಶ್ಚೇತನ ಯೋಜನೆಯ(ERP) ಕೆಲಸ ಮಾಡುತ್ತದೆ. ಇದು ನಿರುದ್ಯೋಗ ನಿರ್ಮೂಲನೆ ಉದ್ದೇಶವನ್ನಷ್ಟೇ ಅಲ್ಲದೆ ತೀವ್ರ ಅಂಗವೈಕಲ್ಯ ಹೊಂದಿರುವಂತಹ ಅತ್ಯಂತ ದುರ್ಬಲರಿಗೆ ಭತ್ಯೆ ಸೇರಿದಂತೆ ಸಾಮಾಜಿಕ ರಕ್ಷಣಾ ಕ್ರಮಗಳನ್ನೂ ಒದಗಿಸುವ ಉದ್ದೇಶವನ್ನು ಸಹ ಒಳಗೊಂಡಿದೆ.

ವಿವಿಧ ದೇಶಗಳ ಪ್ರತಿನಿಧಿಗಳು ILO ತುರ್ತುಯೋಜನೆಯನ್ನು ಬೆಂಬಲಿಸಿದರು. ಆ ಘಳಿಗೆಯಲ್ಲೇ 8 ಮಿಲಿಯನ್‌ಗಿಂತಲೂ ಹೆಚ್ಚಿನ ಮೊತ್ತದ ದೇಣಿಗೆಗಳನ್ನು ಸ್ಥಳದಲ್ಲಿಯೇ ಘೋಷಿಸಿದರು. ಭಾಗವಹಿಸಿದ ಅನೇಕ ದೇಶಗಳು ಮುಂಬರುವ ದಿನಗಳಲ್ಲಿ ತಮ್ಮ ಬೆಂಬಲವನ್ನು ನೀಡುವುದಾಗಿ ತಿಳಿಸಿದರು.

ILOದ ಸರ್ವ ಸದಸ್ಯರ ಅಧಿವೇಶನದ ಸಮಯದಲ್ಲಿ, ಪ್ರತಿಯೊಬ್ಬ ಭಾಷಣಕಾರರು ಪ್ಯಾಲೆಸ್ತೀನ್ ಜನರ ಮೇಲೆ ಇಸ್ರೇಲ್ ನಡೆಸಿದ ನರಮೇಧದ ದಾಳಿಯ ವಿರುದ್ಧ ತಮ್ಮ ಬಲವಾದ ಖಂಡನೆಯನ್ನು ವ್ಯಕ್ತಪಡಿಸಿದರು ಮತ್ತು ಯುದ್ಧವನ್ನು ನಿಲ್ಲಿಸಲು ಒತ್ತಾಯಿಸಿದರು. ಜೂನ್ 14 ರಂದು ಜರುಗಿದ ಐಎಲ್‌ಓ ಸರ್ವಸದಸ್ಯರ ಸಭೆಯಲ್ಲಿ ವಿಶ್ವಸಂಸ್ಥೆಯು ಪ್ಯಾಲಿಸ್ತೈನ್ ಅನ್ನು ಸ್ವತಂತ್ರ 'ರಾಜ್ಯ' (ಸ್ವಾಯತ್ತ ಪ್ರದೇಶ) ವೆಂದು ಪರಿಗಣಿಸುವಂತೆ ಆಗ್ರಹಿಸುವ ಪ್ರಸ್ತಾವವನ್ನು ಎಲ್ಲಾ ಪ್ರತಿನಿಧಿಗಳು ಸರ್ವಾನುಮತದಿಂದ ಬೆಂಬಲಿಸಿದರು.

## ಮೂರು ಹೊಸ ಕ್ರಿಮಿನಲ್ ಕಾನೂನುಗಳು

...6ನೇ ಪುಟದಿಂದ

ಪ್ರದೇಶವೆಂದು ಪರಿಗಣಿತವಾದ ಪ್ರದೇಶಗಳಲ್ಲಿ ಆರೋಪಿಯು ಸ್ವತಃ ತನ್ನ ವಿರುದ್ಧ ಹೊರಿಸಲಾದ ಆರೋಪಗಳನ್ನು ಸುಳ್ಳು ಎಂದು ಸಾಬೀತುಪಡಿಸಬೇಕಾಗುತ್ತದೆ ಎಂಬ ಅಂಶವನ್ನು ಪ್ರತಿಪಾದಿಸುತ್ತದೆ. ಆದರೆ ಇದುವರೆಗೂ ಒಪ್ಪಿತ ನ್ಯಾಯಶಾಸ್ತ್ರದ ಪ್ರಕಾರ 'ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಯ ವಿರುದ್ಧ ಆರೋಪವನ್ನು ಹೊರಿಸಿದರೆ ಆ ಆರೋಪಗಳನ್ನು ನಿಜವೆಂದು ಸಾಬೀತುಪಡಿಸಲು ಆರೋಪ ಹೊರಿಸಿದ ವ್ಯಕ್ತಿಯೇ ಹೊಣೆಗಾರರಾಗಿದ್ದಾರೆ'. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಹೊಸ ಸಂಹಿತಾದಲ್ಲಿ ಈ ನಿಬಂಧನೆಯನ್ನು ವಿವಿಧ ಕರಾಳ ಕಾಯಿದೆಗಳಲ್ಲಿ ಇದ್ದಂತೆ ಅಳವಡಿಸಲಾಗಿದೆ. ವಿಚಾರಣೆ ಮತ್ತು ನಡಾವಳಿಗಳು ವಿದ್ಯುನ್ಮಾನದ ಮೂಲಕ ನಡೆಯಲಿವೆ. ಎಲೆಕ್ಟ್ರಾನಿಕ್ ವಿಧಾನದ ಉಪಯೋಗವನ್ನು ಪೂರ್ಣ ಪ್ರಮಾಣದಲ್ಲಿ ಮಂಜೂರು ಮಾಡುವುದರಿಂದ ಡಿಜಿಟಲ್ ಡೇಟಾ ಮತ್ತು ಗೌಪ್ಯತೆಯ ಉಲ್ಲಂಘನೆಯ ಸಾಧ್ಯತೆ ಇರುತ್ತದೆ. ಇದಲ್ಲದೆ, 'ಡಿಜಿಟಲ್ ಇಂಡಿಯಾ'ದ ಎಲ್ಲಾ ಗರ್ವದ ಮಾತುಕತೆಗಳ ಹೊರತಾಗಿಯೂ, ಭಾರತದ ಹೆಚ್ಚಿನ ಜನರಿಗೆ ತಾಂತ್ರಿಕತೆ ಇನ್ನೂ ಸವಾಲಾಗಿ ಉಳಿದಿದೆ. ಹಿರಿಯ ವಕೀಲರು ಅಥವಾ ನ್ಯಾಯಾಧೀಶರು ಡಿಜಿಟಲ್ ಸಾಕ್ಷ್ಯ ಅಥವಾ ಡಿಜಿಟಲ್ ದಾಖಲೆಯ ಸ್ಪಷ್ಟ ತಿಳುವಳಿಕೆಯನ್ನು ಹೊಂದಿಲ್ಲದಿರಬಹುದು. ಅದರಿಂದಾಗಿ ಹಲವು ತಪ್ಪುಗಳಾಗಬಹುದು.

### ಕೊನೆ ಮಾತು

ಇನ್ನೂ ಅನೇಕ ಸೂಕ್ಷ್ಮ ಅಂಶಗಳಿದ್ದರೂ ಸ್ಥಳಾಭಾವದಿಂದ ಇಲ್ಲಿ ಚರ್ಚಿಸಲಾಗಿಲ್ಲ. ಆದರೆ ಒಂದಂತೂ ಸ್ಪಷ್ಟ. ಹೊಸ ಮಸೂದೆಗಳನ್ನು ರೂಪಿಸುವುದರ ಹಿಂದೆ ಫ್ಯಾಸಿಸ್ಟ್ ನಿರಂಕುಶಾಧಿಕಾರದ ವಿನ್ಯಾಸವು ಸ್ಪಷ್ಟವಾಗಿ ಗೋಚರಿಸುತ್ತದೆ. ಸೂಕ್ಷ್ಮವಾಗಿ ಗಮನಿಸಿದರೆ ಕಾರ್ಯಾಂಗಕ್ಕೆ ಹೆಚ್ಚು ಹೆಚ್ಚು ನಿರಂಕುಶ ಅಧಿಕಾರವನ್ನು ಕೇಂದ್ರೀಕರಿಸುವ ಕುಟಿಲ ನಡೆಯಿದೆ. ಈ ಹಿಂದೆ ಚುನಾವಣಾ ಪ್ರಕ್ರಿಯೆಯು ತುಲನಾತ್ಮಕವಾಗಿ ಮುಕ್ತ ಮತ್ತು ನ್ಯಾಯಸಮ್ಮತವಾಗಿತ್ತು ಮತ್ತು ಜನಸೇವೆಗೆ ಬದ್ಧರಾದ ಕೆಲವು ವ್ಯಕ್ತಿಗಳನ್ನು ಚುನಾಯಿಸಲಾಗುತ್ತಿತ್ತು. ಆ ದಿನಗಳು ಕಳೆದು ಹೋಗಿವೆ. ಈಗ ಚುನಾವಣೆಯು ಹಣ-ಬಾಹುಬಲ-ಮಾಧ್ಯಮ-ಆಡಳಿತಾತ್ಮಕ ಶಕ್ತಿಗಳಿಂದ ಬರೀ ಪ್ರಹಸನವಾಗಿ ಬದಲಾಗಿದೆ. ಇಂತಹ ಚುನಾವಣೆಗಳು ಬೇರೆ ಯಾವ ರೀತಿಯ ಜನಪ್ರತಿನಿಧಿಗಳನ್ನು ಸೃಷ್ಟಿಸುತ್ತವೆ? ದೇಶದ ಬಹುಪಾಲು ಹಣವಂತರು, ಏಕಸ್ವಾಮ್ಯಾಧಿಪತಿಗಳು-ಕೈಗಾರಿಕೋದ್ಯಮಿಗಳು, ಲಾಭದ ಹಸಿವು ಹೊಂದಿದ ಶಾರ್ಕ್‌ಗಳು, ದೇಶ ಮತ್ತು ವಿದೇಶಗಳ ಹೃದಯಹೀನ ಬಂಡವಾಳಶಾಹಿ ಸಮರ್ಥಕರು ಮತ್ತು ಬಂಡವಾಳಶಾಹಿಗಳು, ಮಾಜಿ ಅಧಿಕಾರಶಾಹಿಗಳು, ಮಾಫಿಯಾ 'ಡಾನ್'ಗಳು, ಕುಖ್ಯಾತ ಸರಣಿ ಕೊಲೆಗಾರರು, ಅತ್ಯಾಚಾರಿಗಳು, ಕೋಮುವಾದಿಗಳು, ಸಂಪೂರ್ಣ ಭ್ರಷ್ಟಾಚಾರದಲ್ಲಿ ಮುಳುಗಿಹೋಗಿರುವವರು, ನಿರ್ಲಜ್ಜ ಭಟ್ಟಂಗಿಗಳು ಮತ್ತು ಆಳುವ ಬೂರ್ಜ್ವಾಗಳಿಗೆ ಅಧೀನವಾಗಿರುವ ಸಮಾಜದ ಇತರ 'ಗಣ್ಯರು' ಈಗ ಸಂಪೂರ್ಣ ಭ್ರಷ್ಟ ಮತ್ತು ಪ್ರತಿಗಾಮಿಗಳಾಗಿ ಮಾರ್ಪಟ್ಟಿದ್ದಾರೆ. ಶೇ.40 ರಷ್ಟು ಹಾಲಿ ಸಂಸದರು ತಮ್ಮ ವಿರುದ್ಧ ಕ್ರಿಮಿನಲ್ ಮೊಕದ್ದಮೆಗಳು ಇರುವುದನ್ನು ಘೋಷಿಸಿಕೊಂಡಿದ್ದಾರೆ, ಶೇ.25 ರಷ್ಟು ಶಾಸಕರು ಕೊಲೆ, ಕೊಲೆ ಯತ್ನ, ಅಪಹರಣ ಮತ್ತು ಮಹಿಳೆಯರ ವಿರುದ್ಧದ ಅಪರಾಧಗಳು ಸೇರಿದಂತೆ ಗಂಭೀರ ಅಪರಾಧಗಳ ಆರೋಪ ಹೊತ್ತಿದ್ದಾರೆ. (ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ADR) ಮತ್ತು ಹೊಸ ಚುನಾವಣೆಯ ಹೊಸ ವರದಿ ವೀಕ್ಷಿಸಿ) ಚುನಾಯಿತರಾದ ನಂತರ ಪಕ್ಷಾಂತರ, ಪ್ರತಿಪಕ್ಷದ ಶಾಸಕರನ್ನು ಹುದ್ದೆಯ ಆಮಿಷವೊಡ್ಡಿ ಬೇಟೆಯಾಡುವುದು - ಪ್ರತಿಪಕ್ಷದ ಪಾತ್ರವನ್ನು ಯದ್ವಾತದ್ವಾ ಮೊಟಕುಗೊಳಿಸುವುದು, ನೀತಿ ವಿಷಯಗಳ ಬಗ್ಗೆ ಯಾವುದೇ ಕನಿಷ್ಠ ಚರ್ಚೆ ಇಲ್ಲದಿರುವುದು, ಹೊಸ ಕಾನೂನುಗಳನ್ನು ಘೋಷಿಸಲು ಸುಗ್ರೀವಾಜ್ಞೆಯ ಮಾರ್ಗವನ್ನು ಬಳಸುವುದು - ಎಲ್ಲವೂ ಅತಿರೇಕಕ್ಕೆ ಹೋಗಿದೆ. ಯಾರಿಗೂ ಯಾವುದೇ ಅಂತಃಸಾಕ್ಷಿ ಇಲ್ಲ, ತತ್ವಬದ್ಧತೆ ಇಲ್ಲ ಅಥವಾ ಪ್ರಜಾಸತ್ತಾತ್ಮಕ ನಡವಳಿಕೆಯ ಹೋಲಿಕೆಯೂ ಇಲ್ಲ. ಒಂದು ಕಾಲದಲ್ಲಿ ಒಂದು ಸಂಸ್ಥೆಯಾಗಿ, ಬೂರ್ಜ್ವಾ ಸಂಸದೀಯ ಪ್ರಜಾಪ್ರಭುತ್ವದ ನೈಜ ಅಭಿವ್ಯಕ್ತಿಯಾಗಿದ್ದ ಸಂಸತ್ತು ಈಗ ವಾಸ್ತವಿಕವಾಗಿ ಆಳುವ ವರ್ಗದ ಕೈಗೊಂಬೆಯಾಗಿದೆ. ಶಾಸಕಾಂಗವನ್ನು ಕೆಳಮಟ್ಟಕ್ಕಿಳಿಸಲು ಆಳುವ ವರ್ಗ ಆಡುತ್ತಿರುವ ಈ ಅಪಾಯಕಾರಿ ನೀಚ ಆಟದಲ್ಲಿ ಎಲ್ಲ ಪ್ರಮುಖ ರಾಷ್ಟ್ರೀಯ ಅಥವಾ ಪ್ರಾದೇಶಿಕ ಬೂರ್ಜ್ವಾ ಪಕ್ಷಗಳು ಮಾತ್ರವಲ್ಲದೆ, ಸೋಷಲ್ ಡೆಮಾಕ್ರೆಟ್ ಪಕ್ಷಗಳೂ ಸಹ ಸೇರಿಕೊಂಡಿವೆ, ಇದೇ ರಾಗವನ್ನು ಹಾಡುತ್ತಿವೆ. ಹಾಗಾದರೆ, ಇಂತಹ ಶಾಸಕರಿಂದ ವಂಚಕ, ಬಲಾತ್ಕಾರಿ ಮತ್ತು ದಮನಕಾರಿ ಪ್ರತಿಗಾಮಿ ಶಾಸನಗಳ ಹೊರತಾಗಿ ಇನ್ನೇನು ನಿರೀಕ್ಷಿಸಬಹುದು?

ಈ ಬದಲಾವಣೆಯು ಬಂಡವಾಳಶಾಹಿ ಸಮಾಜದ ಬೆಳವಣಿಗೆಯ ಜೊತೆಗೇ ನಡೆಯುತ್ತಿದೆ ಎನ್ನುವುದನ್ನು ಮಾರ್ಕ್ಸ್‌ವಾದಿ-ಲೆನಿನ್‌ವಾದಿ ವಿಧಾನಕ್ರಮವು ಸ್ಪಷ್ಟವಾಗಿ ಮತ್ತು ಸರಳವಾಗಿ ಸೂಚಿಸುತ್ತದೆ. ಬಂಡವಾಳಶಾಹಿಯು ಮುಕ್ತ ಪೈಪೋಟಿಯ ಹಂತದಿಂದ ತನ್ನ ಮರಣಾಸನ್ನ ಹಂತಕ್ಕೆ ತಲುಪುತ್ತಿದ್ದಂತೆ, ಆರ್ಥಿಕತೆಯು ಕೆಲವೇ ಆಳುವ ಏಕಸ್ವಾಮ್ಯಾಧಿಪತಿಗಳ ಕೈಯಲ್ಲಿ ಕ್ರೋಢೀಕರಿಸಲ್ಪಟ್ಟಿತು. ಆಳ್ವಿಕೆಗೆ ಒಳಗಾದ ಬಹುಸಂಖ್ಯಾತ ಜನರು ನಿರ್ಗತಿಕರಾಗುತ್ತಿದ್ದಾರೆ ಮತ್ತು ದುರ್ಬಲರಾಗುತ್ತಿದ್ದಾರೆ. ಪರ್ಯಾಯವಾಗಿ ಅಧಿಕಾರವು ಕಾರ್ಯಾಂಗ ಮತ್ತು ಶಾಸಕಾಂಗದ ಕೈಯಲ್ಲಿ ಹೆಚ್ಚು ಹೆಚ್ಚು ಕೇಂದ್ರೀಕೃತವಾಗುತ್ತಿದೆ. ಅದು ನ್ಯಾಯಾಂಗದ ಸ್ವಾಯತ್ತತೆಯನ್ನೂ ಸಾಪೇಕ್ಷವಾಗಿ ಕುಗ್ಗಿಸುತ್ತಿದೆ. ಇದರಿಂದ ಅನೇಕ ಪ್ರಖ್ಯಾತ ನ್ಯಾಯಶಾಸ್ತ್ರಜ್ಞರು ಅಸಮಾಧಾನಗೊಂಡಿದ್ದಾರೆ. ಮೂರು ಕರಾಳ ಮಸೂದೆಗಳ ಅಂಗೀಕಾರವು ಪ್ರಜಾಪ್ರಭುತ್ವದ ವಿಧಿ, ರೂಢಿ ಮತ್ತು ಆಚರಣೆಗಳ ಕುರುಹುಗಳಿಗೆ ಸಮಾಧಿಯನ್ನು ಕಟ್ಟಿ, ದೇಶದಲ್ಲಿ ಫ್ಯಾಸಿಸಂನ ಹಿಡಿತವನ್ನು ಇನ್ನಷ್ಟು ಬಿಗಿಗೊಳಿಸುವತ್ತ ಸಾಗುತ್ತಿದೆ.

ದಿವಂಗತ ನ್ಯಾಯಮೂರ್ತಿ ಕೃಷ್ಣ ಅಯ್ಯರ್ ಅವರು, ಪಾರ್ಲಿಮೆಂಟಿನಲ್ಲಿ ಸಂಪೂರ್ಣ ಬಹುಮತದ ಮೂಲಕ ಕಾಯಿದೆಗಳನ್ನು ಅಂಗೀಕರಿಸಿದ ಪ್ರಕರಣವೊಂದರಲ್ಲಿ ತೀರ್ಪನ್ನು ನೀಡುವಾಗ ಹೀಗೆ ಹೇಳಿದರು: "ಮುಚ್ಚಿಡುವ ಪ್ರವೃತ್ತಿಯು ಕಾನೂನಿನ ನಿಯಮವಲ್ಲ." ಮತ್ತವರು ಹೇಳಿದ್ದೆಂದರೆ, "ಸಾರ್ವಜನಿಕರ ಗಮನಕ್ಕೆ ತಾರದೇ ಒಂದು ರಹಸ್ಯ ಕೋಣೆಯಲ್ಲಿ ತೆಗೆದುಕೊಳ್ಳುವ ನಿರ್ಧಾರವು ಅವರ ಜೀವನ, ಸ್ವಾತಂತ್ರ್ಯ ಮತ್ತು ಆಸ್ತಿಯನ್ನು ಪ್ರಭಾವಿಸಬಲ್ಲದು ಎಂಬ ಆಲೋಚನೆಯೇ....ನಾಗರೀಕರಿಗೆ ಅಸಹ್ಯ ತರಿಸುವಂಥದ್ದು. ಇದು ಅಂತಃಸಾಕ್ಷಿಗೆ ಆಘಾತ ತರುವಂಥದ್ದು".

ಅವರ ಮಾತುಗಳಲ್ಲಿನ ಸತ್ಯವನ್ನು ನಾವು ಗ್ರಹಿಸಬೇಕಾಗಿದೆ.

# ಕಣ್ತೆರೆಸುವ ಸುಪ್ರೀಂಕೋರ್ಟ್ ತೀರ್ಪು!

...3ನೇ ಪುಟದಿಂದ

ಮಾಡಲು ಹೊರಟಿರುವ ಸಂಘಟನೆಯೊಂದಿಗೆ ಸಿದ್ದಿಕ್ ಕಪ್ಪನ್ ಅವರು ಸಂಬಂಧ ಹೊಂದಿದ್ದಾರೆ ಎನ್ನುವ ಆರೋಪದ ಮೇಲೆ ಅವರನ್ನು ಮಥುರಾದಲ್ಲಿ ಬಂಧಿಸಲಾಯಿತು. ಈ ಬಂಧನ ವಿರೋಧಿಸಿ ದಿ ಕೇರಳ ಯುನಿಯನ್ ಆಫ್ ವರ್ಕಿಂಗ್ ಜರ್ನಲಿಸ್ಟ್ (KUWJ) ಅರ್ಜಿ ಹಾಕಿತು. ಸೆಪ್ಟೆಂಬರ್ 9, 2022ರಂದು, 'ಪ್ರತಿಯೊಬ್ಬ ನಾಗರಿಕನಿಗೂ ಮುಕ್ತವಾಗಿ ಅಭಿವ್ಯಕ್ತಿಸುವ ಹಕ್ಕಿದೆ' ಎಂದು ಸುಪ್ರೀಂ ಕೋರ್ಟ್ ಹೇಳುತ್ತಾ, ಯುಎಪಿಎ ಪ್ರಕರಣದಲ್ಲಿ ಸಿದ್ದಿಕ್ ಕಪ್ಪನ್‌ಗೆ ಜಾಮೀನು ನೀಡಿತು. ಆದರೂ 2021ರಲ್ಲಿ ಇಡಿಯು (ಜಾರಿ ನಿರ್ದೇಶನಾಲಯ), ಪಿಎಂಎಲ್‌ಎ ಪ್ರಕರಣ ದಾಖಲಿಸಿದ ಪರಿಣಾಮವಾಗಿ, ಸಿದ್ದಿಕ್ ಕಪ್ಪನ್ ಅವರು ಜೈಲಿನಲ್ಲಿಯೇ ಕೊಳೆಯಬೇಕಾಯಿತು. 2 ವರ್ಷದ ಬಂಧನದ ನಂತರ ಅಲಹಾಬಾದ್ ಉಚ್ಚ ನ್ಯಾಯಾಲಯ ಅವರಿಗೆ ಜಾಮೀನು ನೀಡಿತು. ಕೋಮುವಾದಿ ಹಿಂದುತ್ವ ರಾಜಕೀಯದ ಕಟು ಟೀಕಾಕಾರರಾಗಿದ್ದ ಗೌರಿ ಲಂಕೇಶ್‌ರನ್ನು ಗುಂಡು ಹಾರಿಸಿ ಹತ್ಯೆ ಮಾಡಲಾಯಿತು. ಪತ್ರಕರ್ತರ ಮೇಲಾಗುತ್ತಿರುವ ಇಂತಹ ಪ್ರಕರಣಗಳಿಗೆ ಕೊನೆಯಿಲ್ಲದಂತಾಗಿದೆ. ಪತ್ರಕರ್ತರು, ಮಾಧ್ಯಮಗಳ ಮೇಲೆ ನಡೆಯುತ್ತಿರುವ ಇಂತಹ ಆಕ್ರಮಣಕಾರಿ ಕ್ರಮಗಳಿಂದಾಗಿ, ವಿಶ್ವ ಪತ್ರಿಕಾ ಸ್ವಾತಂತ್ರ್ಯ ಸೂಚ್ಯಾಂಕದಲ್ಲಿ 180 ದೇಶಗಳಲ್ಲಿ ಭಾರತಕ್ಕೆ 161 ನೇ ಸ್ಥಾನ! ಹಿಂದಿನ ವರ್ಷ ಭಾರತ 150ನೇ ಸ್ಥಾನದಲ್ಲಿತ್ತು. ಯಾಕೆ ಹೀಗೆ ಆಗುತ್ತಿದೆ?

ಇದಕ್ಕೆ ಉತ್ತರ ಕಂಡುಕೊಳ್ಳಲು ಸಾಮಾಜಿಕ–ರಾಜಕೀಯ ಬೆಳವಣಿಗೆಗಳು ಹಾಗೂ ಐತಿಹಾಸಿಕ ಸತ್ಯಗಳನ್ನು ಮತ್ತೊಮ್ಮೆ ನೆನಪಿಸಿಕೊಳ್ಳಬೇಕಿದೆ. 1787ರಲ್ಲಿ ಇಂಗ್ಲೆಂಡ್‌ನ ಸಂಸತ್ತಿನ ಹೌಸ್ ಆಫ್ ಕಾಮನ್ಸ್ (ಕೆಳ ಮನೆ)ಯಲ್ಲಿ ಪತ್ರಿಕಾ ವರದಿಯ ಕುರಿತಂತೆ ಚರ್ಚೆ ನಡೆಯಿತು. ಆ ಸಂದರ್ಭದಲ್ಲಿ ಕೆಳಮನೆಯ ಸದಸ್ಯರಾದ ಎಡ್‌ಮಂಡ್ ಬರ್ಕ್ ಅವರು ಮಾಧ್ಯಮಗಳನ್ನು ಸಂಸದೀಯ ಪ್ರಜಾಪ್ರಭುತ್ವದ 4ನೇ ಸ್ತಂಭ ಎಂದು ಕರೆದರು. ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗದ ಈ ಮೂರು ಆಧಾರ ಸ್ತಂಭಗಳ ಜೊತೆಯಲ್ಲಿ ಮಾಧ್ಯಮ ನಾಲ್ಕನೇ ಆಧಾರ ಸ್ತಂಭವಾಗಿ ಕಾರ್ಯನಿರ್ವಹಿಸುತ್ತದೆ. ವಿವಿಧ ಕ್ಷೇತ್ರಗಳ ಬೆಳವಣಿಗೆಯ ಕುರಿತು ಜನರಿಗೆ ಸರಿಯಾದ ಮಾಹಿತಿ ನೀಡಿ, ಮಾಧ್ಯಮಗಳು ಜನರನ್ನು ಎಚ್ಚರಿಸುತ್ತವೆ. ಪ್ರಜಾಪ್ರಭುತ್ವವು ಆರೋಗ್ಯಕರವಾಗಿ ಕಾರ್ಯನಿರ್ವಹಿಸುವುದಕ್ಕೆ ಇದು ಸಹಕಾರಿಯಾಗುತ್ತದೆ. ಆದರೆ ಕಾಲ ಸರಿದಂತೆ, ಸಾಮಾಜಿಕ ಬೆಳವಣಿಗೆಯ ನಿಯಮದಂತೆ,



ಬಂಡವಾಳಶಾಹಿ ವ್ಯವಸ್ಥೆ ಕೊಳೆತಕ್ಕೊಳಗಾಗಿ, ಅದರ ಶೋಷಣೆಯ ಸ್ವರೂಪ ಮತ್ತಷ್ಟು ಬಯಲಾಗುತ್ತಲೇ ಹೋಯಿತು. ಹಾಗೆಯೇ ಜನತಾಂತ್ರಿಕ ಮೌಲ್ಯಗಳು ಸಹ ವ್ಯವಸ್ಥಿತವಾಗಿ ಕುಸಿಯುತ್ತಲೇ ಹೋದವು. ಬಂಡವಾಳಶಾಹಿ ವ್ಯವಸ್ಥೆಯು 20ನೇ ಶತಮಾನದಲ್ಲಿ ಸಾಮ್ರಾಜ್ಯಶಾಹಿ ಹಂತ ತಲುಪಿದ ಮೇಲೆ, ತನ್ನ ಎಲ್ಲಾ ಪ್ರಗತಿಪರ ಲಕ್ಷಣಗಳನ್ನು ಕಳೆದುಕೊಂಡು, ಅತ್ಯಂತ ಪ್ರತಿಗಾಮಿ ಹಾಗೂ ಭ್ರಷ್ಟವಾಗಿ, ಸಮಾಜದ ಪ್ರಗತಿಗೆ ದೊಡ್ಡ ಅಡ್ಡಿಯಾಗತೊಡಗಿತು. ಬಂಡವಾಳಶಾಹಿ ವಿರೋಧಿ ಕಾರ್ಮಿಕ ವರ್ಗದ ಕ್ರಾಂತಿಯ ಭಯ ಕೂಡ ಕೊಳೆತ ಬಂಡವಾಳಶಾಹಿ ವ್ಯವಸ್ಥೆಯನ್ನು ಕಾಡತೊಡಗಿತು. ಅಲ್ಲಿಂದಾಚೆಗೆ ಸಂಸತ್ತು ಪ್ರಜಾಪ್ರಭುತ್ವದ ಕನಿಷ್ಠ ಮೌಲ್ಯಗಳನ್ನು ಸಹ ತುಳಿಯುತ್ತಿದೆ. ಮರಣಾಸನ್ನ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಪ್ರಜಾಪ್ರಭುತ್ವ ಎನ್ನುವ ಪದ ಅಪಹಾಸ್ಯಕ್ಕೆ ಒಳಗಾಗಿದೆ. ಕೇವಲ ಪ್ರಜಾಪ್ರಭುತ್ವದ ಮುಖವಾಡ ಉಳಿದುಕೊಂಡಿದೆಯೇ ಹೊರತು ಅದರ ತಿರುಳನ್ನು ಕಳಚಿ ಹಾಕಲಾಗಿದೆ.

ಹಾಗಾಗಿ ಬಂಡವಾಳಶಾಹಿ ವರ್ಗ ವಿರೋಧಿ ಧ್ವನಿಗಳನ್ನು ಹತ್ತಿಕ್ಕಲು ತೀವ್ರಗತಿಯಲ್ಲಿ ಕಾನೂನಿನಲ್ಲಿ ತಿದ್ದುಪಡಿ ತರಲಾಗುತ್ತಿದೆ. ನಿರಂಕುಶ ಫ್ಯಾಸಿವಾದದ ಬಣ್ಣ ಬಯಲಾಗಬಾರದೆಂಬ ಕಾರಣಕ್ಕೆ ಪ್ರಾಮಾಣಿಕ ಮಾಧ್ಯಮಗಳ ಮೇಲೆ ಗದಾಪ್ರಹಾರ ನಡೆಸಲಾಗುತ್ತಿದೆ. Strategic Lawsuit Against Public Participation ನಂತಹ ಕರಾಳ ಕಾಯ್ದೆಗಳನ್ನು ಬಳಸಿ ನ್ಯಾಯಾಂಗದಿಂದ ಹೊರತಾದ ಕೆಲವು ಕ್ರಮಗಳ ಮೂಲಕ, ಸರ್ಕಾರಗಳಿಗೆ ತಲೆಬಾಗದ ವ್ಯಕ್ತಿಗಳು ಅಥವಾ ಮಾಧ್ಯಮಗಳನ್ನು ದಂಡಿಸಲಾಗುತ್ತಿದೆ. ಏಕಸ್ವಾಮ್ಯ ಮನೆತನಗಳು ಹಾಗೂ ಬಹುರಾಷ್ಟ್ರೀಯ ಕಂಪನಿಗಳು ಮುಖ್ಯವಾಹಿನಿ ಮಾಧ್ಯಮಗಳನ್ನು ಖರೀದಿಸಿ, ಅವನ್ನು ತಮ್ಮ ವರ್ಗ ಹಿತಾಸಕ್ತಿಗಳ ಪೂರೈಕೆಗೆ ಬಳಸಿಕೊಳ್ಳುತ್ತಿವೆ. ಅಧಿಕಾರಸ್ತರ ಪರವಾಗಿ ಇರುವ ಈ 'ಗೋದಿ ಮೀಡಿಯಾ'ಗಳು ಆಳುವ ಬಂಡವಾಳಶಾಹಿ ವ್ಯವಸ್ಥೆಯ ವೈಚಾರಿಕತೆಯನ್ನು ಹರಡುವ ತುತ್ತೂರಿಗಳಾಗಿವೆ. ಹಾಗಾಗಿ ಸುದ್ದಿ ವರದಿ ಮಾಡುವಲ್ಲಿ ಅಘೋಷಿತ ಸೆನ್ಸಾರ್ ವ್ಯವಸ್ಥೆ ಮನೆ ಮಾಡಿಯಾಗಿದೆ. ಮಾಧ್ಯಮ ಕ್ಷೇತ್ರದಲ್ಲಿ ಕಾರ್ಪೊರೇಟ್ ಶಕ್ತಿಗಳು ಪ್ರಾಬಲ್ಯ ಸಾಧಿಸಿದ ಮೇಲೆ ಪ್ರಾಮಾಣಿಕ ಹಾಗೂ ನೈತಿಕ ಪತ್ರಿಕೋದ್ಯಮ, ಪತ್ರಿಕಾ ಸ್ವಾತಂತ್ರ್ಯ, ಹಣಬಲದ ತುಳಿತಕ್ಕೆ ಒಳಗಾಗಿವೆ.

### ಕೊನೆಯದಾಗಿ.....

ಈ ಸಂದರ್ಭದಲ್ಲಿ ಮಹಾನ್ ಮಾರ್ಕ್ಸ್‌ವಾದಿ ಚಿಂತಕರು ಹಾಗೂ ಎಸ್‌ಯುಸಿಐ(ಸಿ) ಪಕ್ಷದ ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿಗಳಾದ ಕಾ.ಶಿವದಾಸ್ ಘೋಷ್ ಅವರು 1967ರಲ್ಲಿ ತಿಳಿಸಿದ ವಿಚಾರಗಳನ್ನು ಇಲ್ಲಿ ನೆನಪಿಸಿಕೊಳ್ಳುವುದು ಪ್ರಸ್ತುತ. "ನಾನು ಪತ್ರಿಕಾ ಮಿತ್ರರಿಗೆ ಒಂದು ವಿಷಯ ತಿಳಿಸಲು ಇಚ್ಛಿಸುತ್ತೇನೆ. ಅವರುಗಳು ಪತ್ರಿಕೆಯ ಬರವಣಿಗೆಯಲ್ಲಿ ದೇಶದ ದೊಡ್ಡ ಸಮಸ್ಯೆಗಳ ಬಗ್ಗೆ ಚರ್ಚಿಸುತ್ತಾರೆ. ಆಗಾಗ್ಗೆ ಪ್ರಜಾಪ್ರಭುತ್ವ, ಪ್ರಜಾತಂತ್ರ ಚಳುವಳಿ ಅಂತಹ ವಿಷಯಗಳ ಕುರಿತು ಪತ್ರಕರ್ತರು ಕೂಗೆಬ್ಬಿಸುತ್ತಾರೆ. ಆದರೆ ಅವು ಜನ ಸಾಮಾನ್ಯರ ಗಮನ ಸೆಳೆಯುವುದಿಲ್ಲ. ಪ್ರಜಾಪ್ರಭುತ್ವದ ತಿರುಳು ಏನು? ಪತ್ರಿಕೆಗಳಲ್ಲಿ ಕೆಲವು ಲೇಖನಗಳನ್ನು ಬರೆಯುವುದೇ ಅಥವಾ ಸಂಸದರ ಭಾಷಣಗಳನ್ನು ಪ್ರಕಟಿಸುವುದೇ? ಇಲ್ಲ. ಪ್ರಜಾತಾಂತ್ರಿಕ ಚಳುವಳಿ ಹಾಗೂ ಒಗ್ಗಟ್ಟಿನಿಂದ ಮೂಡಿ ಬಂದ ಜನತೆಯ ಪ್ರಜ್ಞಾವಂತಿಕೆಯಲ್ಲಿಯೇ ಪ್ರಜಾಪ್ರಭುತ್ವದ ನಿಜವಾದ ಶಕ್ತಿಯಿರುವುದು. ಪ್ರಜಾತಾಂತ್ರಿಕ ಹೋರಾಟಗಳನ್ನು ರಕ್ಷಿಸದೇ ಇದ್ದಲ್ಲಿ, ಪ್ರಜಾತಾಂತ್ರಿಕವಾಗಿ ಸಂಘಟಿತರಾಗಲು ಅವಕಾಶ ನೀಡದಿದ್ದಲ್ಲಿ, ಪ್ರಜಾತಾಂತ್ರಿಕವಾಗಿ ಪ್ರಜ್ಞಾವಂತರಾಗಲು ಮಾರ್ಗಗಳನ್ನು ತೆರೆಯದಿದ್ದಲ್ಲಿ, ಪ್ರತಿಕಾ ಮಾಧ್ಯಮದವರು ಎಷ್ಟೇ ಕೂಗು ಹಾಕಿದರೂ ಪ್ರಜಾಪ್ರಭುತ್ವ ಸತ್ತು ಹೋಗುತ್ತದೆ. ಬಂಡವಾಳಶಾಹಿಗಳ ದೃಷ್ಟಿಯಲ್ಲೂ ಪ್ರಜಾಪ್ರಭುತ್ವವನ್ನು ಉಳಿಸಲು ಆಗುವುದಿಲ್ಲ. ಕಾನೂನುಬದ್ಧ ಆಳ್ವಿಕೆಯನ್ನೇ ಪ್ರಜಾತಂತ್ರವೆಂದು ಅರ್ಥೈಸುವವರು, ಪತ್ರಿಕೆಗಳಲ್ಲಿ ಕೇವಲ ಲೇಖನಗಳನ್ನು ಬರೆಯುವುದರಿಂದ ಈ ಕಾನೂನುಗಳನ್ನು ಕೂಡ ಉಳಿಸಲು ಸಾಧ್ಯವಿಲ್ಲವೆಂದು ಗ್ರಹಿಸಬೇಕಿದೆ. ಪತ್ರಕರ್ತರು ಧೈರ್ಯವಾಗಿ ಹೊರಬಂದು ನ್ಯಾಯಸಮ್ಮತ ಪ್ರಜಾತಾಂತ್ರಿಕ ಚಳುವಳಿಗಳ ಪರವಾಗಿ ನಿಲ್ಲಬೇಕು. ಬಲಿಷ್ಠವಾದ ಪ್ರಜಾತಾಂತ್ರಿಕ ಹೋರಾಟಗಳು ಬೆಳೆಯದೇ ಇದ್ದಲ್ಲಿ, ಒಂದು ದಿನ ಮಿಲಿಟರಿ ಬಂದು ಎಲ್ಲಾ ಚುನಾಯಿತ ಸಂಸ್ಥೆಗಳನ್ನು ವಿಸರ್ಜಿಸಿ, ಕಾನೂನು ಸುವ್ಯವಸ್ಥೆ ಹೆಸರಲ್ಲಿ ಅಧಿಕಾರವನ್ನು ವಶ ಮಾಡಿಕೊಳ್ಳಬಹುದು.........ಆಗ ಪತ್ರಕರ್ತ ಸ್ನೇಹಿತರು ಸಂಸದೀಯ ಆಳ್ವಿಕೆಯನ್ನು ಉಳಿಸಲು ಸಾಧ್ಯವಾಗುವುದಿಲ್ಲ. ಲಕ್ಷಾಂತರ ಜನರ ಸಾಮೂಹಿಕ ರಾಜಕೀಯ ಪ್ರಜ್ಞೆ ಹಾಗೂ ಕ್ರಾಂತಿಕಾರಿ ಪ್ರಜಾತಾಂತ್ರಿಕ ಚಳುವಳಿ ಮಾತ್ರ ಇಂತಹ ಆಪತ್ತಿನಿಂದ ದೇಶವನ್ನು ಉಳಿಸಬಹುದು" (ಕಾ.ಶಿವದಾಸ್ ಘೋಷ್ ಆಯ್ದ ಕೃತಿಗಳು –3)

ಎಲ್ಲಾ ಪತ್ರಕರ್ತರು ತಮ್ಮ ಆತ್ಮಸಾಕ್ಷಿಯನ್ನು ಮಾರಿಕೊಂಡಿಲ್ಲ ಎಂಬುದು ಸಂತೋಷದ ವಿಷಯ. ಪತ್ರಕರ್ತರು ಧೈರ್ಯವಾಗಿ ಸತ್ಯವನ್ನು ಎತ್ತಿಹಿಡಿಯಬೇಕಾದರೆ, ಅಲ್ಪಸ್ವಲ್ಪ ಪ್ರಜಾತಂತ್ರವನ್ನು ಉಳಿಸುವ ಕಾವಲುನಾಯಿಯ ಪಾತ್ರ ನಿರ್ವಹಿಸಬೇಕಾದರೆ, ನ್ಯಾಯಸಮ್ಮತ ಪ್ರಜಾತಾಂತ್ರಿಕ ಹೋರಾಟಗಳನ್ನು ಮುನ್ನೆಲೆಗೆ ಬರುವಂತೆ, ಜನರಲ್ಲಿ ಪ್ರಜಾತಾಂತ್ರಿಕ ಪ್ರಜ್ಞೆಯನ್ನು ವ್ಯಾಪಕವಾಗಿ ಹರಡುವಂತೆ ಮಾಡಬೇಕು. ಆಗ ಮಾತ್ರ ನಿರಂಕುಶ ದಬ್ಬಾಳಿಕೆಯನ್ನು ಎದುರಿಸಲು ಸಾಧ್ಯ.

# ಮನೆ ಖರ್ಚಿಗಾಗಿ ಸಾಲದ ಮೊರೆ ಹೋಗುತ್ತಿರುವ ಜನಸಾಮಾನ್ಯರು

ಹೆಚ್ಚುತ್ತಿರುವ ನಿರುದ್ಯೋಗ ಮತ್ತು ಗಗನಕ್ಕೇರುತ್ತಿರುವ ಹಣದುಬ್ಬರವು ಸಾಮಾನ್ಯ ಜನರ ಸ್ಥಿತಿಯನ್ನು ಅಭದ್ರಗೊಳಿಸಿವೆ. ರಿಸರ್ವ್ ಬ್ಯಾಂಕ್‌ನ ಇತ್ತೀಚಿನ ಮಾಹಿತಿಯ ಪ್ರಕಾರ, 2022–23ರಲ್ಲಿ ಕುಟುಂಬಗಳ ನಿವ್ವಳ ಹಣಕಾಸು ಸ್ವತ್ತು ನಮ್ಮ ದೇಶದ ಜಿಡಿಪಿಯ (ಒಟ್ಟು ದೇಶೀಯ ಉತ್ಪನ್ನ) ಕೇವಲ ಶೇ. 5.1 ರಷ್ಟು ಕೆಳಕ್ಕೆ ಕುಸಿದಿದೆ. ದೇಶದ ಹೆಚ್ಚಿನ ನಾಗರಿಕರು ಮುಖ್ಯವಾಗಿ ಹಣಕಾಸಿನ ಸ್ವತ್ತುಗಳ (ಬ್ಯಾಂಕ್ ಮತ್ತು ಬ್ಯಾಂಕೇತರ ಠೇವಣಿಗಳು, ನಗದು, ಷೇರುಗಳಲ್ಲಿ ಹೂಡಿಕೆ, ವಿಮೆ ಮತ್ತು ಪಿಂಚಣಿ ನಿಧಿಗಳು, ಇತ್ಯಾದಿಗಳ) ಸ್ವರೂಪದಲ್ಲಿ ಉಳಿತಾಯ ಮಾಡಿರುತ್ತಾರೆ. ಆದ್ದರಿಂದ ಉಳಿತಾಯದಲ್ಲಾದ ಕುಸಿತವು, ಕಡಿಮೆ ಆದಾಯ, ಅಧಿಕ ಹಣದುಬ್ಬರ ಮತ್ತು ತೀವ್ರಗೊಳ್ಳುತ್ತಿರುವ ನಿರುದ್ಯೋಗ ಸಮಸ್ಯೆಗಳು ಬಂದಾಗ ಮುಖ್ಯವಾಗಿ ಉಳಿತಾಯದ ಮೇಲೆ ಅವಲಂಬಿತರಾಗಿರುವುದನ್ನು ತೋರಿಸುತ್ತದೆ. ಹಾಗಾಗಿ ಕಷ್ಟಕಾಲದಲ್ಲಿ ಬದುಕುಳಿಯಲು ಉಳಿತಾಯವನ್ನೇ ಬಳಸುತ್ತಿರುವಂತೆ ಕಂಡುಬರುತ್ತದೆ ಅಥವಾ ಬಹುಪಾಲು ಜನರ ಬಳಿ ಉಳಿತಾಯವೇ ಇಲ್ಲ. ಅದೇ ಅವಧಿಯಲ್ಲಿ, ಕುಟುಂಬಗಳ ಹಣಕಾಸಿನ ಹೊರೆಗಳು, ಮುಖ್ಯವಾಗಿ ಸಾಲಗಳು ಹೆಚ್ಚಾಗಿವೆ ಮತ್ತು ನಿವ್ವಳ ಹಣಕಾಸಿನ ಆಸ್ತಿಗಳು ಕಡಿಮೆಯಾಗಿವೆ. ಸಾಂಕ್ರಾಮಿಕ ರೋಗದ ಮೊದಲ ವರ್ಷದಲ್ಲಿ ಅಂದರೆ 2020–21 ರ ಸಾಲಿನಲ್ಲಿ ಹಣಕಾಸಿನ ಸ್ವತ್ತುಗಳಲ್ಲಿ ಏರಿಕೆಯಾಗಿ ಸುಮಾರು ರೂ.31 ಲಕ್ಷ ಕೋಟಿಗಳನ್ನು ತಲುಪಿತು. ಏಕೆಂದರೆ ಆರ್ಥಿಕತೆಯು ಬಹುತೇಕ ಲಾಕ್‌ಡೌನ್‌ನಲ್ಲಿದ್ದರಿಂದ ಯಾವುದೇ ವಹಿವಾಟುಗಳು ನಡೆಯುತ್ತಿರಲಿಲ್ಲ.

ಮುಂದಿನ ವರ್ಷದಲ್ಲಿ ಆರ್ಥಿಕತೆಯು ಕುಂಟುತ್ತಾ ಸಾಗಿದ್ದರಿಂದ ತೀವ್ರ ಕುಸಿತ ಕಂಡಿದೆ. ನಂತರ, ಹಣಕಾಸು ಆಸ್ತಿಯು 2020–21 ದಲ್ಲಿದ್ದ ಗರಿಷ್ಠ ಮಟ್ಟಕ್ಕೆ ಹೋಲಿಸಿದರೆ ಕಡಿಮೆಯಾದರೂ 2022–23 ರಲ್ಲಿ ಸ್ವಲ್ಪ ಹೆಚ್ಚಿತು. 2022–23 ರಲ್ಲಿ ಸಾಲಗಳು ರೂ. 15.8 ಲಕ್ಷ ಕೋಟಿಗಳಷ್ಟು ಅಸಾಧಾರಣ ಏರಿಕೆ ಕಂಡಿವೆ. ಇದು ಉಳಿತಾಯದ ಅರ್ಧ ಭಾಗಕ್ಕಿಂತ ಹೆಚ್ಚಾಗಿದೆ. ಜನರು ಹೆಚ್ಚು ಸಾಲಗಾರರಾಗುತ್ತಿದ್ದಾರೆ. ಇದು ಅವರ ನಿವ್ವಳ ಹಣಕಾಸು ಆಸ್ತಿಗಳನ್ನು ರೂ.13.8 ಲಕ್ಷ ಕೋಟಿಗೆ ತೀವ್ರವಾಗಿ ಕುಸಿಯುವಂತೆ ಮಾಡಿದೆ.

ಮೇಲಿನ ಎಲ್ಲಾ ಅಂಕಿಅಂಶಗಳನ್ನು ಅಧಿಕೃತ ದಾಖಲೆಗಳಿಂದ ಮತ್ತು ಕಾನೂನು ವ್ಯವಹಾರಗಳಿಂದ ತೆಗೆದುಕೊಂಡಿದೆಯೆಂದು ಇಲ್ಲಿ ಹೇಳಲೇಬೇಕು. ಕಾಳ ಆರ್ಥಿಕತೆಯಾದ (Black Economy) ಕಾನೂನನ್ನು ಮರೆಮಾಚಿದ ಅಥವಾ ಕಾನೂನು ಬಾಹಿರವಾದ ಅಪಾರ ಪ್ರಮಾಣದ ನಿಧಿಗಳು ಮತ್ತು ಭೌತಿಕ ಆಸ್ತಿಗಳಿವೆ.

ಆದಾಗ್ಯೂ, ಈ ರೀತಿಯ ಉಳಿತಾಯ ಮತ್ತು ಸಂಪತ್ತನ್ನು ಮೇಲ್ವರ್ಗದ ಕೆಲವು ಜನರು ಮಾತ್ರ ಹೊಂದಿರಲು ಸಾಧ್ಯ. ನಮಗೆ ತಿಳಿದಿರುವಂತೆ ಇತ್ತೀಚಿನ ಅಂದಾಜಿನ ಪ್ರಕಾರ, 2022–23 ರ ಜನಸಂಖ್ಯೆಯಲ್ಲಿ ಕೇವಲ ಶೇ.1 ರಷ್ಟು ಜನರು ದೇಶದ ಸಂಪತ್ತಿನ ಶೇ.40 ರಷ್ಟನ್ನು ಹೊಂದಿದ್ದರೆ, ಕೆಳಗಿನ ಶೇ.50 ರಷ್ಟು ಜನರು ಕೇವಲ ಶೇ.6.4 ಮಾತ್ರ ಹೊಂದಿದ್ದಾರೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, (ಹಣಕಾಸು ಸ್ವತ್ತುಗಳು ತೋರಿಸುವಂತೆ) ಇಳಿಮುಖವಾಗುತ್ತಿರುವ ನಿವ್ವಳ ಉಳಿತಾಯವು ಬಹುಪಾಲು ಸಾಮಾನ್ಯ ಜನರ ಆರ್ಥಿಕ ಸಂಕಷ್ಟದ ಲಕ್ಷಣವಾಗಿದೆ. ಇದು ಪ್ರಸ್ತುತ ಸರ್ಕಾರದ ಉಳ್ಳವರ ಪರವಾದ ನೀತಿಗಳ ನೇರ ಪರಿಣಾಮವಾಗಿದೆ ಮತ್ತು ಅಂತಹ ನೀತಿಗಳನ್ನು ಹಿಮ್ಮೆಟ್ಟಿಸುವುದರಿಂದ ಮಾತ್ರ ಜನರ ಸಮಸ್ಯೆಯನ್ನು ಬಗೆಹರಿಸಬಹುದು.

(ಮೂಲ: ನ್ಯೂಸ್ ಕ್ಲಿಕ್, 05.05.2024)

# ಮುಡಾ ಹಗರಣದ ಸಮಗ್ರ ನ್ಯಾಯಾಂಗ ತನಿಖೆಗೆ

## ಎಸ್‌ಯುಸಿಐ(ಕಮ್ಯುನಿಸ್ಟ್) ಪಕ್ಷದ ಆಗ್ರಹ

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (MUDA) ನಡೆದಿರುವ ಹಗರಣವನ್ನು ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿ–ಯಾ (ಕಮ್ಯೂನಿಸ್ಟ್) ಪಕ್ಷದ ಮೈಸೂರು ಜಿಲ್ಲಾ ಸಮಿತಿಯು ತೀವ್ರವಾಗಿ ಖಂಡಿಸುತ್ತದೆ. ಹಾಗೂ ಈ ಕುರಿತು ಸಮಗ್ರವಾಗಿ ನಿಷ್ಪಕ್ಷಪಾತ ತನಿಖೆಯನ್ನು ನಡೆಸಬೇಕೆಂದು ಒತ್ತಾಯಿಸುತ್ತದೆ.

ಮೈಸೂರು ನಗರದ ಯೋಜನಾಬದ್ಧ ಅಭಿವೃದ್ಧಿಯ ಸಲುವಾಗಿಯೇ ಅಸ್ತಿತ್ವಕ್ಕೆ ತರಲಾದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು, ತನ್ನ ಪ್ರಾಥಮಿಕ ಕೆಲಸವಾದ ನಿವೇಶನರಹಿತ ಬಡವರಿಗೆ ನಿವೇಶನಗಳನ್ನು ನೀಡುವ, ನಗರದ ಯೋಜನಾ ಬದ್ಧ ಬೆಳವಣಿಗೆಯನ್ನು ಖಾತ್ರಿಪಡಿಸುವ ಬದಲು ಕೇವಲ ಭೂ ಸ್ವಾಧೀನ – ಉಳ್ಳವರಿಗೆ ಬೇಕಾಬಿಟ್ಟಿ ನಿವೇಶನ ಹಂಚಿಕೆ, ಖಾಸಗಿ ಬಡಾವಣೆಗಳ ನಕ್ಷೆ ಅಂಗೀಕಾರಕ್ಕೆ ಮಾತ್ರ ಸೀಮಿತವಾಗಿದೆ. ನಗರದ ಸುತ್ತಮುತ್ತಲೂ ತಲೆ ಎತ್ತಿರುವ ಅನಧಿಕೃತ ಬಡಾವಣೆಗಳಲ್ಲಿ ಹಾಗೆಯೇ ಮುಡಾ ಅಭಿವೃದ್ಧಿ ಪಡಿಸಿರುವ ಬಡಾವಣೆಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಇರುವುದು ಮುಡಾದ ಕಾರ್ಯದಕ್ಷತೆಗೆ ಹಿಡಿದಿರುವ ಕೈಗನ್ನಡಿಯಾಗಿದೆ.

ಬಡಾವಣೆಗಳ ಅಭಿವೃದ್ಧಿಗಾಗಿ ವಶಪಡಿಸಿಕೊಂಡ ಭೂಮಾಲೀಕ ರೈತರಿಗೆ ನಗದು ಪರಿಹಾರ ಅಥವಾ ಅಭಿವೃದ್ಧಿ ಪಡಿಸಿದ ಸದರಿ ನಿವೇಶನಗಳಲ್ಲಿ ಮುಂಚೆ 60:40 ಪ್ರಮಾಣದಲ್ಲಿ ನಿವೇಶನಗಳನ್ನು ಹಂಚಲಾಗುತ್ತಿತ್ತು. ಆದರೆ 2020 ರಲ್ಲಿ ಆ ಪ್ರಮಾಣವನ್ನು 50:50 ಎಂದು ಪರಿಷ್ಕರಿಸಲಾಯಿತು. ಸದರಿ ನಿವೇಶನಗಳ ಹಂಚಿಕೆಯಲ್ಲಿ ಅಕ್ರಮ ನಡೆದಿದೆ ಎಂದು ಜನಪ್ರತಿನಿಧಿಗಳು ಆರೋಪಿಸಿದ್ದಾರೆ. ಹಾಗೆಯೇ ಪತ್ರಿಕೆಗಳಲ್ಲೂ ವರದಿಯಾಗಿದ್ದು ಇದು ಸುಮಾರು ನಾಲ್ಕು ಸಾವಿರ ಕೋಟಿ ರೂ. ಮೊತ್ತದ ಹಗರಣ ಎಂದು ಆರೋಪಿಸಲಾಗಿದೆ. ಸದರಿ ನಿವೇಶನಗಳನ್ನು ಹಂಚುವಾಗ ರೈತರಿಂದ ವಶಪಡಿಸಿಕೊಂಡ ಜಮೀನಿನಲ್ಲಿಯೇ ನಿವೇಶನಗಳನ್ನು ಹಂಚಿಕೆ ಮಾಡಬೇಕು. ಆದರೆ ಇದುವರೆಗೂ ಪತ್ತೆಯಾಗಿರುವ ಬಹುತೇಕ ಪ್ರಕರಣಗಳಲ್ಲಿ, ಈ ನಿಯಮವನ್ನು ಉಲ್ಲಂಘಿಸಿ ನಗರದ ಪ್ರತಿಷ್ಠಿತ ಬಡಾವಣೆಗಳಲ್ಲಿ, ಬೆಲೆ ಬಾಳುವ ನಿವೇಶನಗಳನ್ನು ಹಂಚಿರುವುದು ಪತ್ತೆಯಾಗಿದೆ. ಅಲ್ಲದೇ 2020 ಕ್ಕಿಂತಲೂ ಹಿಂದೆ ವಶಪಡಿಸಿಕೊಂಡ ಭೂಮಿಯ ಮಾಲೀಕರಿಗೂ 50:50 ಅನ್ವಯಿಸಿ ನಿವೇಶನಗಳನ್ನು ನೀಡಲಾಗಿದೆ, ಬೇನಾಮಿ ಮಾಲೀಕರಿಗೆ, ಹಾಗೆಯೇ ಕೆಲವು ಪ್ರಕರಣಗಳಲ್ಲಿ ಹೆಚ್ಚುವರಿ ನಿವೇಶನಗಳನ್ನು ಸಹ ನೀಡಲಾಗಿದೆ. ಅಲ್ಲದೇ ನಾಗರಿಕ ಸೌಲಭ್ಯಗಳಿಗಾಗಿ ಮೀಸಲಾಗಿರುವ ನಿವೇಶನಗಳನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ. ಈ ಎಲ್ಲಾ ಅವ್ಯವಹಾರಗಳ ಹಿಂದೆ ಪಕ್ಷಾತೀತವಾಗಿ ಜನಪ್ರತಿನಿಧಿಗಳ, ಪ್ರಭಾವಿ ವ್ಯಕ್ತಿಗಳ ಕೈವಾಡವಿರುವುದು ರಹಸ್ಯ ಸಂಗತಿಯಲ್ಲ.

ಅಲ್ಲದೇ 2020 ರಿಂದಲೂ ಅವ್ಯವಹಾರದ ಆರೋಪಗಳು ಕೇಳಿ ಬಂದಿದ್ದರೂ ಕೇವಲ 2022–23 ಸಾಲಿನಿಂದ ಆಗಿರುವ ನಿವೇಶನಗಳ ಹಂಚಿಕೆಯನ್ನು ರದ್ದುಪಡಿಸಿರುವುದು, ಕೇವಲ ಅಧಿಕಾರಿಗಳನ್ನು ಮಾತ್ರ ವರ್ಗಾವಣೆ ಮಾಡಿ ಕೈತೊಳೆದುಕೊಂಡಿರುವ ಸರ್ಕಾರ, ಈ ಅವಧಿಯ ರಾಜಕೀಯ ನಾಮನಿರ್ದೇಶಿತ ಅಧ್ಯಕ್ಷರುಗಳ ಬಗ್ಗೆ ಏನೂ ಹೇಳದಿರುವುದು ಇನ್ನಷ್ಟು ಅನುಮಾನಗಳಿಗೆ ಎಡೆ ಮಾಡಿಕೊಡುತ್ತದೆ.

ಹೀಗಾಗಿ ಸಂಪೂರ್ಣ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಬೇಕು ಎಂದು ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷವು ಈ ಮೂಲಕ ಒತ್ತಾಯಿಸುತ್ತದೆ.

Registered Newspaper
Karmika Drushtikona RNI. KARKAN/45551/88 Reg. No. CPMG/KA/BGW-62/2021-2023. Posted at Bangalore PSO, Mysore Road, Bangalore-26 (20th & 25th of every month)

## ಪೆಟ್ರೋಲ್, ಡೀಸಲ್ ದರ ಹೆಚ್ಚಳ ಮಾಡಿರುವ ರಾಜ್ಯ ಸರ್ಕಾರದ ವಿರುದ್ಧ ರಾಜ್ಯವ್ಯಾಪಿ ಪ್ರತಿಭಟನೆ













## ಗ್ರಾಹಕರು ಮತ್ತು ಹೈನುಗಾರರ ಹಿತಾಸಕ್ತಿಯನ್ನು ಕಾಪಾಡಿ:

### ಎಸ್‌ಯುಸಿಐ(ಸಿ) ರಾಜ್ಯ ಕಾರ್ಯದರ್ಶಿ ಕೆ. ಉಮಾ ಒತ್ತಾಯ

ಕರ್ನಾಟಕ ಹಾಲು ಉತ್ಪಾದಕ ಮಹಾ ಮಂಡಳಿಯು (ಕೆಎಂಎಫ್) ನಂದಿನಿ ಹಾಲಿನ ಅರ್ಧ ಲೀಟರ್ ಹಾಗೂ 1 ಲೀಟರ್ ಪ್ಯಾಕೆಟ್ ಗೆ 50 ಎಂಎಲ್ ಹಾಲನ್ನು ಹೆಚ್ಚುವರಿ ನೀಡುವುದರೊಂದಿಗೆ ಹಾಲಿನ ದರವನ್ನು 2ರೂ. ಹೆಚ್ಚಿಸಿರುವುದಾಗಿ ಘೋಷಿಸಿದೆ. ರಾಜ್ಯದಲ್ಲಿ ಪ್ರತಿ ದಿನ 1 ಕೋಟಿ ಲೀಟರ್ ಹೆಚ್ಚು ಹಾಲು ಸಂಗ್ರಹವಾಗುತ್ತಿದ್ದು, ಉತ್ಪಾದಕರಿಂದ ಈ ಹಾಲನ್ನು ಖರೀದಿಸಬೇಕಾಗಿದೆ, ಜನರಿಗೆ 50 ಎಂಎಲ್ ಹೆಚ್ಚು ತಲುಪಿಸಿ, ಹೆಚ್ಚುವರಿ 2ರೂ. ಸಂಗ್ರಹಿಸಲಾಗುತ್ತಿದೆ ಎಂದು ಕೆಎಂಎಫ್ ಹೇಳುತ್ತಿದೆ. ಮುಖ್ಯಮಂತ್ರಿಗಳೂ ಇದನ್ನೇ ಹೇಳುತ್ತಿದ್ದಾರೆ.

ರಾಜ್ಯದಲ್ಲಿ ಹಾಲು ಉತ್ಪಾದನೆಯು ಹೆಚ್ಚಾಗಿರುವುದು ಸಂತೋಷದ ವಿಷಯ. ಹಾಗೂ ಹಾಲು ಉತ್ಪಾದಕರಿಗೆ ಆದರ ನ್ಯಾಯಯುತ ಬೆಲೆಯೂ ದೊರಕಬೇಕು. ಆದರೆ ಕೆಎಂಫ್ ನ ಈ ಪ್ರಸ್ತಾಪವು ಜನರಿಗೆ 'ಉಗುಳಲೂ ಆಗದ ನುಂಗಲೂ ಆಗದ ಬಿಸಿ ತುಪ್ಪ' ದಂತಾಗಿದೆ. ಪೆಟ್ರೋಲ್, ಡೀಸೆಲ್ ದರ ಹೆಚ್ಚಾಗಿದೆ, ತರಕಾರಿ ಹಾಗೂ ಇನ್ನಿತರ ಅಗತ್ಯ ವಸ್ತುಗಳ ದರ ಕೈಗೆ ನಿಲುಕುತ್ತಿಲ್ಲ. ಈ ಹಿನ್ನೆಲೆಯಲ್ಲಿ ಈ ಹೆಚ್ಚುವರಿ ಖರ್ಚು ಜನರನ್ನು ಮತ್ತಷ್ಟು ಕಷ್ಟಕ್ಕೆ ದೂಡುತ್ತದೆ. ಆದ್ದರಿಂದ, ಸರ್ಕಾರವು ಹಾಲಿನ ದರ ಹೆಚ್ಚಿಸದೆ ಸಂಗ್ರಹವಾದ ಹೆಚ್ಚುವರಿ 1 ಕೋಟಿ ಲೀಟರ್ ಹಾಲಿಗೆ ಸಬ್ಸಿಡಿ ನೀಡಬೇಕು ಮತ್ತು ರಿಯಾಯಿತಿ ದರದಲ್ಲಿ ಬಡಜನರಿಗೆ ದೊರಕುವಂತೆ ಕ್ರಮ ಕೈಗೊಳ್ಳಬೇಕು ತನ್ಮೂಲಕ ಏಕ ಕಾಲದಲ್ಲಿ ರಾಜ್ಯದ ಜನತೆಯ ಮತ್ತು ಹೈನುಗಾರರ ಹಿತಾಸಕ್ತಿಯನ್ನು ಕಾಪಾಡಬೇಕೆಂದು ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ(ಕಮ್ಯುನಿಸ್ಟ್) ಪಕ್ಷದ ರಾಜ್ಯ ಸಮಿತಿಯು ರಾಜ್ಯ ಸರ್ಕಾರವನ್ನು ಆಗ್ರಹಿಸುತ್ತದೆ.




### ಎಐಡಿವೈಒ ಸಂಘಟಿತ ರಾಜ್ಯಮಟ್ಟದ ಬರಹಗಾರರ ಕಮ್ಮಟ

"ಜನರ ಸಮಸ್ಯೆಗಳಿಗೆ ಧ್ವನಿಯಾಗುವ ಸತ್ವಯುತ ಲೇಖನಗಳು, ಬರಹಗಳು ಸಮಾಜದ ಬದಲಾವಣೆಯಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತವೆ" ಎಂದು ಎಸ್‌ಯುಸಿಐ(ಕಮ್ಯುನಿಸ್ಟ್) ಪಕ್ಷದ ರಾಜ್ಯ ಸಮಿತಿ ಸೆಕ್ರೆಟರಿಯೇಟ್ ಸದಸ್ಯರಾದ ಕಾಮ್ರೇಡ್ ಕೆ.ಸೋಮಶೇಖರ್ ಹೇಳಿದರು.




ತುಮಕೂರು: AIKKMSನ ರಾಜ್ಯ ವಿಸ್ತೃತ ಸಭೆಯು ಜೂನ್ 23–24ರಂದು ನಡೆಯಿತು. ಅಖಿಲ ಭಾರತ ಪ್ರಧಾನ ಕಾರ್ಯದರ್ಶಿಗಳಾದ ಕಾಮ್ರೇಡ್ ಶಂಕರ್ ಘೋಷ್ ಈ ಸಭೆಯನ್ನು ನಡೆಸಿಕೊಟ್ಟರು.




ಧಾರವಾಡ: ಸಾರಸ್ವತಪುರದಲ್ಲಿ ಕಸ ವಿಲೇವಾರಿ, ಗಟಾರ ಸ್ವಚ್ಛತೆ, ಹೊಸ ಒಳಚರಂಡಿ ಅಳವಡಿಕೆಗೆ ಆಗ್ರಹಿಸಿ ಎಸ್‌ಯುಸಿಐ(ಸಿ) ಪ್ರತಿಭಟನೆ




ಎಐಎಮ್ಎಸ್ಎಸ್ ಕರ್ನಾಟಕ ರಾಜ್ಯ ಸಮಿತಿಯು ಸಂಘಟಿಸಿದ 2 ದಿನಗಳ ವಿನ್ಯಾಸ ಮತ್ತು ಬರವಣಿಗೆ ಕಾರ್ಯಾಗಾರದಲ್ಲಿ ಸಮಾರೋಪ ಭಾಷಣ ಮಾಡಿದ ಎಸ್‌ಯುಸಿಐ(ಸಿ) ಪಕ್ಷದ ಪಾಲಿಟ್‌ಬ್ಯೂರೋ ಸದಸ್ಯರಾದ ಕಾಮ್ರೇಡ್ ಕೆ. ರಾಧಾಕೃಷ್ಣ. ವೇದಿಕೆಯಲ್ಲಿ ಎಐಎಮ್ಎಸ್ಎಸ್ ರಾಜ್ಯ ನಾಯಕರು.

Published by: K.Radhakrishna on behalf of SOCIALIST UNITY CENTRE OF INDIA-COMMUNIST, Karnataka State Committee, No.31, 3rd Cross, Malleswaram, Bangalore-03 Ph:080-23561443. E-mail:karmikadrushtikona@gmail.com and Printed by him at Balaji Publications, No.16/2, Bychatura Road, Magadi Town, Magadi-562120 Website: www.sucicommunist.org EDITOR: K.RADHAKRISHNA